# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570006

**ದಿನಾಂಕ: 07.08.2026** ರಂದು **ಅಪರಾಹ್ನ 3.30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಎ.ಪಿ. ಜ್ಞಾನ ಪ್ರಕಾಶ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ವ್ಯವಸ್ಥಾಪನಾ ಮಂಡಳಿಯ **186ನೇ** ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎ. ಪಿ. ಜ್ಞಾನ ಪ್ರಕಾಶ್**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ. ನವೀನ್ ಕುಮಾರ್ ಎಸ್.ಕೆ.**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ರಾಮನಾಥಂ ನಾಯಿಡು**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಅಪರ ಮುಖ್ಯ ಕಾರ್ಯದರ್ಶಿಗಳು** ರವರ ಪರವಾಗಿ<br>ಶ್ರೀ. ಯತೀಶ್, ಉಪ ಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560001<br>**(ಸದರಿ ಸಭೆಗೆ ಆನ್‌ಲೈನ್ ಮುಖಾಂತರ ಹಾಜರಿರುತ್ತಾರೆ.)** |
| **ಡಾ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು<br>ಗೂಂಜ್, ಕಲಬುರಗಿ – 585104 | **ಡಾ. ಮಹೇಶ್ .ಎಸ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಸೋಸಲೆ ಗ್ರಾಮ ಮತ್ತು ಅಂಚೆ,<br>ಟಿ. ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ - 571120. |
| **ಶ್ರೀಮತಿ. ಮಾಲತಿ .ಟಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 355/1, ಮೊದಲ ಮಹಡಿ,<br>9ನೇ ಕ್ರಾಸ್, ಬಾಪೂಜಿ ಬಡಾವಣೆ,<br>ಚಂದ್ರಾ ಲೇಔಟ್, ಬೆಂಗಳೂರು - 560040. | **ಕುಮಾರಿ. ಪ್ರಾಚಿ ಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. ಇ–402, ಡಾ. ವಿಷ್ಣುವರ್ಧನ್ ರೋಡ್,<br>ಬನಶಂಕರಿ, ಬೆಂಗಳೂರು - 560098. |
| **ಶ್ರೀ. ರಮೇಶ್ ಗುಬ್ಬೇವಾಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಗುಬ್ಬೇವಾಡ, ಸಿಂಧಗಿ ತಾಲ್ಲೂಕು,<br>ವಿಜಯಪುರ ಜಿಲ್ಲೆ. | **ಶ್ರೀ ಮಂಜು .ಆರ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಹಳ್ಳಿದಿಡ್ಡಿ ಗ್ರಾ., ಯೇಚಗಳ್ಳಿ ಅಂಚೆ,<br>ನಂಜನಗೂಡು ತಾಲ್ಲೂಕು,<br>ಮೈಸೂರು ಜಿಲ್ಲೆ - 571302. |

ಕುಲಪತಿಗಳು

ಕುಲಸಚಿವರು

| ಅನುಪಸ್ಥಿತರು | |
|---|---|
| **ಅಪರ ಮುಖ್ಯ ಕಾರ್ಯದರ್ಶಿಗಳು**<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ)<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು - 560001. | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು - 570009 |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | |

**ಮಾನ್ಯ ಕುಲಸಚಿವರ ಸ್ವಾಗತದೊಂದಿಗೆ ಸಭೆಯು ಪ್ರಾರಂಭವಾಯಿತು.**

**ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಆಗಮಿಸಿರತಕ್ಕ ಮಾನ್ಯ ಕುಲಪತಿಗಳಾದ ಪ್ರೊ. ಎ. ಪಿ. ಜ್ಞಾನ ಪ್ರಕಾಶ್ ರವರಿಗೆ ವ್ಯವಸ್ಥಾಪನ ಮಂಡಳಿ ಪರವಾಗಿ ಮಾನ್ಯ ಸದಸ್ಯರುಗಳು ಸನ್ಮಾನಿಸಲು ಕುಲಸಚಿವರು ತಿಳಿಸಿದರು.**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ಮಾನ್ಯ ಕುಲಪತಿಗಳಾದ ಪ್ರೊ. ಎ. ಪಿ. ಜ್ಞಾನ ಪ್ರಕಾಶ್ ರವರನ್ನು ಸನ್ಮಾನಿಸಿದರು.**

186ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳ ಬಗ್ಗೆ ಮಾನ್ಯ ಕುಲಪತಿಗಳು ಕ್ರಮವಾಗಿ ಸಭೆಗೆ ವಿವರಿಸಿದರು.

**ವಿಷಯ ಸಂಖ್ಯೆ: 186.01 (ಅ)**

**ವಿಷಯ: ದಿನಾಂಕ: 18.04.2026ರಂದು ನಡೆದ ವ್ಯವಸ್ಥಾಪನ ಮಂಡಳಿಯ 185ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ;**

– * –

ಕುಲಪತಿಗಳು ಮಾತನಾಡಿ ದಿನಾಂಕ: 18.04.2026ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 185ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿದ್ದ ವಿಷಯಗಳ ಬಗ್ಗೆ ಕೈಗೊಂಡ ತೀರ್ಮಾನಗಳಲ್ಲಿ ಹಲವು ವಿಷಯಗಳ ತೀರ್ಮಾನಗಳ ಬಗ್ಗೆ ಸದಸ್ಯರುಗಳು ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅದರಲ್ಲಿ ವಿಷಯ ಸಂಖ್ಯೆ: 185.06ರ ಬಗ್ಗೆ ವಿವರಗಳನ್ನು ತಿಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

*****

<u>ತೀರ್ಮಾನ:</u> **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 18.04.2026 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 185ನೇ ಸಾಮಾನ್ಯ ಸಭೆಯ ನಡಾವಳಿಯ ಕೆಲವು ತೀರ್ಮಾನಗಳ ಬಗೆಗಿನ ಆಕ್ಷೇಪಣೆಗಳನ್ನು ಹೊರತುಪಡಿಸಿ ಇತರೆ ವಿಷಯಗಳ ನಡಾವಳಿಯನ್ನು ಸ್ಥಿರೀಕರಿಸಿ, ಮುಂದುವರೆದಂತೆ ಸದಸ್ಯರು ವ್ಯಕ್ತಪಡಿಸಿರುವ ಆಕ್ಷೇಪಣಾ ವಿಷಯಗಳನ್ನು ವಿಷಯ ಸಂಖ್ಯೆ: 186.01 (ಆ) ರಲ್ಲಿ ಚರ್ಚಿಸಿ ತೀರ್ಮಾನಿಸಲಾಗಿದೆ.**

#####

**ವಿಷಯ ಸಂಖ್ಯೆ: 186.01 (ಆ)**

**ವಿಷಯ:** **ದಿನಾಂಕ: 18.04.2026ರಂದು ನಡೆದ ವ್ಯವಸ್ಥಾಪನ ಮಂಡಳಿಯ 185ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ಅನುಸರಣಾ ವರದಿ ಬಗ್ಗೆ.**

– * –

Gnana prakash

ಕುಲಪತಿಗಳು

ಕುಲಸಚಿವರು

1) ವಿಷಯ: **2025–26ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಅನುಮೋದನೆ ಪಡೆಯುವ ಕುರಿತು:**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

<u>ತೀರ್ಮಾನ</u> : ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2025–26ರ ಜುಲೈಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಸರ್ಕಾರದ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜನ್ಸಿಯ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆನೀಡಲಾದ ಜಾಹೀರಾತುಗಳ ಸಂಬಂಧದಲ್ಲಿ ವ್ಯಯಿಸಲ್ಪಟ್ಟ ರೂ. 59,24,898/–ಗಳಿಗೆ ಸಭೆಯು ಅನುಮೋದನೆ ನೀಡಿತು.

ವಿಷಯ ಸಂಖ್ಯೆ: 185.02ರ ವಿಷಯಕ್ಕೆ ಈ ಮೇಲ್ಕಂಡಂತೆ ತೀರ್ಮಾನವಾಗಿದ್ದು, ಇದಕ್ಕೆ ಹಲವು ಸದಸ್ಯರುಗಳು ಆಕ್ಷೇಪಣೆಗಳನ್ನು ಹಾಕಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ವಾರ್ಷಿಕ ಎರಡು ಬಾರಿ ಪ್ರವೇಶಾತಿಯನ್ನು ನಡೆಸುತ್ತಿದ್ದು, ಅದರಲ್ಲಿ ಜನವರಿ ಹಾಗೂ ಜುಲೈ ಆವೃತ್ತಿಗಳಲ್ಲಿ ಪ್ರವೇಶಾತಿಗೆ ಅವಕಾಶಗಳನ್ನು ಕಲ್ಪಿಸಲಾಗಿದ್ದು, ಅದರಂತೆ ರಾಜ್ಯಾದ್ಯಂತ ನಮ್ಮ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯಕ ಕೇಂದ್ರಗಳಿದ್ದು, ಆಯಾ ಪ್ರಾದೇಶಿಕವಾರು ವಿದ್ಯಾರ್ಥಿಗಳು ಪ್ರವೇಶಾತಿ ಕಲ್ಪಿಸಿಕೊಳ್ಳಲು ಅನುಕೂಲವಾಗುವಂತೆ ರಾಜ್ಯದ ಮತ್ತು ಪ್ರಾದೇಶಿಕ ಪ್ರಾಂತ್ಯದ ಪತ್ರಿಕೆಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಪ್ರವೇಶಾತಿಗೆ ಸಂಬಂಧಪಟ್ಟಂತೆ ಜಾಹೀರಾತುಗಳನ್ನು ನೀಡಲಾಗುತ್ತಿದೆ. ಇವುಗಳನ್ನು ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಸರ್ಕಾರದ ಡಿಐಪಿ ದರಗಳಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜೆನ್ಸಿಗಳ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆ ನೀಡಲಾದ ಜಾಹೀರಾತು ವೆಚ್ಚ ರೂ: 59,24,898/–ಗಳಾಗಿದ್ದು, ಇವುಗಳನ್ನು ನಿಯಮಾವಳಿಗಳ ಪ್ರಕಾರ ಮಾಡಲಾಗಿದೆಯೇ ಎಂದು ವಿವರಗಳನ್ನು ಪರಿಶೀಲಿಸಲಾಗಿದೆ ಎಂದು ಮಾನ್ಯ ಕುಲಪತಿಗಳು ವಿವರಿಸಿದರು.

ಶ್ರೀ. ಯತೀಶ್ ರವರು ಮಾತನಾಡಿ Social Media ದಲ್ಲಿ ಪ್ರಚಾರ ಹಮ್ಮಿಕೊಳ್ಳಲು ಯಾವ ರೀತಿಯ ಕ್ರಮ ವಹಿಸುತ್ತಿದ್ದಾರೆಂಬ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದ, Audio-Video ಸ್ಟುಡಿಯೋದವರು youtube, facebookಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರವೇಶಾತಿಗಳ ಪ್ರಚಾರಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

<u>ತೀರ್ಮಾನ</u> : ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2025–26ರ ಜುಲೈ ಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು ವೆಚ್ಚದ ಪ್ರಕ್ರಿಯೆಗೆ ಸರ್ಕಾರದ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜನ್ಸಿಯ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆ ನೀಡಲಾದ ಜಾಹೀರಾತು ವೆಚ್ಚ ರೂ. 59,24,898/–ಗಳನ್ನು ಪಾವತಿಸಲು ಸಭೆಯು ಅನುಮೋದಿಸಿತು.

#####

**ವಿಷಯ ಸಂಖ್ಯೆ: 185.06ರ ವಿಷಯವಾದ: ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಖರೀದಿಸಲು ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಅರ್ಹ ಟೆಂಡದಾರರನ್ನು ಅಂತಿಮಗೊಳಿಸುವ ಬಗ್ಗೆ.**

– * –

ಕುಲಪತಿಗಳು ಕುಲಸಚಿವರು

**ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.**

**ತೀರ್ಮಾನ :** **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಟೆಂಡರ್ ನಲ್ಲಿ ಅರ್ಹತೆ ಪಡೆದ ಎಲ್-1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ಒಂದು ವರ್ಷದ ಮೂರು ತಿಂಗಳ ಅವಧಿಗೆ ದರ ಕರಾರು ಒಪ್ಪಂದ ಮಾಡಿಕೊಂಡು, ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಎಲ್ – 1 ದರಗಳಲ್ಲಿ ಖರೀದಿಸಲು ಸಭೆಯು ಅನುಮೋದಿಸಿತು.**

ವಿಷಯ ಸಂಖ್ಯೆ: 185.06ರ ವಿಷಯಕ್ಕೆ ಈ ಮೇಲ್ಕಂಡಂತೆ ತೀರ್ಮಾನವಾಗಿದ್ದು, ಇದಕ್ಕೆ ಹಲವು ಸದಸ್ಯರುಗಳು ಆಕ್ಷೇಪಣೆಗಳನ್ನು ಹಾಕಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಮುಂದುವರೆದು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ 2 ಬಾರಿ ಪ್ರವೇಶಾತಿ ಮತ್ತು ಪರೀಕ್ಷೆಗಳು ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಕೆಲಸ-ಕಾರ್ಯಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಇವುಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಇವುಗಳನ್ನು ನಿಯಮಾನುಸಾರ ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವವರಿಂದ ಎಲ್-1 ರವರು ನಮೂದು ಮಾಡಿರುವ ದರಗಳಲ್ಲಿ ಖರೀದಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ. ಯತೀಶ್ ರವರು ಮಾತನಾಡಿ ಈ ಹಿಂದೆ ಈ ಟೆಂಡೆರ್‌ನಲ್ಲಿ ಎಷ್ಟು ಜನ ಭಾಗವಹಿಸಿದ್ದರು ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡಲು ಟೆಂಡೆರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಹಲವರು ಭಾಗವಹಿಸಿದ್ದು, Technical ಬಿಡ್‌ನಲ್ಲಿ ಮೂವರು ಮಾತ್ರ ಹಾಜರಾಗಿದ್ದು, ಮುಂದಿನ Finance ಬಿಡ್‌ನಲ್ಲಿ ಇಬ್ಬರು ಮಾತ್ರ ಹಾಜರಾಗಿದ್ದು, ಅದರಲ್ಲಿ M/s. Sumukha Office Solutions, Mysuru ಇವರು ಅರ್ಹರಾಗಿ ಎಲ್- 1 ಆಗಿರುತ್ತಾರೆ ಎಂಬ ವಿವರಗಳನ್ನು ಕಡತದಲ್ಲಿ ಪರಿಶೀಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

**ತೀರ್ಮಾನ :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಟೆಂಡರ್‌ನಲ್ಲಿ ಅರ್ಹತೆ ಪಡೆದ ಎಲ್-1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ಒಂದು ವರ್ಷದ ಅವಧಿಗೆ ದರ ಕರಾರು ಒಪ್ಪಂದ ಮಾಡಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಬೇಕಾಗಿರುವ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಎಲ್-1 ರವರ ದರಗಳಲ್ಲಿ ಖರೀದಿಸಲು ಸಭೆಯು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 185.08ರ ವಿಷಯವಾದ:** ಹಣಕಾಸು ಸಮಿತಿಯ 93ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ

– * –

**ಹಣಕಾಸು ಸಮಿತಿ ವಿಷಯ ಸಂಖ್ಯೆ: 93.07ಕ್ಕೆ ಸಂಬಂಧಪಟ್ಟಂತೆ:-**

**ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ, ಸರ್ಕಾರದಲ್ಲಿ Quality and Cost Based Selection (QCBS) – ಏತಕ್ಕೆ ಮಾಡಿರುತ್ತಾರೆ. ಸರ್ಕಾರದ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ಕಾರ್ಯನಿರ್ವಹಿಸುವುದು ಸೂಕ್ತವೆಂದು ತಿಳಿಸಿದರು.**

Gnana prakash
ಕುಲಪತಿಗಳು

ಕುಲಸಚಿವರು

**ಹಣಕಾಸು ಸಮಿತಿ ವಿಷಯ ಸಂಖ್ಯೆ: 93.08ಕ್ಕೆ ಸಂಬಂಧಪಟ್ಟಂತೆ:-**

**ಹಣಕಾಸು ಇಲಾಖೆಯ ಉಪಕಾರ್ಯದರ್ಶಿಗಳು ಮಾತನಾಡಿ, ಸರ್ಕಾರದಲ್ಲಿ QCBS ಏತಕ್ಕೆ ಮಾಡಿರುತ್ತಾರೆ. ಸರ್ಕಾರದ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ತಾಂತ್ರಿಕ ಬಿಡ್ ಮತ್ತು ವಿತ್ತೀಯ ಬಿಡ್‌ಗಳ ಪ್ರಕಾರ ಯಾರು ಅರ್ಹರಾಗಿರುತ್ತಾರೆ ಅವರುಗಳಿಗೆ ಮಾತ್ರ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು.**

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಹಣಕಾಸು ಸಮಿತಿಯ 93ನೇ ಸಭೆಯ ನಡವಳಿಯ ಕೆಲವು ವಿಷಯಗಳ ಬಗ್ಗೆ ಚರ್ಚೆಯಾಗಿ ಮೇಲ್ಕಂಡಂತೆ ತೀರ್ಮಾನಿಸಲಾಗಿರುತ್ತದೆ, ಉಳಿದ ಹಣಕಾಸು ಸಮಿತಿಯ ವಿಷಯಗಳ ತೀರ್ಮಾನಗಳನ್ನು ಸಭೆಯು ಅನುಮೋದಿಸಿತು.**

#####

ವಿಷಯ ಸಂಖ್ಯೆ: 185.08ರ ವಿಷಯಕ್ಕೆ ಈ ಮೇಲ್ಕಂಡಂತೆ ತೀರ್ಮಾನವಾಗಿದ್ದು, ಇದಕ್ಕೆ ಹಲವು ಸದಸ್ಯರುಗಳು ಆಕ್ಷೇಪಣೆಗಳನ್ನು ಹಾಕಿರುತ್ತಾರೆಂದು ಕುಲಪತಿಗಳು ಸಭೆಗೆ ತಿಳಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯದ ಸೆಕ್ಯುರಿಟಿ ಮತ್ತು ಕ್ಲಿನಿಂಗ್‌ಗೆ ಸಂಬಂಧಪಟ್ಟಂತೆ, ಈಗಾಗಲೇ ಅವುಗಳನ್ನು ಪರಿಶೀಲಿಸಲಾಗಿರುವುದರಿಂದ ಎಲ್-1 ರವರುಗಳಿಗೆ ಆದೇಶ ನೀಡಿ ಅವರುಗಳಿಂದ ಕೆಲಸ ಮಾಡಿಸಲಾಗುತ್ತಿದೆ. ಪ್ರತಿಯೊಂದು ಪ್ರಾದೇಶಿಕ ಕೇಂದ್ರಗಳಲ್ಲಿ ಸೆಕ್ಯುರಿಟಿಗಳು ಇರುತ್ತಾರೆ ಅವರಿಂದಲೂ ಕೆಲಸಗಳನ್ನು ಮಾಡಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ. ಮಹೇಶ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಯಾರಿಗೆ ನೀವು ಸೆಕ್ಯುರಿಟಿ ಎಲ್-1 ನಲ್ಲಿ ಬಂದಿರುತ್ತಾರೆ. ಅವರುಗಳು ಸೆಕ್ಯುರಿಟಿ ಗಾರ್ಡ್‌ಗಳಿಗೆ ಸರಿಯಾದ ರೀತಿಯಲ್ಲಿ ವೇತನವನ್ನು ನೀಡುತ್ತಿಲ್ಲ. ಅವರುಗಳಿಗೆ ಇ.ಎಸ್.ಐ ಸೌಲಭ್ಯಗಳು ಹಾಗೂ ನಿಯಮಾನುಸಾರ ನೀಡಬೇಕಾಗಿರುವ ಸವಲತ್ತುಗಳನ್ನು ನೀಡದೆ ಅವರುಗಳಿಗೆ 12 ಗಂಟೆ ಕಾಲ ದುಡಿಮೆ ಮಾಡಿಸಿಕೊಳ್ಳುತ್ತಿದ್ದಾರೆಂದು ಸಭೆಗೆ ತಿಳಿಸಿದರು.

ಸದ್ಯರುಗಳಾದ ಶ್ರೀಮತಿ. ಮಾಲತಿ .ಟಿ, ಶ್ರೀಮತಿ. ಪ್ರಾಚಿ ಗೌಡ, ಶ್ರೀ. ರಮೇಶ್ ಗುಬ್ಬೇವಾಡ, ಡಾ. ಬಿ.ಜಿ. ಪಾಟೀಲ್ ಮತ್ತು ಶ್ರೀ. ಮಂಜು .ಆರ್ ರವರು ಧ್ವನಿಗೂಡಿಸಿದರು. ಈ ಬಗ್ಗೆ ಸೆಕ್ಯುರಿಟಿಗಳನ್ನು ಕರೆದು ಮಾಹಿತಿ ಪಡೆದು ಮುಂದಿನ ಕ್ರಮವಹಿಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇದರ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆಯವರು ಮಾತನಾಡಿ QCBS ಪ್ರಕಾರ Housekeeping & Security ಅವರುಗಳಿಗೆ Least cost basis ಮಾಡಬೇಕು. ಅವರುಗಳಿಗೆ QCBS ನಿಯಮಾವಳಿಗಳು ಬರುವುದಿಲ್ಲವೆಂದರು. ವಿಶ್ವವಿದ್ಯಾನಿಲಯದಲ್ಲಿ ಟೆಂಡರ್‌ಗಳನ್ನು ಒಂದು ವರ್ಷಕ್ಕೆ ಮಾತ್ರ ಮಾಡಬೇಕು ಎಂದು ಸಭೆಗೆ ತಿಳಿಸಿದರು.

**ಮಾನ್ಯ ಕುಲಪತಿಗಳು ಮಾತನಾಡಿ, 93.07 ಮತ್ತು 93.08ಗೆ ಸಂಬಂಧಪ್ಷಂತೆ ಮುಂದಿನ ದಿನಗಳಲ್ಲಿ ಸರ್ಕಾರದ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲಾಗುವುದೆಂದು ತಿಳಿಸಿದರು.**

**ಈ ಮೇಲ್ಕಂಡ ಎರಡೂ ವಿಷಯಗಳಿಗೆ – ಅಂದರೆ ವಿಷಯ ಸಂಖ್ಯೆ: 93.07 ಮತ್ತು 93.08ರ ತೀರ್ಮಾನ ಈ ಕೆಳಕಂಡಂತಿದೆ.**

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಮುಂದಿನ ದಿನಗಳಲ್ಲಿ ಸರ್ಕಾರಿ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ತಾಂತ್ರಿಕ ಮತ್ತು ವಿತ್ತೀಯ ಬಿಡ್‌ನಲ್ಲಿ ಅರ್ಹರಾದವರುಗಳಿಗೆ ಮಾತ್ರ ನೀಡಲು ಸಭೆಯು ತೀರ್ಮಾನಿಸಿತು.**

**ಕುಲಪತಿಗಳು** **ಕುಲಸಚಿವರು**

ವಿಷಯ ಸಂಖ್ಯೆ: 185.09ರ ವಿಷಯವಾದ: ಶ್ರೀಮತಿ ಲಕ್ಷ್ಮೀ. ಟಿ.ಎಸ್ W/o ಲೇಟ್ ಸಿ.ಪಿ ಶಿವಕುಮಾರ್ ಇವರು ಅನುಕಂಪದ ಆಧಾರದ ಮೇಲೆ ತಮ್ಮ ಮಗನಿಗೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಪತ್ರದ ಬಗೆಗೆ.

ತೀರ್ಮಾನ:

ಸದರಿ ವಿಷಯದ ಬಗ್ಗೆ ಕಾನೂನು ತಜ್ಞರಿಂದ ಅಭಿಪ್ರಾಯ ಪಡೆದು ಕ್ರಮವಹಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

ಕ್ರಮ ಸಂಖ್ಯೆ: 2 – ಶ್ರೀಮತಿ. ಮಾಲತಿ .ಟಿ ರವರು ಮಾತನಾಡಿ ಕರಾಮುವಿಯಲ್ಲಿ ಹೊಸದಾಗಿ ನೇಮಕವಾದ ನೌಕರರುಗಳಿಗೆ ಪರೀಕ್ಷಾರ್ಥಿ ಸೇವಾ ಅವಧಿಯನ್ನು 5 ವರ್ಷದಿಂದ 2 ವರ್ಷಕ್ಕೆ ಸೀಮಿತಗೊಳಿಸುವ ಬಗ್ಗೆ.

ತೀರ್ಮಾನ: ಕರಾಮುವಿಯಲ್ಲಿ ಹೊಸದಾಗಿ ನೇಮಕವಾದ ನೌಕರರುಗಳಿಗೆ ಪರೀಕ್ಷಾರ್ಥಿ ಸೇವಾ ಅವಧಿಯನ್ನು 5 ವರ್ಷದಿಂದ 2 ವರ್ಷಕ್ಕೆ ಸೀಮಿತಗೊಳಿಸಲು ತೀರ್ಮಾನಿಸಲಾಯಿತು.

#####

ಕ್ರಮ ಸಂಖ್ಯೆ: 3 – ಶ್ರೀ. ಕೆ. ಹರೀಶ್ ಗೌಡ ರವರು ಮಾತನಾಡಿ ಕರಾಮುವಿಯಲ್ಲಿ 10 ವರ್ಷದಿಂದ ಸೇವೆ ಸಲ್ಲಿಸಿರುವ 19 ನೌಕರರುಗಳಿಗೆ ಯಾವ ಕಾರಣಕ್ಕೆ ಹೆಚ್.ಆರ್.ಎ ನೀಡಿರುವುದಿಲ್ಲವೆಂದು ಕೇಳಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಇವರುಗಳು ತಾತ್ಕಾಲಿಕ ನೌಕರರೇ ಅಥವಾ ಖಾಯಂ ನೌಕರರೇ ಎಂಬುದು ತಿಳಿದುಬಂದಿರುವುದಿಲ್ಲ. ತಾತ್ಕಾಲಿಕ ನೌಕರರುಗಳಾಗಿದ್ದರೆ ಅವರುಗಳಿಗೆ ಯಾವ ಆಧಾರದ ಮೇಲೆ ಹೆಚ್.ಆರ್.ಎ ನೀಡಲಾಗುತ್ತಿದೆ. ಸರ್ಕಾರದ ಆದೇಶದ ಅನುಸಾರ ಖಾಯಂ ನೌಕರರುಗಳಿಗೆ ಸರ್ಕಾರದ ಆದೇಶದ ಅನುಸಾರ ಹೆಚ್.ಆರ್.ಎ ನೀಡಲಾಗುತ್ತದೆ. ಇದಕ್ಕೆ ನನ್ನ ವಿರೋಧವಿದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು, ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರದ ನೌಕರರುಗಳಿಗೆ ಯಾವ ರೀತಿಯಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ ಹಾಗೂ ವೇತನವನ್ನು ಯಾವ ರೀತಿಯಲ್ಲಿ ನಿಗಧಿ ಮಾಡಲಾಗಿದೆ. ಈ ಬಗ್ಗೆ ಪೂರ್ಣ ಮಾಹಿತಿಯನ್ನು ಶಿಕ್ಷಣ ಇಲಾಖೆಗೆ ತಂದು ಪೂರ್ಣ ವಿವರಗಳನ್ನು ಸಲ್ಲಿಸಿ ಅನುಮೋದನೆ ಪಡೆಯುವುದು ಸೂಕ್ತವಾಗಿರುತ್ತದೆಂದು ತಿಳಿಸಿದರು.

ವಿಶ್ವವಿದ್ಯಾನಿಲಯದ ಅವಶ್ಯಕತೆಗೆ ಅನುಗುಣವಾಗಿ ಈ ಹಿಂದೆ 10 ವರ್ಷ ಸೇವೆ ಸಲ್ಲಿಸಿದ್ದವರಿಗೆ ವ್ಯವಸ್ಥಾಪನ ಮಂಡಳಿ ತೀರ್ಮಾನದ ಅನ್ವಯ ಅವರುಗಳ ಸೇವೆಯನ್ನು ಪರಿಗಣಿಸಿ ಹೆಚ್.ಆರ್.ಎ ಸೌಲಭ್ಯವನ್ನು ನೀಡಲಾಗುತ್ತಿದ್ದು, ಅದರಂತೆ ಕ್ರಮವಹಿಸಲಾಗುವುದೆಂದು ಕುಲಪತಿಗಳು ಸಭೆಗೆ ತಿಳಿಸಿದರು.

ತೀರ್ಮಾನ: ವಿಷಯ ಸಂಖ್ಯೆ: 186.01 (ಅ) ರ ಅನುಸರಣಾ ವರದಿಗಳಲ್ಲಿ ಕೆಲವು ತೀರ್ಮಾನಗಳು ಬದಲಾಗಿದ್ದು, ಅದರಂತೆ ಅಳವಡಿಸಿಕೊಳ್ಳಲು ಮತ್ತು ಉಳಿದ ವಿಷಯಗಳ ತೀರ್ಮಾನಗಳ ಬಗ್ಗೆ ಕೈಗೊಂಡ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

#####

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ: 186.02

ವಿಷಯ: **Karnataka Science and Technology Academy (KSTA), ಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸದಸ್ಯತ್ವನ್ನು ನೋಂದಾಯಿಸಿಕೊಳ್ಳುವ ಬಗ್ಗೆ.**

– * –

Prof. Rajasab A.H., Chairman, Karnataka Science and Technology Academy (KSTA) ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಿಗೆ ದಿನಾಂಕ: 10.07.2025ರ (ಪತ್ರದ ಪ್ರತಿ ಲಗತ್ತಿಸಲಾಗಿದೆ) ಪತ್ರದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು KSTA ಯ ಸಾಂಸ್ಥಿಕ ಸದಸ್ಯತ್ವ ಯೋಜನೆಯಲ್ಲಿ ಸದಸ್ಯರಾಗಿ ನೋಂದಾಯಿಸಿಕೊಳ್ಳುವಂತೆ ಹಾಗೂ ಈ ಸಂಬಂಧ ಸದಸ್ಯತ್ವ ಶುಲ್ಕದ ಮೊತ್ತ ರೂ. 1,00,000/– ಗಳನ್ನು ಮತ್ತು ಸದರಿ ಸಂಸ್ಥೆಯ ಸದಸ್ಯತ್ವವು 10 ವರ್ಷಗಳ ಅವಧಿಗೆ ಮಾತ್ರ ಮಾನ್ಯವಾಗಿರುತ್ತದೆ. ಹಾಗೆಯೇ ಪ್ರತಿ 10 ವರ್ಷಗಳಿಗೊಮ್ಮೆ ನವೀಕರಿಸಲು ಪ್ರತಿ ಬಾರಿ ರೂ. 1,00,000/– ಗಳನ್ನು ನವೀಕರಣ ಶುಲ್ಕವಾಗಿ ಪಾವತಿಸಬೇಕಾಗಿರುತ್ತದೆಂದು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಸಂಬಂಧ Karnataka Science and Technology Academy (KSTA) ಯ ಸಾಂಸ್ಥಿಕ ಸದಸ್ಯತ್ವ ಯೋಜನೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸದರಿ ಸಂಸ್ಥೆಗಯ ಸದಸ್ಯತ್ವವನ್ನು ಪಡೆಯಲು ರೂ. 1,00,000/– ಗಳನ್ನು ಸದಸ್ಯತ್ವದ ಶುಲ್ಕವನ್ನಾಗಿ ಪಾವತಿಸಲು ಅರ್ಜಿಯಲ್ಲಿ ಸಲ್ಲಿಸಲಾಗಿರುವ ಬ್ಯಾಂಕ್ ಖಾತೆಗೆ ಜಮಾ ಮಾಡುವುದರ ಬಗ್ಗೆ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸುವಂತೆ ಮಾನ್ಯ ಕುಲಪತಿಗಳು ದಿನಾಂಕ:27.06.2026ರಂದು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಸದರಿ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ Karnataka Science and Technology Academy (KSTA) ಸದಸ್ಯತ್ವ ಶುಲ್ಕದ ಮೊತ್ತ ರೂ. 1,00,000/– **(ರೂ. ಒಂದು ಲಕ್ಷ ರೂಪಾಯಿಗಳು ಮಾತ್ರ)** ಗಳನ್ನು ಪಾವತಿ ಮಾಡಬೇಕಾಗಿದ್ದು, ಅನಂತರ ನವೀಕರಣವನ್ನು 10 ವರ್ಷಗಳಿಗೊಮ್ಮೆ ಮಾಡಲು ಅದಕ್ಕೆ ಪ್ರತಿ ಬಾರಿ ರೂ. 1,00,000/– **(ರೂ. ಒಂದು ಲಕ್ಷ ರೂಪಾಯಿಗಳು ಮಾತ್ರ)** ಗಳನ್ನು ನವೀಕರಣ ಶುಲ್ಕವಾಗಿ ಪಾವತಿಸಬೇಕಾಗಿರುತ್ತದೆಂದು ಸಭೆಗೆ ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, Chairman, Karnataka Science and Technology Academy (KSTA) ಸದಸ್ಯತ್ವ ಶುಲ್ಕದ ಮೊತ್ತ ರೂ.1,00,000/– (ರೂ. ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ಮತ್ತು ಸದರಿ ಸಂಸ್ಥೆಯ ಸದಸ್ಯತ್ವವು 10 ವರ್ಷಗಳ ಅವಧಿಗೆ ಮಾತ್ರ ಮಾನ್ಯವಾಗಿದ್ದು, ಪ್ರತಿ 10 ವರ್ಷಗಳಿಗೊಮ್ಮೆ ನವೀಕರಿಸಲು ರೂ. 1,00,000/– (ರೂ. ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ನವೀಕರಣ ಶುಲ್ಕವಾಗಿ ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ವಿಷಯ ಸಂಖ್ಯೆ: 186.03

ವಿಷಯ: **Complaint of K.B.Praveena, Former Registrar, KSOU, regarding events that occurred in his office on 18.03.2025- regದ ವಿಚಾರಣೆ ನಡೆಸುವ ಕುರಿತು.**

ಉಲ್ಲೇಖ: **Under Secretary to Governor (u) Letter No: GS 04 KOM 2025 date:20.02.2026.**

– * –

ಕುಲಪತಿಗಳು

ಕುಲಸಚಿವರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ: 18.03.2025ರಂದು ನಿಕಟಪೂರ್ವ ಕುಲಸಚಿವರಾದ ಪ್ರೊ. ಕೆ.ಬಿ.ಪ್ರವೀಣ, ಇವರೊಂದಿಗೆ ನಡೆದ ಅಹಿತಕರ ಘಟನೆಯ ಬಗೆಗೆ ಕೂಲಂಕುಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ರಾಜ್ಯಪಾಲರ ಅಧೀನ ಕಾರ್ಯದರ್ಶಿಯವರು ದಿನಾಂಕ:03.07.2025 ರಲ್ಲಿ ಆದೇಶಿಸಿರುತ್ತಾರೆ,

ಈ ಸಂಬಂಧವಾಗಿ ದಿನಾಂಕ: 18.03.2025ರಂದು ನಿಕಟಪೂರ್ವ ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಇವರೊಂದಿಗೆ ನಡೆದ ಅಹಿತಕರ ಘಟನೆಯ ಬಗೆಗೆ ಕೂಲಂಕುಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ದಿನಾಂಕ:19.07.2025ರಂದು ಸಮಿತಿಯನ್ನು ರಚಿಸಲಾಗಿತ್ತು.

ಸದರಿ ಸಮಿತಿಯ ದಿನಾಂಕ: 06.08.2025ರ ವರದಿಯಲ್ಲಿ ಸದರಿ ವಿಚಾರದ ಬಗೆಗೆ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲು ಇಲಾಖಾ ವಿಚಾರಣೆಯನ್ನು ನಿವೃತ್ತ ನ್ಯಾಯಾಧೀಶರ ಮೂಲಕ ನಡೆಸಿ ಕ್ರಮವಹಿಸಲು ಶಿಫಾರಸ್ಸು ಮಾಡಲಾಗಿರುತ್ತದೆ.

ಸಮಿತಿಯ ಶಿಫಾರಸ್ಸಿನಂತೆ, ಡಾ. ಜಗದೀಶ್ ಬಾಬು ಹೆಚ್.ಕೆ, ಸಹಾಯಕ ಪ್ರಾಧ್ಯಾಪಕರು (ಅಮಾನತ್ತು), ಶ್ರೀ ಪ್ರದೀಪ್ ಗಿರಿ.ಎಸ್, ಉಪಕುಲಸಚಿವ(ಸ್ವಪ್ರ), ಪರೀಕ್ಷಾ ವಿಭಾಗ, ಶ್ರೀ ಪುಟ್ಟಸ್ವಾಮಿ. ಸಿ.ಕೆ, ಅಧೀಕ್ಷಕರು, ಅತಿಥಿ ಗೃಹ/ಪರೀಕ್ಷಾ ವಿಭಾಗ ಮತ್ತು ಶ್ರೀಮತಿ ಗೀತ, ಅಧೀಕ್ಷಕರು(ಸ್ವಪ್ರ), ಡೀನ್(ಶೈಕ್ಷಣಿಕ) ವಿಭಾಗ, ಕರಾಮುವಿ, ಇವರುಗಳಿಗೆ ಪ್ರತ್ಯೇಕವಾಗಿ ಪ್ರೊ. ಕೆ.ಬಿ ಪ್ರವೀಣ, ಇವರು ದಿನಾಂಕ: 28.03.2025ರ ಪತ್ರದಲ್ಲಿ ಆರೋಪಿಸಿರುವ ವಿಷಯಗಳ ಬಗ್ಗೆ, ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು ದಿನಾಂಕ: 03.07.2025ರಲ್ಲಿ ನಿರ್ದೇಶಿಸಿರುವಂತೆ ತಮ್ಮ ವಿರುದ್ಧ ಏಕೆ ಶಿಸ್ತು ಕ್ರಮಕೈಗೊಳ್ಳಬಾರದು ಎಂಬುದರ ಲಿಖಿತ ಹೇಳಿಕೆಯನ್ನು ಅಗತ್ಯ ಮಾಹಿತಿ/ದಾಖಲಾತಿಗಳೊಂದಿಗೆ ಸಲ್ಲಿಸಲು ಸೂಚಿಸಿ ದಿನಾಂಕ: 18.09.2025ರ "ಷೋಕಾಸ್ ನೋಟಿಸ್" ಅನ್ನು ಜಾರಿ ಮಾಡಲಾಗಿತ್ತು.

ಸದರಿ ಷೋಕಾಸ್ ನೋಟಿಸ್‌ಗೆ ನಾಲ್ಕು ಮಂದಿ ಸಿಬ್ಬಂದಿಗಳು ಪ್ರತ್ಯೇಕವಾಗಿ ಲಿಖಿತ ಹೇಳಿಕೆ ನೀಡಿದ್ದು, ಸದರಿ ಸಿಬ್ಬಂದಿಗಳು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಕ್ರೂಢೀಕರಿಸಿ ವರದಿಯನ್ನು ಸಿದ್ಧಪಡಿಸಿ ಘನತೆವೆತ್ತ ರಾಜ್ಯಪಾಲರ ಅಧೀನ ಕಾರ್ಯದರ್ಶಿಗಳಿಗೆ ದಿನಾಂಕ: 06.01.2026ರಂದು ಸಲ್ಲಿಸಲಾಗಿತ್ತು.

ಸದರಿ ವರದಿಯ ಸಂಬಂಧ "I am directed to inform you to conduct a departmental enquiry headed by the retired district judge against all persons involved and submit the report within 3 months under intimation to this office and also to keep Mr. Jagadeesh Babu under suspension till completion of enquiry and to initiate suitable criminal action against persons interfering in the enquiry in case of any such interference" ಎಂದು ದಿನಾಂಕ:20.02.2026ರ ಪತ್ರದಲ್ಲಿ ಘನತೆವೆತ್ತ ರಾಜ್ಯಪಾಲರ ಅಧೀನ ಕಾರ್ಯದರ್ಶಿಗಳು, ಆದೇಶಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ).

ಈ ಹಿನ್ನೆಲೆಯಲ್ಲಿ ಡಾ. ಜಗದೀಶ್ ಬಾಬು ಹೆಚ್.ಕೆ, ಸಹಾಯಕ ಪ್ರಾಧ್ಯಾಪಕರು (ಅಮಾನತ್ತು), ಶ್ರೀ ಪ್ರದೀಪ್ ಗಿರಿ.ಎಸ್, ಉಪಕುಲಸಚಿವ(ಸ್ವಪ್ರ), ಪರೀಕ್ಷಾ ವಿಭಾಗ, ಶ್ರೀ ಪುಟ್ಟಸ್ವಾಮಿ. ಸಿ.ಕೆ, ಸಹಾಯಕ ಕುಲಸಚಿವ(ಸ್ವಪ್ರ), ಅತಿಥಿ ಗೃಹ/ಪರೀಕ್ಷಾ ವಿಭಾಗ ಮತ್ತು ಶ್ರೀಮತಿ ಗೀತ, ಅಧೀಕ್ಷಕರು(ಸ್ವಪ್ರ), ಡೀನ್(ಶೈಕ್ಷಣಿಕ) ವಿಭಾಗ, ಕರಾಮುವಿ, ಇವರುಗಳಿಗೆ ಪ್ರತ್ಯೇಕವಾಗಿ ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ-09 ಮತ್ತು 10ರನ್ವಯ ದೋಷಾರೋಪಣೆ ಪಟ್ಟಿಯ ಅನುಬಂಧ-1-4 ಅನ್ನುಒಳಗೊಂಡಂತೆ ದಿನಾಂಕ:18.03.2026ರ "ಷೋಕಾಸ್ ನೋಟಿಸ್" ಅನ್ನು ಜಾರಿ ಮಾಡಲಾಗಿದ್ದು, ಸದರಿ ಷೋಕಾಸ್ ನೋಟಿಸ್‌ಗೆ ನಾಲ್ಕು ಮಂದಿ ಸಿಬ್ಬಂದಿಗಳು ದಿನಾಂಕ:31.03.2026, 01.04.2026, 16.04.2026ರಂದು ಪ್ರತ್ಯೇಕವಾಗಿ ಲಿಖಿತ ಹೇಳಿಕೆ ನೀಡಿರುತ್ತಾರೆ.

ಕುಲಪತಿಗಳು

ಕುಲಸಚಿವರು

ಈ ಸಂಬಂಧ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸತ್ಯಾಸತ್ಯತೆಯನ್ನು ಅರಿಯುವ ದೃಷ್ಠಿಯಿಂದ ಮಾನ್ಯ ಕುಲಪತಿಗಳ ಆದೇಶದನ್ವಯ ಸಿಸಿಎ ನಿಯಮಗಳ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸಲು ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 9(2)ರನ್ವಯ ಶ್ರೀ ವಿರೂಪಾಕ್ಷಯ್ಯ ಹೆಚ್.ಎಂ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಪ್ರೊ. ವಿ. ಸುದೀಶ್, ಪ್ರಾಧ್ಯಾಪಕರು, ಸ್ನಾತಕೋತ್ತರ ಕಾನೂನು ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡಿ ದಿನಾಂಕ:11.06.2026ರಂದು ಆದೇಶ ಹೊರಡಿಸಲಾಗಿದ್ದು, ಸದರಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿರುತ್ತಾರೆ(ಪ್ರತಿ ಲಗತ್ತಿಸಿದೆ).

ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯವು ಕೈಗೊಂಡ ಪ್ರಕ್ರಿಯೆಗೆ ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ಪ್ರೊ.ಕೆ.ಬಿ.ಪ್ರವೀಣ, ಹಿಂದಿನ ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ಮಾನ್ಯ ಘನತವೆತ್ತ ಕುಲಾಧಿಪತಿಗಳಿಂದ ವಿಚಾರಣೆ ಮಾಡುವ ಸಂಬಂಧ ಪತ್ರ ಬಂದಿರುತ್ತದೆ ಎಂದು ಸಭೆಗೆ ತಿಳಿಸಿದರು.

ತೀರ್ಮಾನ : **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಈ ವಿಷಯದ ಬಗ್ಗೆ ವಿಭಾಗ ಮಟ್ಟದ ವಿಚಾರಣೆ ನಡೆಸಲು ಆದೇಶಿಸಿದೆ. ಅದರನ್ವಯ ಕೂಲಂಕುಷವಾಗಿ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರನ್ನು ನೇಮಿಸಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ವಿವರಿಸಿದರು.**

#####

**ವಿಷಯ ಸಂಖ್ಯೆ: 186.04**

ವಿಷಯ: **ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರ ಕಡ್ಡಾಯ ನಿವೃತ್ತಿಯ ಸಂಬಂಧದ WP.No. 7539/2024ರ ತೀರ್ಪಿನ ಕುರಿತು.**

– * –

ವಿಶ್ವವಿದ್ಯಾನಿಲಯವು ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರ ವಿರುದ್ಧ ಕರ್ತವ್ಯ ಲೋಪ ಹಾಗೂ ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ಪ್ರಕಾರ ಇಲಾಖಾ ವಿಚಾರಣೆ ಕಾಯ್ದಿರಿಸಿ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ 7(1)(ಎ) ರೀತ್ಯ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/565/2020–21, ದಿನಾಂಕ: 22.07.2020 ರಂದು ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು (ಪ್ರತಿ ಲಗತ್ತಿಸಿದೆ ಅನುಬಂಧ – 1).

ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತುಗೊಳಿಸಿರುವ ವಿಶ್ವವಿದ್ಯಾನಿಲಯದ ಕ್ರಮದ ಕುರಿತು ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥನಾ ಮಂಡಳಿ161ನೇ ಸಭೆಗೆ ಅನುಸಮರ್ಥನೆಗೆ ಮಂಡಿಸಲಾಗಿ ಸದರಿ ಸಭೆಯು ವಿಶ್ವವಿದ್ಯಾನಿಲಯದ ಕ್ರಮವನ್ನು ಅನುಸಮರ್ಥಿಸಿರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 2).

ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರು ಕರ್ತವ್ಯ ಲೋಪ ಹಾಗೂ ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮ (9) ಮತ್ತು (10)ರ ಪ್ರಕಾರ ವಿಚಾರಣೆ ನಡೆಸಿ ವರದಿ ನೀಡಲು ಶ್ರೀ ಗೋಪಾಲ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯಾಗಿ ಆದೇಶ ಸಂಖ್ಯೆ:ಕರಾಮುವಿ/ ಆವಿ/ಸಿಬ್ಬಂದಿ–2/565/2022–23,ದಿನಾಂಕ:24.05.2022 ರಂತೆ ನೇಮಕ ಮಾಡಲಾಗಿತ್ತು(ಪ್ರತಿ ಲಗತ್ತಿಸಿದೆ ಅನುಬಂಧ – 3).

Umana prakash
**ಕುಲಪತಿಗಳು** **ಕುಲಸಚಿವರು**

ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರು ಕರ್ತವ್ಯ ಲೋಪ ಹಾಗೂ ಸೇವಾ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧ ಇಲಾಖಾ ವಿಚಾರಣೆಯನ್ನು ನಡೆಸಿ (ಇಲಾಖಾ ವಿಚಾರಣಾ ಸಂಖ್ಯೆ:01/2021) ವಿಚಾರಣಾ ವರದಿಯನ್ನು ಶ್ರೀ ಗೋಪಾಲ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು, ವಿಚಾರಣಾಧಿಕಾರಿಗಳು ಸಲ್ಲಿಸಿರುತ್ತಾರೆ, ಸದರಿ ವರದಿಯಲ್ಲಿ "The charges against the D.O.-Sri Manjunath C.B. are proved and sum=bmitted enquiry to the disciplinary authority, KSOU,Mysore for taking necessary action for further action".ಎಂದು ವರದಿಯಲ್ಲಿ ಇರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 4).

ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರ ವಿರುದ್ಧ ಇಲಾಖಾ ವಿಚಾರಣೆಯ(ಇಲಾಖಾ ವಿಚಾರಣಾ ಸಂಖ್ಯೆ:01/2021) ಅಂತಿಮ ವರದಿಯನ್ನು ವಿಶ್ವವಿದ್ಯಾನಿಲಯದ ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಪನಾ ಮಂಡಳಿಯ 175ನೇ ಸಭೆಗೆ ಮಂಡಿಸಲಾಗಿ ಸದರಿ ಸಭೆಯು ಶ್ರೀ ಸಿ.ಬಿ.ಮಂಜುನಾಥ ಟಿ.ಸಿ.ಸಿ, (ಅಮಾನತ್ತು), ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು, ಇವರನ್ನು ಕರ್ತವ್ಯದಿಂದ ನಿಯಮಾನುಸಾರ ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 5).

ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ನಿಯಮ 12ರನ್ವಯ ವಿಚಾರಣಾ ವರದಿಯನ್ನು ಆರೋಪಿತ ನೌಕರನಿಗೆ ರವಾನಿಸಲಾಗಿತ್ತು, ಸದರಿ ಆರೋಪಿತ ನೌಕರನ ಲಿಖಿತ ಹೇಳಿಕೆಯನ್ನು ದಿನಾಂಕ: 06.01.2024ರ ಪತ್ರದಲ್ಲಿ ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ ಅನುಬಂಧ – 6).

ಸದರಿಯವರು ಇಲಾಖಾ ವಿಚಾರಣೆಯ ವರದಿಯ ಸಂಬಂಧ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ರಕ್ಷಣಾತ್ಮಕ ಹೇಳಿಕೆ ಸಲ್ಲಿಸದೆ ಪುನಃ ವ್ಯತಿರಿಕ್ತವಾಗಿ ಉದ್ಧಟತನದಿಂದ ಹಾಗೂ ಸತ್ಯಕ್ಕೆ ದೂರವಾದ ಹೇಳಿಕೆ ನೀಡಿರುವುದು ಅಸಂಬದ್ಧವಾಗಿರುವುದು ತಿಳಿದು ಬಂದಿದ್ದು, ಇಲಾಖಾ ವಿಚಾರಣೆಯಲ್ಲಿ ವಿಶ್ವವಿದ್ಯಾನಿಲಯವು ಮಾಡಲಾದ ಎಲ್ಲಾ ಆರೋಪಗಳು ಸಾಬೀತಾಗಿದ್ದು, ವಿಚಾರಣಾ ವರದಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ 175ನೇ ಸಭೆಯಲ್ಲಿ ಸಂಪೂರ್ಣವಾಗಿ ಅಂಗೀಕರಿಸಿ, ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ಭಾಗ III (5)(1)(Viii)ರನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ಕಡ್ಡಾಯ ನಿವೃತ್ತಿ ದಂಡನೆ ವಿಧಿಸಿ ಆದೇಶ ಸಂಖ್ಯೆ:ಕರಾಮುವಿ/ ಆವಿ/ಸಿಬ್ಬಂದಿ-2/565/2023-24, ದಿನಾಂಕ:17.01.2024 ರಂತೆ ಆದೇಶ ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 7).

ಶ್ರೀ ಸಿ.ಬಿ.ಮಂಜುನಾಥ ಇವರು ವಿಶ್ವವಿದ್ಯಾನಿಲಯವು ಕಡ್ಡಾಯ ನಿವೃತ್ತಿಗೊಳಿಸಿ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು, ಇಲ್ಲಿ WP.No.7539/2024(S-RES)ಅನ್ನು ದಾಖಲಿಸಿ, ಸದರಿ ಆದೇಶಕ್ಕೆ ತಡೆಯಾಜ್ಞೆ "Since impugned penalty of compulsory retirement is stayed by this Court respondent No.03 is hereby directed to reinstate the petitioner pending consideration of the captioned writ petition".ಎಂಬುದಾಗಿ ಆದೇಶವಾಗಿರುತ್ತದೆ ಸದರಿ ಆದೇಶದನ್ವಯ ಕ್ರಮವಹಿಸಲು ಕಾನೂನು ಘಟಕದಿಂದ ಟಿಪ್ಪಣಿಯನ್ನು ನೀಡಲಾಗಿರುತ್ತದೆ. ಹಾಗೂ ಸದರಿ ನೌಕರರು ಆದೇಶದ ತಡೆಯಾಜ್ಞೆ ಮತ್ತು ಪುನರ್ ನೇಮಕ ಆದೇಶದ ಮೇರೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದಾಗಿ ಮನವಿ ಸಲ್ಲಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ ಅನುಬಂಧ – 8).

ಕುಲಪತಿಗಳು

ಕುಲಸಚಿವರು

ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು, ಇಲ್ಲಿ ದಾಖಲಿಸಿರುವ WP.No:7539/2024(S-RES)ರ ಅಂತಿಮ ಆದೇಶಕ್ಕೆ ಒಳಪಟ್ಟು ಕರಾಮುವಿ ಪ್ರಾದೇಶಿಕ ಕೇಂದ್ರ, ತುಮಕೂರು ಇಲ್ಲಿ ಕರ್ತವ್ಯಕ್ಕೆ ಮರು ನಿಯುಕ್ತಿಗೊಳಿಸಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/565/2024–25, ದಿನಾಂಕ:24.04.2024 ರಂತೆ ಆದೇಶ ಹೊರಡಿಸಲಾಗಿರುತ್ತದೆ, ಸದರಿ ಆದೇಶದನ್ವಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ (ಪ್ರತಿ ಲಗತ್ತಿಸಿದೆ ಅನುಬಂಧ – 9).

ವಿಶ್ವವಿದ್ಯಾನಿಲಯವು ಪ್ರಥಮ ದರ್ಜೆ ಗುಮಾಸ್ತಯ ಪದೋನ್ನತಿಗೆ ಸಂಬಂಧಿಸಿದ ತಿದ್ದುಪಡಿ ಪರಿನಿಯಮ 2019ಕ್ಕೆ ಅಂಕಿತ ದೊರಕುವ ಷರತ್ತಿಗೊಳಪಟ್ಟು ಸದರಿಯವರನ್ನು ಒಳಗೊಂಡಂತೆ 24 ಮಂದಿಗೆ ಕೆ.ಸಿ.ಎಸ್ ನಿಯಮ 32 ರನ್ವಯ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಸ್ವತಂತ್ರ ಪ್ರಭಾರ ಕಲ್ಪಿಸಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/950/2028–19, ದಿನಾಂಕ: 15.02.2019ರಂತೆ ಆದೇಶ ಹೊರಡಿಸಲಾಗಿತ್ತು. ಆದರೆ ಸದರಿ ಪರಿನಿಯಮವು ಅಂಕಿತ ರಹಿತವಾಗಿ ಹಿಂತಿರುಗಿ ಬಂದ ಹಿನ್ನೆಲೆಯಲ್ಲಿ, 160ನೇ ವ್ಯವಸ್ಥಾಪನಾ ಮಂಡಳಿ ತೀರ್ಮಾನದನ್ವಯ ಪ್ರಥಮ ದರ್ಜೆ ಗುಮಾಸ್ತ ಸ್ವತಂತ್ರ ಪ್ರಭಾರ ವ್ಯವಸ್ಥೆ ಕಲ್ಪಿಸುವ ಪೂರ್ವದಲ್ಲಿ ಇದ್ದ ಹುದ್ದೆಗೆ ಹಿಂದಿರುಗಿಸಿ ಆದೇಶ ಸಂಖ್ಯೆ:ಕರಾಮುವಿ/ ಆವಿ/ಸಿಬ್ಬಂದಿ–2/950/2020–21, ದಿನಾಂಕ:04.02.2020 ರಂತೆ ಆದೇಶ ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 10).

ಆದರೆ, ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು, ಇಲ್ಲಿ ದಾಖಲಿಸಿರುವ WP.No:7539/2024 (S-RES)ರ ಅಂತಿಮ ಆದೇಶಕ್ಕೆ ಒಳಪಟ್ಟು ಟಿಸಿಸಿ ಮರು ನಿಯುಕ್ತಿಗೊಳಿಸಿ ಆದೇಶಿಸಿದ್ದರೂ ಸಹ ಹಾಜರಾತಿ ಪುಸ್ತಕದಲ್ಲಿ ಪ್ರಾದೇಶಿಕ ನಿರ್ದೇಕರು ಟಿಸಿಸಿ ಪದನಾಮ ಬರೆಯದಂತೆ ಕಛೇರಿ ಕೆಲಸಕ್ಕೆ ಅಡ್ಡಿಪಡಿಸಿ ಟಿಸಿಸಿ ಪದನಾಮದ ಬದಲು ಪ್ರಥಮ ದರ್ಜೆ ಗುಮಾಸ್ತ (ಸ್ವಪ್ರ) ಎಂದು ಪ್ರಾದೇಶಿಕ ಕೇಂದ್ರದ ಹಾಜರಾತಿ ಪುಸ್ತಕದಲ್ಲಿ ತಮ್ಮ ಸ್ವ–ಹಸ್ತಾಕ್ಷರದಲ್ಲೇ ಬರೆಯುತ್ತಿರುವುದಾಗಿ ಪ್ರಾದೇಶಿಕ ನಿರ್ದೇಶಕರು ಪತ್ರದಲ್ಲಿ ತಿಳಿಸಿರುತ್ತಾರೆ ಹಾಗೂ ವಿಶ್ವವಿದ್ಯಾನಿಲಯವು ಟಿಸಿಸಿ ಎಂಬ ಪದನಾಮದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದ್ದರೂ ಸಹ ಸದರಿ ಪ್ರವೃತ್ತಿಯನ್ನು ಮುಂದುವರೆಸಿರುವ ಸಂಬಂಧವಾಗಿ ಸೂಚಿ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/565/2024–25, ದಿನಾಂಕ:26.07.2024ರಂತೆ ಸೂಚಿಯನ್ನು ನೀಡಲಾಗಿರುತ್ತದೆ ಹಾಗೂ ಟಿಸಿಸಿ ಪದನಾಮದ ಕುರಿತು ಹಿಂಬರಹ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/565/2024–25, ದಿನಾಂಕ:26.07.2024 ರಂತೆ ಹಿಂಬರಹವನ್ನು ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 11).

ಶ್ರೀ ಸಿ.ಬಿ.ಮಂಜುನಾಥ, ಟಿ.ಸಿ.ಸಿ, ಇವರು ಪರಿವರ್ತಿತ ರಜೆ ಹಾಗೂ ಗಳಿಕೆ ರಜೆ ಅರ್ಜಿಗಳಲ್ಲಿ ಟಿ.ಸಿ.ಸಿ ಬದಲು ಪ್ರಥಮ ದರ್ಜೆ ಗುಮಾಸ್ತ (ಸ್ವಪ್ರ) ಎಂದು ನಮೂದಿಸಿ ಸಲ್ಲಿಸುತ್ತಿರುವುದರ ಬಗ್ಗೆಯೂ ಸಹ ಕಾರಣ ಕೇಳಿ ನೋಟಿಸ್ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ–2/565/2024–25, ದಿನಾಂಕ: 01.09.2025 ರಂತೆ ಜಾರಿ ಮಾಡಲಾಗಿರುತ್ತದೆ. ಆದರೂ ಸಹ ಯಾವುದೇ ಬದಲಾವಣೆಯಾಗಿದ ಸಂಬಂದ ಸದರಿ ವಿಚಾರವಾಗಿ ಹಲವಾರು ಬಾರಿ ಟಿಪ್ಪಣಿ, ಹಿಂಬರಹ, ಸೂಚಿ ಹಾಗೂ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದರೂ ಸಹ ಸದರಿ ನೌಕರರು ನಡವಳಿಕೆಯಲ್ಲಿ ಯಾವುದೇ ಬದಲಾವಣೆಗೊಂಡಿಲ್ಲದೇ ಇರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಸದರಿ ಪ್ರವೃತ್ತಿಯನ್ನು ಮುಂದುವರಿಸಿದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೇ ಶಿಸ್ತುಕ್ರಮ ಜರುಗಿಸಲಾಗುವುದೆಂದು "ಅಂತಿಮ ಎಚ್ಚರಿಕೆ"ಯನ್ನು ನೀಡುತ್ತಾ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿರುವ WP.No:7539/2024(S-RES)ರ ಅಂತಿಮ ಆದೇಶಕ್ಕೆ ಒಳಪಟ್ಟು ಮರುನಿಯುಕ್ತಿ ಗೊಳಿಸಿರುವ ಟಿಸಿಸಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುವಂತೆ ತಿಳಿಸಿ "ಅಂತಿಮ ಎಚ್ಚರಿಕೆಯ ನೋಟಿಸ್" ಅನ್ನು ಅಂತಿಮ ಎಚ್ಚರಿಕೆ ನೋಟಿಸ್ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–2/565/2025–26, ದಿನಾಂಕ: 17.10.2025 ರಂತೆ ಜಾರಿ ಮಾಡಲಾಗಿರುತ್ತದೆ(ಪ್ರತಿ ಲಗತ್ತಿಸಿದೆ ಅನುಬಂಧ – 12).

ಕುಲಪತಿಗಳು

ಕುಲಸಚಿವರು

ಶ್ರೀ ಸಿ.ಬಿ.ಮಂಜುನಾಥ, ಟಿ.ಸಿ.ಸಿ, ಇವರು ರಾಜ್ಯಪಾಲರ ಸಚಿವಾಲಯಕ್ಕೆ ನೇರವಾಗಿ ಪತ್ರಗಳನ್ನು ಸಲ್ಲಿಸಿರುವುದನ್ನು ರಾಜ್ಯಪಾಲರ ಕಾರ್ಯಾಲಯ ಗಂಬೀರವಾಗಿ ಪರಿಗಣಿಸಿ ಸದರಿ ನೌಕರರಿಗೆ ಮನವಿಗಳನ್ನು ಸಲ್ಲಿಸುವಾಗ ಶಿಷ್ಟಚಾರ ಮತ್ತು ಕಛೇರಿ ಕಾರ್ಯವಿಧಾನಗಳನ್ನು ಅನುಸರಿಸುವಂತೆ ಎಚ್ಚರಿಕೆ ನೀಡಲು ರಾಜ್ಯಪಾಲರ ಅಧೀನ ಕಾರ್ಯದರ್ಶಿ, ರಾಜ್ಯಪಾಲರ ಕಾರ್ಯಾಲಯ, ಇವರು ಆದೇಶ ಸಂಖ್ಯೆ :ಜಿಎಸ್ 04 ಕೆಒಎಂ 2026, ದಿನಾಂಕ:13.03.2026ರಲ್ಲಿ ಆದೇಶಿದ ಹಿನ್ನೆಲೆಯಲ್ಲಿ ಸದರಿಯವರಿಗೆ ವಿಶ್ವವಿದ್ಯಾನಿಲಯವು ಸಮುಚಿತ ಮಾರ್ಗದಲ್ಲಿ ಮನವಿಗಳನ್ನು ಸಲ್ಲಿಸುವಂತೆ ಸೂತ್ತೋಲೆಗಳನ್ನು ಹೊರಡಿಸಿದ್ದರೂ ಸಹ ಸುತ್ತೋಲೆಯ ಅಂಶಗಳನ್ನು ಪಾಲನೆ ಮಾಡದೇ ವಿಶ್ವವಿದ್ಯಾನಿಲಯದ ನಿಯಮ ಶಿಷ್ಟಚಾರಗಳಿಗೆ ವಿರುದ್ಧವಾಗಿರುತ್ತದೆ ಸದರಿ ನಡವಳಿಕೆಯನ್ನು ಬದಲಾಯಿಸಿಕೊಂಡು ಕಾರ್ಯನಿರ್ವಹಿಸುವಂತೆ ಎಚ್ಚರಿಕೆ ನೀಡುವ ಎಚ್ಚರಿಕೆ ನೋಟಿಸ್ ಸಂಖ್ಯೆ: ಕರಾಮುವಿ/ಆವಿ /ಸಿಬ್ಬಂದಿ–2/565/2026–27, ದಿನಾಂಕ:13.04.2026 ರಂತೆ "ಎಚ್ಚರಿಕೆ ನೋಟಿಸ್" ಅನ್ನು ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ ಅನುಬಂಧ – 13).

ಶ್ರೀ ಸಿ.ಬಿ ಮಂಜುನಾಥ. ಟಿ.ಸಿ.ಸಿ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ವಿ.ವಿ ನಿಲಯವು ದಿನಾಂಕ:17.01.2024 ರಂದು ಕಡ್ಡಾಯ ನಿವೃತ್ತಿಗೊಳಿಸಿ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿದಾಖಲಿಸಿದ್ದ WP.No.7539/2024ರ ಪ್ರಕರಣವು ದಿನಾಂಕ:16.04.2026 ರಂದು ಈ ಕೆಳಕಂಡಂತೆ ಆದೇಶವಾಗಿರುತ್ತದೆ.

i. The petition is allowed.
ii. The impugned order at Annexure-A dated 17.01.2024 passed by respondent No.3 and the impugned decision of respondent No. 4 at Annexure-B dated 01.12.2023 are hereby set aside.
iii. The matter is remitted back to the respondents for reconsideration afresh, from the stage of issuance of show-case notice, in accordance with law, after providing reasonable and sufficient opportunity to the petitioner.
iv. It is made clear that though several contentions have been urged in the present petition, the same are not dealt with and liberty is reserved in favour of the petitioner to urge the same in a subsequent proceeding including approaching this court subsequently ಎಂದಿರುತ್ತದೆ. ಈ ಸಂಬಂಧ ಆದೇಶ ಹೊರಡಿಸುವಂತೆ ಕಾನೂನು ಘಟಕದ ದಿನಾಂಕ:02.05.2025ರ ಟಿಪ್ಪಣಿಯಲ್ಲಿ ತಿಳಿಸಲಾಗಿರುತ್ತೆ (ಪ್ರತಿ ಲಗತ್ತಿಸಿದೆ ಅನುಬಂಧ – 14).

ಶ್ರೀ ಸಿ.ಬಿ ಮಂಜುನಾಥ್ ಇವರನ್ನು ಟಿ.ಸಿ.ಸಿ ಎಂದು ಮರುನಿಯುಕ್ತಿಗೊಳಿಸಿದ್ದರು ಸಹ ದಿನಾಂಕ: 25.05.2026ರ ಮನವಿ ಪತ್ರದಲ್ಲಿ ಪ್ರಥಮ ದರ್ಜೆ ಗುಮಾಸ್ತ(ಸ್ವಪ್ರ) ಎಂದು ನಮೂದಿಸಿ ಇಲಾಖಾ ವಿಚಾರಣೆಯನ್ನು ಪುನಃ ಪ್ರಾರಂಭಿಸುವುದನ್ನು ರದ್ದುಪಡಿಸುವ ಬಗ್ಗೆ ಮತ್ತು ರಿಟ್ ಪಿಟಿಷನ್ ನಂ. 17012/2022 ಪ್ರಕರಣದ ಮುಂದಿನ ತೀರ್ಪಿಗೆ ಒಳಪಟ್ಟು ಪದೋನ್ನತಿ ಕೋರಿ ಮನವಿ ಅರ್ಜಿ ಹಾಗೂ ಪದೋನ್ನತಿ ಕಾಲದ ಸ್ವಪ್ರ ಭತ್ಯೆ ಒಳಗೊಂಡಂತೆ ಎಲ್ಲಾ ಬಾಕಿ ವೇತನವನ್ನು ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ ಅನುಬಂಧ– 15).

ವಿಶ್ವವಿದ್ಯಾನಿಲಯವು ಇಲಾಖಾ ವಿಚಾರಣೆಯ (ಇಲಾಖಾ ವಿಚಾರಣಾ ಸಂಖ್ಯೆ:01/2021) ಅಂತಿಮ ವರದಿಯನ್ನು ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಪನಾ ಮಂಡಳಿಯ 175ನೇ ಸಭೆಗೆ ಮಂಡಿಸಲಾಗಿದ್ದು, ಆನಂತರದಲ್ಲಿ ಸದರಿ ನೌಕರರಿಂದ ಲಿಖಿತ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಲಿಖಿತ ಹೇಳಿಕೆಯಲ್ಲಿ ರಕ್ಷಣಾತ್ಮಕ ಹೇಳಿಕೆ ಸಲ್ಲಿಸದೆ ಪುನಃ ವ್ಯತಿರಿಕ್ತವಾಗಿ ಉದ್ಧಟತನದಿಂದ ಹಾಗೂ ಸತ್ಯಕ್ಕೆ ದೂರವಾದ ಹೇಳಿಕೆ ನೀಡಿರುವುದು ಅಸಂಬದ್ಧವಾಗಿರುವುದು ತಿಳಿದು ಬಂದ ಹಿನ್ನೆಲೆಯಲ್ಲಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ 175ನೇ ಸಭೆ ತೀರ್ಮಾನದಂತೆ ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳ ಭಾಗ III (5)(1)(Viii)ರನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ಕಡ್ಡಾಯ ನಿವೃತ್ತಿ

Gnana prakash
ಕುಲಪತಿಗಳು

ಕುಲಸಚಿವರು

ದಂಡನೆ ವಿಧಿಸಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/565/2023-24, ದಿನಾಂಕ:17.01.2024 ರಂತೆ ಆದೇಶ ಹೊರಡಿಸಲಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ WP. No:7539/2024(S-RES) ರ ಅಂತಿಮ ಆದೇಶಕ್ಕೆ ಒಳಪಟ್ಟು ಟಿ.ಸಿ.ಸಿ. ಆಗಿ ಮರು ನಿಯುಕ್ತಿಗೊಳಿಸಲಾಗಿರುತ್ತದೆ.

ಮುಂದುವರೆದು ಮಾನ್ಯ ಉಚ್ಚ ನ್ಯಾಯಾಲಯದ WP.No. 7539/2024ರ ಆದೇಶದನ್ವಯ ಮತ್ತೊಮ್ಮೆ ಇಲಾಖಾ ವಿಚಾರಣಾ ಅಂತಿಮ ವರದಿಯನ್ನು ಸದರಿ ನೌಕರರಿಗೆ ನೀಡಿ ಲಿಖಿತ ಹೇಳಿಕೆ ಪಡೆದು, ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲು ಕ್ರಮವಹಿಸಬೇಕೆ ಅಥವಾ ಸದರಿ ವಿಚಾರವಾಗಿ ಮರು ವಿಚಾರಣೆ ನಡೆಸಬೇಕೆ, ಒಂದು ವೇಳೆ ಮರುವಿಚಾರಣೆ ನಡೆಸಬೇಕೆಂದಾದಲ್ಲಿ ವಿಚಾರಣಾಧಿಕಾರಿಗಳು, ಮಂಡನಾಧಿಕಾರಿಗಳು ಹಾಗೂ ಕಛೇರಿ ಸಹಾಯಕರನ್ನು ನೇಮಕ ಮಾಡಿ ನಿಯಮಾನುಸಾರ ಮರು ವಿಚಾರಣೆಯನ್ನು ನಡೆಸಬೇಕಾಗಿರುತ್ತದೆ ಹಾಗೂ ಸದರಿ ನೌಕರರ ಮನವಿಯನುಸಾರ ಇಲಾಖಾ ವಿಚಾರಣೆಯನ್ನು ಪುನಃ ಪ್ರಾರಂಭಿಸುವುದನ್ನು ರದ್ದುಪಡಿಸಿ ರಿಟ್ ಪಿಟಿಷನ್ ನಂ. 17012/2022 ಪ್ರಕರಣದ ಮುಂದಿನ ತೀರ್ಪಿಗೆ ಒಳಪಟ್ಟು ಪದೋನ್ನತಿ, ಪದೋನ್ನತಿ ಕಾಲದ ಸ್ವಪ್ರ ಭತ್ಯೆ ಒಳಗೊಂಡಂತೆ ಎಲ್ಲಾ ಬಾಕಿ ವೇತನ ಪಾವತಿಗೆ ಕ್ರಮವಹಿಸಬೇಕೆ?, ಎಂಬ ಅಂಶಗಳನ್ನು ಅವಗಾಹನೆಗೆ ತರಬಯಸುತ್ತೇವೆ.

ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ, ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ ಶ್ರೀ ಸಿ.ಬಿ ಮಂಜುನಾಥ್ ಇವರನ್ನು ಟಿ.ಸಿ.ಸಿ ಎಂದು ಮರು ನಿಯುಕ್ತಿಗೊಳಿಸಿದ್ದರು ಸಹ ದಿನಾಂಕ:25.05.2026 ರ ಮನವಿ ಪತ್ರದಲ್ಲಿ ಪ್ರಥಮ ದರ್ಜೆ ಗುಮಾಸ್ತ (ಸ್ವಪ್ರ) ಇವರ ಕೆಲವು ಪತ್ರಗಳು ವಿಮರ್ಶಿಸಲಾಯಿತು. ಸದರಿ ಪತ್ರಗಳಲ್ಲಿ ಶಾಸನಬದ್ಧ ಅಧಿಕಾರಿಗಳಿಗೆ ಏಕ ವಚನಗಳಲ್ಲಿ ಪತ್ರ ಬರೆಯುವುದು. ಸರ್ಕಾರದ ಅಧಿಕಾರಿಗಳಿಗೆ ಪತ್ರ ಬರೆಯುವಾಗ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಅವಾಚ್ಯ ಶಬ್ಧಗಳನ್ನು ಬಳಸಿ ಪತ್ರ ಬರೆಯುತ್ತಿರುತ್ತಾರೆಂದು ಸಭೆಗೆ ತಿಳಿಸಿದರು.

<u>ತೀರ್ಮಾನ</u> : **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ ಸಿ.ಬಿ ಮಂಜುನಾಥ್ ಇವರನ್ನು ಟಿ.ಸಿ.ಸಿ ಇವರ ಬಗ್ಗೆ ಮುಂದಿನ ಕ್ರಮವಹಿಸುವ ಮುನ್ನ Legal Opinion ಪಡೆದು ಆ ಪ್ರಕಾರ ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 186.05**

<u>ವಿಷಯ:</u> **ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯಾಧಿಕಾರಿಗಳನ್ನು ನೇಮಕ ಮಾಡಿರುವ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿ.**

– * –

ಮಾನ್ಯ ಕುಲಪತಿಗಳ ಕಾರ್ಯಾಲಯದ ಸುಸೂತ್ರ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ವ್ಯವಸ್ಥಾಪನ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಕರಾಮುವಿ ಕಾಯ್ದೆ-1992ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(ii)ರಡಿಯಲ್ಲಿ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ, ಪ್ರೊ. ಬಸನಗೌಡ ಎಸ್. ಬಿರಾದರ, ಹಿರಿಯ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು (ನಿವೃತ್ತ), ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರನ್ನು ಮಾಹೆಯಾನ ವೇತನ ರೂ.50,000/-(ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಆಧಾರದ ಮೇಲೆ ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯಾಧಿಕಾರಿಗಳಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಿ ದಿನಾಂಕ:01.07.2026 ರಂದು ಆದೇಶ ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಅದರಂತೆ ಸದರಿಯವರು ದಿನಾಂಕ:01.07.2026ರಂದು ಪೂರ್ವಾಹ್ನ ಕರ್ತವ್ಯದ ಮೇಲೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

Umana prakash

**ಕುಲಪತಿಗಳು** **ಕುಲಸಚಿವರು**

ಈ ಹಿನ್ನೆಲೆಯಲ್ಲಿ, ಸದರಿಯವರ ನೇಮಕಾತಿ ಪ್ರಕ್ರಿಯೆ ಸಂಬಂಧ ಅನುಸಮರ್ಥನೆಗಾಗಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಬಸನಗೌಡ ಎಸ್. ಬಿರಾದರ, ಹಿರಿಯ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು (ನಿವೃತ್ತ), ಇವರು ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರನ್ನು ನಮ್ಮ ವಿಭಾಗಕ್ಕೆ ಅಂದರೆ ಕುಲಪತಿಗಳ ವಿಶೇಷ ಕರ್ತವ್ಯಾಧಿಕಾರಿಗಳಾಗಿ ಮುಂದಿನ ಆದೇಶದವರೆಗೆ ಈಗಾಗಲೇ ನೇಮಕ ಮಾಡಿಕೊಂಡಿದ್ದು, ಅವರು ಕರ್ತವ್ಯದ ಮೇಲೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆಂದು ಸಭೆಗೆ ತಿಳಿಸಿದರು.

<u>ತೀರ್ಮಾನ</u> : **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ಕಾಯ್ದೆ-1992 ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(ii)ರಡಿಯಲ್ಲಿ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ, ಪ್ರೊ. ಬಸನಗೌಡ ಎಸ್. ಬಿರಾದರ, ಹಿರಿಯ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು (ನಿವೃತ್ತ), ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರನ್ನು ಮಾಹೆಯಾನ ವೇತನ ರೂ.50,000/-(ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಆಧಾರದ ಮೇಲೆ ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯಾಧಿಕಾರಿಗಳಾಗಿ ಮುಂದಿನ ಆದೇಶದವರೆಗೆ ಈಗಾಗಲೇ ನೇಮಕ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು.**

#####

**ವಿಷಯ ಸಂಖ್ಯೆ: 186.06**

**ವಿಷಯ: 68ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 16-04-2026ರಂದು ನಡೆದ 68ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ತೀರ್ಮಾನದ ನಡಾವಳಿಯನ್ನು, ದಿನಾಂಕ: 07-08-2026ರಂದು ನಡೆಯಲಿರುವ 186ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

ವಿಷಯ ಸಂಖ್ಯೆ: 68.01ರ ವಿಷಯಕ್ಕೆ ಸಂಬಂಧಿಸಿದಂತೆ – **ಪರೀಕ್ಷಾ ವಿಭಾಗದ ವಿದ್ಯಾರ್ಥಿಗಳ ಕುಂದುಕೊರತೆ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳು ವಿದ್ಯಾರ್ಥಿಗಳಿಗೆ ತೊಂದರೆಗಳಾಗದ ರೀತಿಯಲ್ಲಿ ಕ್ರಮವನ್ನು ಅನುಸರಿಸುವುದು ಸೂಕ್ತವೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

*****

**ವಿಷಯ ಸಂಖ್ಯೆ: 68.03ರ ವಿಷಯಕ್ಕೆ ಸಂಬಂಧಿಸಿದಂತೆ – ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳ ಸಂಭಾವನೆ ಮತ್ತು ಭತ್ಯೆಗಳ ದರಗಳನ್ನು ಪರಿಷ್ಕರಿಸುವ ವಿಷಯವಾಗಿರುತ್ತದೆ** ಎಂದು ಡೀನ್(ಶೈಕ್ಷಣಿಕ) ರವರು ಸಭೆಗೆ ತಿಳಿಸಿದರು.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಕೇಂದ್ರ ಸ್ಥಾನದಿಂದ ಹೊರ ಸ್ಥಳಕ್ಕೆ ಹೋಗುವ ನೌಕರರಿಗೆ ಕೆ.ಸಿ.ಎಸ್.ಆರ್ ನಿಯಮಗಳ ಪ್ರಕಾರ ಸಂಭಾವನೆಯನ್ನು ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನೀಡುತ್ತಿರುವುದು ತುಂಬಾ ಕಡಿಮೆಯಾಗಿದ್ದು, ಯಾರು ಸಹ ಹೊರ ಹೋಗಲು ಇಷ್ಟ ಪಡುವುದಿಲ್ಲ. ಇವುಗಳನ್ನು ಮನಗಂಡು ಕೆ.ಸಿ.ಎಸ್.ಆರ್. ನಿಯಮಗಳ ರೀತ್ಯಾ ಪ್ರತಿ ಕಿ.ಮೀಟರ್‌ಗೆ ರೂ. 2/- ರ ಬದಲು ಪ್ರತಿ ಕಿ.ಮೀಟರ್‌ಗೆ ರೂ. 6/- ರಂತೆ ಪಾವತಿಸುವ ಸಂಬಂಧದ ಕರಡು ಪರಿನಿಯಮವನ್ನು ಸಿದ್ಧಪಡಿಸಿ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಈಗ ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ ಎಂದರು.

*****

**ಕುಲಪತಿಗಳು** **ಕುಲಸಚಿವರು**

**ವಿಷಯ ಸಂಖ್ಯೆ: 68.05ರ ವಿಷಯಕ್ಕೆ ಸಂಬಂಧಿಸಿದಂತೆ - ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.**

ಈ ವಿಷಯದ ಬಗ್ಗೆ ಡಾ. ಮಹೇಶ್ .ಎಸ್ ರವರು ಮಾತನಾಡಿ, ಕೆಲವು ಕಲಿಕಾರ್ಥಿ ಸಹಾಯ ಕೇಂದ್ರಗಳು ಈಗಾಗಲೇ ಕೆಲವು ತಪ್ಪುಗಳನ್ನು ಮಾಡಿರುವವರಿಗೆ ಮುಂದಿನ ದಿನಗಳಲ್ಲಿ ಅವರುಗಳಿಗೆ ನವೀಕರಣವನ್ನು ಮಾಡಬಾರದು ಮತ್ತು ಮುಂದೆ ಯಾವುದೇ ಕಾರಣಕ್ಕೂ ಆ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಮುಂದುವರಿಸಬಾರದು. ಇವರುಗಳಲ್ಲಿ ಹಲವಾರು ಪ್ರಪ್ರಥಮವಾಗಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತೆರೆದು ನಂತರ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾ ಕೇಂದ್ರಗಳನ್ನು ತೆರೆಯಲು ಅನುಮತಿ ಪಡೆಯುತ್ತಾರೆ. ಈ ರೀತಿ ಮಾಡುವುದರಿಂದ ಒಂದು ತಾಲ್ಲೂಕುವಾರು 2 ಪರೀಕ್ಷಾ ಕೇಂದ್ರಗಳನ್ನು ತೆರೆದಂತಾಗುತ್ತದೆ. ಈ ಬಗ್ಗೆ ಪರೀಕ್ಷಾ ಕೇಂದ್ರಗಳನ್ನು ಸರ್ಕಾರಿ ಕಾಲೇಜುಗಳಲ್ಲಿ ನಡೆಸುವುದು, ಅವುಗಳು ಸಿಗದಿದ್ದ ಪಕ್ಷದಲ್ಲಿ ಸೂಕ್ತವಾಗ Aided College ಗಳಿಗೆ ಮಾತ್ರ ಪರೀಕ್ಷಾ ಕೇಂದ್ರಗಳನ್ನು ನೀಡಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಶ್ರೀ. ರಮೇಶ್ ಗುಬ್ಬೇವಾಡ ರವರು ಮಾತನಾಡಿ ಬಿಜಾಪುರದಲ್ಲಿ 4 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಇನ್ನು ಮುಂದೆ ಕುಲಂಕುಷವಾಗಿ ಪರಿಶೀಲಿಸಿ, ಪರೀಕ್ಷಾ ಕೇಂದ್ರಗಳನ್ನು ನೀಡಲಾಗುವುದೆಂದು ಸಭೆಗೆ ತಿಳಿಸಿದರು.

ಈಗಾಗಲೇ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳನ್ನು ತೆರೆದಿದ್ದು, ಅಲ್ಲಿ ಪ್ರಾದೇಶಿಕ ನಿರ್ದೇಶಕರುಗಳು ಇರುತ್ತಾರೆ. ಅವರನ್ನು ಸಹ ಈ ಪರೀಕ್ಷಾ ಕೇಂದ್ರಗಳ ಉಸ್ತುವಾರಿ ನೋಡಿಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ, ವಿಶ್ವವಿದ್ಯಾನಿಲಯಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಯಾವುದು ಸೂಕ್ತವಾಗಿರುತ್ತದೆಂದು ತಿಳಿದು ಪರೀಕ್ಷಾ ಕೇಂದ್ರಗಳನ್ನು ಮಾಡಲು ಸದಸ್ಯರಾದ ಡಾ. ಮಹೇಶ್ .ಎಸ್ ರವರು ಸಭೆಗೆ ತಿಳಿಸಿದರು.

ಮುಂದುವರೆದು, ಈಗಾಗಲೇ ನಮ್ಮ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳು ಹಲವು ಕಡೆ ಸ್ವಂತ ಕಟ್ಟಡಗಳಿದ್ದು, ಅವುಗಳಲ್ಲಿ ಪ್ರವೇಶಾತಿ ಪ್ರಕ್ರಿಯೆ, ಸಂಪರ್ಕ ಕಾರ್ಯಕ್ರಮಗಳು ಮತ್ತು ಪರೀಕ್ಷೆಗಳನ್ನು ನಡೆಸುವುದರಿಂದ ವಿಶ್ವವಿದ್ಯಾನಿಲಯಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀಮತಿ. ಮಾಲತಿ .ಟಿ ರವರು ಮಾತನಾಡಿ ಸಿದ್ಧಪಾಠಗಳನ್ನು ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿಯೇ ನೀಡುವುದರಿಂದ ಹೆಚ್ಚು ಉಪಯೋಗವಾಗುತ್ತದೆ. ಕೆಲವು ವಿಭಾಗಗಳಲ್ಲಿ ಪಾಠಗಳನ್ನು ಬರೆಯುವುದಿಲ್ಲವೆಂದು ಈ ಹಿಂದಿನ ಸಭೆಗಳಲ್ಲಿ ಮಾನ್ಯ ಕುಲಪತಿಗಳು ತಿಳಿಸಿರುತ್ತಾರೆಂದು ಹೇಳಿದರು.

ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಈಗಾಗಲೇ ಸ್ಥಾಪನೆಗೊಂಡಿರುವ ಕೇಂದ್ರಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳನ್ನೊಳಗೊಂಡಂತೆ ಸಮಿತಿಗಳನ್ನು ರಚಿಸಲಾಗುವುದೆಂದು ಕುಲಪತಿಗಳು ಸಭೆಗೆ ತಿಳಿಸಿದರು.

ಮುಂದುವರೆದು, ಒಂದು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಕಡಿಮೆ ಎಂದರೆ, 100 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪಡೆಯಬೇಕು ಎಂದು ತಿಳಿಸಿದರು.

*****

**ವಿಷಯ ಸಂಖ್ಯೆ: 68.09ರ ವಿಷಯಕ್ಕೆ ಸಂಬಂಧಿಸಿದಂತೆ – ಕರಾಮುವಿಯ ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿರುವ ಬಗ್ಗೆ.**

ಡಾ. ಮಹೇಶ್ .ಎಸ್ ರವರು ಮಾತನಾಡಿ, ಕೆಲವು ವಿಭಾಗಗಳಲ್ಲಿ ಅರ್ಹರಿದ್ದರೂ ಅವರಿಗೆ ಅವಕಾಶ ಕೊಟ್ಟಿರುವುದಿಲ್ಲವೆಂದು ತಿಳಿಸಿ, ಮೈಸೂರು ವಿಶ್ವವಿದ್ಯಾನಿಲಯದಂತೆ ಕಾಲಕಾಲಕ್ಕೆ ವಿಭಾಗವಾರು ಅಧ್ಯಯನ ಮತ್ತು ಸಂಶೋಧನೆ ಮತ್ತು ಸ್ನಾತಕ/ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳನ್ನು ನೇಮಿಸುವ ವಿಚಾರದಲ್ಲಿ ಕಟ್ಟುನಿಟ್ಟಾಗಿ ವಿಶ್ವವಿದ್ಯಾನಿಲಯದ ಪರಿನಿಯಮಗಳನ್ನು ಪಾಲಿಸಬೇಕೆಂದು ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ಆವೃತ್ತಿ ಆಧಾರದ ಮೇಲೆ ನೇಮಕ ಮಾಡಬೇಕೆಂದು ಇತರೆ ಸದಸ್ಯರುಗಳು ಸಭೆಗೆ ತಿಳಿಸಿದರು.

ಕುಲಪತಿಗಳು ಮಾತನಾಡಿ, ಈ ವಿಷಯದ ಬಗ್ಗೆ ಅರ್ಹರಿರುವರಿಗೆ ವಿಭಾಗವಾರು ಅಧ್ಯಯನ ಮತ್ತು ಸಂಶೋಧನೆ ಮತ್ತು ಸ್ನಾತಕ/ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳನ್ನು ನೇಮಿಸುವ ಬಗ್ಗೆ ಕಟ್ಟುನಿಟ್ಟಾಗಿ ಮಾಡುತ್ತೇವೆಂದು ತಿಳಿಸಿದರು.

<u>ತೀರ್ಮಾನ</u> : **ಕರಾಮುವಿಯ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸಲು ಅನುಮೋದಿಸಲಾಯಿತು ಹಾಗೂ ಇನ್ನು ಮುಂದೆ ಪರಿನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.**

*****

**ವಿಷಯ ಸಂಖ್ಯೆ: 68.10ರ ವಿಷಯಕ್ಕೆ ಸಂಬಂಧಿಸಿದಂತೆ – ಕರಾಮುವಿಯಲ್ಲಿ ಸ್ಥಾಪಿಸಲಾಗಿರುವ/ಸ್ಥಾಪಿಸುವ 12 ಮಹಾನ್ ವ್ಯಕ್ತಿಗಳ ಅಧ್ಯಯನ ಪೀಠಗಳು, ಅಧ್ಯಯನ ಮತ್ತು ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರಗಳ ಪರಿನಿಯಮಗಳ ಅನುಮೋದನೆಗಾಗಿ.**

ಈ ಸಂಬಂಧ ಎಲ್ಲಾ ಪೀಠಗಳಿಗೆ ಪರಿನಿಯಮಗಳನ್ನು ರಚಿಸಲಾಗಿದ್ದು, ಕೆಲವು ಪರಿನಿಯಮಗಳು ಈಗಾಗಲೇ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿದ್ದು, ಇನ್ನೂ ಕೆಲವು ಅನುಮೋದನೆಯಾಗಿರುವುದಿಲ್ಲ ಈ ಶೈಕ್ಷಣಿಕ ಸಭೆಯಲ್ಲಿ ಕೆಲವು ಪೀಠಗಳ ಬಗ್ಗೆ ಪರಿನಿಯಮಗಳನ್ನು ರಚಿಸಿ ವ್ಯವಸ್ಥಾಪನ ಮಂಡಳಿ ಅನುಮೋದನೆಗೊಂಡ ನಂತರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ ಎಂದು ಕುಲಪತಿಗಳು ತಿಳಿಸಿದರು.

ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಪೀಠಗಳಿಗೆ ಕೆಲವರು ಹಲವಾರು ವರ್ಷಗಳಿಂದ ನಿರ್ದೇಶಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇತರರಿಗೂ ಸಹ ಪೀಠಗಳ ನಿರ್ವಹಣೆಗೆ ನಿರ್ದೇಶಕರನ್ನಾಗಿ ಆವೃತ್ತಿ ಆಧಾರದ ಮೇಲೆ ನೇಮಕ ಮಾಡಬೇಕೆಂದು ತಿಳಿಸಿದರು.

ಸದರಿ ವಿಷಯಕ್ಕೆ ಸದಸ್ಯರುಗಳಾದ ಶ್ರೀ. ರಮೇಶ್ ಗುಬ್ಬೇವಾಡ, ಶ್ರೀ. ಮಂಜು .ಆರ್, ಡಾ. ಬಿ.ಜಿ.ಪಾಟೀಲ್, ಶ್ರೀಮತಿ. ಮಾಲತಿ .ಟಿ ಮತ್ತು ಕುಮಾರಿ. ಪ್ರಾಚಿ ಗೌಡ ರವರುಗಳು ಸಹ ಧ್ವನಿಗೂಡಿಸಿದರು.

ಕುಲಪತಿಗಳು ಮಾತನಾಡಿ, ಇನ್ನು ಮುಂದೆ ಪೀಠಗಳ ನಿರ್ದೇಶಕರುಗಳನ್ನು ಪ್ರಕಟಣೆ ನೀಡಿ ಅರ್ಹರನ್ನು ನೇಮಿಸಲಾಗುವುದೆಂದು ತಿಳಿಸಿದರು.

*****

**ವಿಷಯ ಸಂಖ್ಯೆ: 68.12ರ ವಿಷಯಕ್ಕೆ ಸಂಬಂಧಿಸಿದಂತೆ - ಕರಾಮುವಿಯ KSOU Programme Center/KSOU Work Center ನ ಅಡಿಯಲ್ಲಿ ಸುಯೋಗ ಟ್ರಸ್ಟ್, ಮೈಸೂರು ರವರಿಂದ ಯೋಗ ವಿಜ್ಞಾನ ಎಂಬ ವಿಷಯದ ಒಂದು ವರ್ಷದ ಡಿಪ್ಲಮೋ ಕೋರ್ಸ್ ಅನ್ನು ಪ್ರಾರಂಭಿಸುವ ಬಗ್ಗೆ.**

ಯೋಗ ವಿಜ್ಞಾನ ಎಂಬ ಕೋರ್ಸ್ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ಯೋಗಾಭ್ಯಾಸ ಮಾಡುತ್ತಿದ್ದು, ಈ ವಿಷಯದ ಬಗ್ಗೆ ಡಿಪ್ಲಮೋ ಕೋರ್ಸ್ ಅನ್ನು ಪ್ರಾರಂಭಿಸಬಹುದೆಂದು ಸದಸ್ಯರೆಲ್ಲರೂ ಒಮ್ಮತದಿಂದ ಒಪ್ಪಿಗೆ ಸೂಚಿಸಿದರು.

*****

**ವಿಷಯ ಸಂಖ್ಯೆ: 68.15 ಮತ್ತು 68.16ರ ವಿಷಯಕ್ಕೆ ಸಂಬಂಧಿಸಿದಂತೆ – 2024–25ನೇ ಸಾಲಿನಲ್ಲಿ ವಿವಿಧ ಅಧ್ಯಯನ ಮತ್ತು ಸಂಶೋಧನಾ 23 ವಿಭಾಗಗಳಲ್ಲಿ ಒಟ್ಟು 122 ಪ್ರವೇಶಾತಿ ಹೊಂದಿರುವ ಸಂಶೋಧನಾರ್ಥಿಗಳಿಗೆ ತಾತ್ಕಾಲಿಕ ನೋಂದಣಿ ಪತ್ರ ನೀಡಿರುವ ಬಗ್ಗೆ.**

**ಮತ್ತು**

**2025–26ನೇ ಸಾಲಿನಲ್ಲಿ ಖಾಲಿಯಿರುವ ಪಿಹೆಚ್.ಡಿ ಸೀಟುಗಳಿಗೆ ಅಧಿಸೂಚನೆ ಹೊರಡಿಸುವ ಬಗ್ಗೆ.**

ಕುಲಪತಿಗಳು ಕುಲಸಚಿವರು

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಪಿಹೆಚ್.ಡಿ ಅಧಿಸೂಚನೆ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದ ನಂತರ ಮುಂದಿನ ಕ್ರಮವಹಿಸಬೇಕೆಂದು ಡಾ. ಮಹೇಶ್ .ಎಸ್ ರವರು ಸಭೆಗೆ ತಿಳಿಸಿದರು.

ಕುಲಪತಿಗಳು ಮಾತನಾಡಿ ಮುಂದಿನ ದಿನಗಳಲ್ಲಿ ಈ ಕಾರ್ಯವನ್ನು ಮಾಡಲಾಗುವುದೆಂದು ತಿಳಿಸಿದರು.

**ವಿಶ್ವವಿದ್ಯಾನಿಲಯದ ಪಿಹೆಚ್.ಡಿ ಅಧಿಸೂಚನೆಯ ನಂತರ ಆಯ್ಕೆ ಪ್ರಕ್ರಿಯೆಗಳನ್ನು ಕೇಂದ್ರೀಕೃತ ಪಿಹೆಚ್.ಡಿ ಸಮಿತಿಯನ್ನು ರಚಿಸಿ ಅದರಲ್ಲಿ ಮಾನ್ಯ ಕುಲಪತಿಗಳು, ಡೀನ್ (ಶೈಕ್ಷಣಿಕ) ಮತ್ತು ವಿಭಾಗದ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರ ಸಮ್ಮುಖದಲ್ಲಿ ಮಾಡಬೇಕೆಂದು ತಿಳಿಸಿದರು.**

*****

**ವಿಷಯ ಸಂಖ್ಯೆ: 68.19ರ ವಿಷಯಕ್ಕೆ ಸಂಬಂಧಿಸಿದಂತೆ – NCVET, New Delhi ವತಿಯಿಂದ KSOU ಗೆ Dual Awarding Body ಮಾನ್ಯತೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವು **NCVET, New Delhi** ಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯನಿರ್ವಹಿಸಬೇಕಾಗಿರುತ್ತದೆ. **NSDC** ರವರೊಂದಿಗೆ ಈಗಾಗಲೇ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇದರಿಂದ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಲಭ್ಯವಾಗಿರುವುದರಿಂದ ಅವುಗಳಿಂದ ಹೆಚ್ಚಿನ ಪ್ರಯೋಜನವನ್ನು ಮಾಡಿಕೊಳ್ಳಬೇಕೆಂದು ಕುಲಪತಿಗಳು ಸಭೆಗೆ ತಿಳಿಸಿದರು.

ಮುಂದುವರೆದು, ಈ ವಿಷಯಗಳ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ಸದಸ್ಯರಾದ ಕುಮಾರಿ. ಪ್ರಾಚಿ ಗೌಡ ಮತ್ತು ಶ್ರೀಮತಿ. ಮಾಲತಿ .ಟಿ ರವರು ಮಾತನಾಡಿ ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕುಲವಾಗುವ ರೀತ್ಯಾ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದರಿಂದ ಅನುಕೂಲವಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ **PMKK** ಮತ್ತು ರಾಜ್ಯ ಸರ್ಕಾರದ **CMKKY** ಗಳೊಂದಿಗೆ **MOU** ಮಾಡಿಕೊಂಡು ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದರಿಂದ ವಿಶ್ವವಿದ್ಯಾನಿಲಯಕ್ಕೂ ಹೆಚ್ಚಿನ ಅನುಕೂಲವಾಗುತ್ತದೆಂದು ಸಭೆಗೆ ತಿಳಿಸಿದರು.

*****

**ವಿಷಯ ಸಂಖ್ಯೆ: 68.20ರ ವಿಷಯಕ್ಕೆ ಸಂಬಂಧಿಸಿದಂತೆ – 2025–26ರ ಜನವರಿ ಆವೃತ್ತಿಯಲ್ಲಿನ ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿ ಕುರಿತು.**

ಕುಲಪತಿಗಳು ಮಾತನಾಡಿ, ಆನ್‌ಲೈನ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಕಡಿಮೆ ಎಂದರೆ 10,000 ವಿದ್ಯಾರ್ಥಿಗಳ ಪ್ರವೇಶಾತಿ ಆಗಬೇಕೆಂದು ಈಗಾಗಲೇ ಸಂಬಂಧಪಟ್ಟವರಿಗೆ ತಿಳಿಸಲಾಗಿದೆ ಎಂದು ತಿಳಿಸಿದರು.

*****

**ವಿಷಯ ಸಂಖ್ಯೆ: 68.22ರ ವಿಷಯಕ್ಕೆ ಸಂಬಂಧಿಸಿದಂತೆ – ಬಸವ ಕಲ್ಯಾಣ ಕೇಂದ್ರವನ್ನು ಬದಲಾವಣೆ ಮಾಡುವ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಲ್ಯಾಣ ಕರ್ನಾಟಕ ಭಾಗದ ಜನಪ್ರಿಯ ಮಾನ್ಯ ಶ್ರೀ. ಶರಣು ಸಲಗರ ಶಾಸಕರು, ಬಸವ ಕಲ್ಯಾನ, ವಿಧಾನಸಭಾ ಮತ ಕ್ಷೇತ್ರ, ಬೀದರ್ ಜಿಲ್ಲೆ ಹಾಗೂ ಮಾನ್ಯ ಶ್ರೀ. ಎಂ.ಜಿ ಮುಳೆ, ಶಾಸಕರು, ಕರ್ನಾಟಕ ವಿಧಾನ ಪರಿಷತ್ತು ಹಾಗೂ ಮಾಜಿ ಶಾಸಕರು, ಬಸವಕಲ್ಯಾಣ, ಬೀದರ್ ಜಿಲ್ಲೆ. ಇವರುಗಳು ಬೀದರ್ ಜಿಲ್ಲೆಯ ಗೋರ್ಟಾ (ಬಿ) ಗ್ರಾಮದಲ್ಲಿ ಈಗಾಗಲೇ 2024–25ನೇ ಸಾಲಿನಲ್ಲಿ ಸ್ಥಾಪಿಸಲಾಗಿರುವ ಕರಾಮುವಿ ಗೋರ್ಟಾ (ಬಿ) ಪ್ರಾದೇಶಿಕ ಕೇಂದ್ರ ಕಚೇರಿಯನ್ನು ತೆರೆದು ಕಾರ್ಯವನ್ನು ನಿರ್ವಹಿಸುತ್ತಿದ್ದು, ಇದನ್ನು ಜಗದ್ಗುರು ಮಹಾತ್ಮ ಬಸವೇಶ್ವರ ಅವರ ಕರ್ಮಭೂಮಿಯಾಗಿರುವ ಬಸವಕಲ್ಯಾಣಕ್ಕೆ ಸ್ಥಳಾಂತರಿಸಿ, ಬಸವ ಕಲ್ಯಾಣ ಕೇಂದ್ರವನ್ನು ಪ್ರವೇಶಾತಿ ಸಂಬಂಧವಾಗಿ **Sub-Centre** ಆಗಿ ಪರಿಗಣಿಸಲು ಶೈಕ್ಷಣಿಕ ಮಂಡಳಿಯಲ್ಲಿ ತೀರ್ಮಾನವಾಗಿರುತ್ತದೆಂದು ಕುಲಪತಿಗಳು ಸಭೆಯ ಗಮನಕ್ಕೆ ತಂದರು.

Sharanappa prahash

**ಕುಲಪತಿಗಳು** **ಕುಲಸಚಿವರು**

ಸದಸ್ಯರಾದ ಡಾ. ಬಿ.ಜಿ. ಪಾಟೀಲ್‌ರವರು ಮಾತನಾಡಿ ಪ್ರವೇಶಾತಿಯನ್ನು ಜಗದ್ಗುರು ಮಹಾತ್ಮ ಬಸವೇಶ್ವರ ಅವರ ಕರ್ಮಭೂಮಿಯಾಗಿರುವ ಬಸವಕಲ್ಯಾಣಕ್ಕೆ ಕೊಟ್ಟರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ತಿಳಿಸಿದರು.

**ತೀರ್ಮಾನ :** 1) ಎಸ್.ಎಸ್.ಕೆ ಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಪದವಿ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯ, ಬಸವಕಲ್ಯಾಣ ಬೀದರ್ ಜಿಲ್ಲೆ ಇಲ್ಲಿ ಪ್ರವೇಶಾತಿ ಕೇಂದ್ರವನ್ನು ತೆರೆಯಲು ಮುಂದಿನ ಕ್ರಮವಹಿಸುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

2) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 68ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳ ಬಗ್ಗೆ ಚರ್ಚೆ ನಡೆದು, ಅವುಗಳಲ್ಲಿ ಕೆಲವು ತೀರ್ಮಾನಗಳಾಗಿದ್ದು, ಅವುಗಳನ್ನು ಅಳವಡಿಸಿಕೊಳ್ಳಲು ಮತ್ತು ಉಳಿದ ವಿಷಯಗಳ ತೀರ್ಮಾನಗಳನ್ನು ಸಭೆಯು ಅನುಮೋದಿಸಿತು.

#####

**ವಿಷಯ ಸಂಖ್ಯೆ: 186.07**

**ವಿಷಯ:** **ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ ಟೋನರ್‌ಗಳನ್ನು ಖರೀದಿಸಲು ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಅರ್ಹ ಟೆಂಡರ್‌ದಾರರನ್ನು ಅಂತಿಮಗೊಳಿಸಿ ಎಲ್–1 ಬಿಡ್‌ದಾರರೊಂದಿಗೆ ದರಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿರುವ ಬಗ್ಗೆ.**

– * –

ವಿಶ್ವವಿದ್ಯಾನಿಲಯದಲ್ಲಿರುವ ವಿಭಾಗಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಖರೀದಿಸುವ ಸಂಬಂಧ ಟೆಂಡರ್‌ನ ಅಂದಾಜು ಮೌಲ್ಯವನ್ನು ರೂ. 1,30,00,000/– (ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ನಿಗದಿಪಡಿಸಿ ಕೆ.ಟಿ.ಪಿ.ಪಿ ಕಾಯ್ದೆ/ನಿಯಮಗಳನ್ವಯ ದಿನಾಂಕ: 04.02.2026 ರಂದು E-Procurement ನ K.P.P.P (Karnataka Public Procurement Portal) ಮುಖಾಂತರ ಟೆಂಡರ್ ಆಹ್ವಾನಿಸಲಾಗಿತ್ತು ಟೆಂಡರ್‌ಅನ್ನು ಅಂತಿಮಗೊಳಿಸುವ ಸಂಬಂಧ Tender Evaluation Committee ಯನ್ನು ರಚಿಸಲಾಗಿತ್ತು.

ಸದರಿ ಟೆಂಡರ್‌ನಲ್ಲಿ, 01. Kanagraj Akila {M/s. SM Copiers And Service, Bangalore} 02. Soumya Venugopal {M/s. Sumukha Office Solutions, Mysuru} 03. Ashok Bhura Nor {M/s. Royal Print Technology, Bengaluru / Mumbai} 04. G Narasimha Murthy {M/s. Synergy Inc, Bengaluru} ಈ ನಾಲ್ಕು ಮಂದಿ ಬಿಡ್‌ದಾರರು ಬಿಡ್‌ಗಳನ್ನು ಸಲ್ಲಿಸಿದ್ದರು.

ತಾಂತ್ರಿಕ ಬಿಡ್‌ಅನ್ನು ಅಂತಿಮಗೊಳಿಸುವ ಸಂಬಂಧ ದಿನಾಂಕ: 18.03.2026 ರಂದು ನಡೆದ ಸಭೆಯಲ್ಲಿ 01. Kanagraj Akila {M/s. SM Copiers and Service, Bangalore} ಮತ್ತು 03. Ashok Bhura N or {M/s. Royal Print Technology, Bengaluru/Mumbai} ಈ ಎರಡು ಸಂಸ್ಥೆಯವರು ಟೆಂಡರ್ ನಲ್ಲಿ ಕೋರಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸದ ಕಾರಣ ಇವರ ತಾಂತ್ರಿಕ ಬಿಡ್‌ಅನ್ನು ತಿರಸ್ಕರಿಸಿ ಶಿಫಾರಸ್ಸು ಮಾಡಿತ್ತು.

ಉಳಿದ ಎರಡು ಸಂಸ್ಥೆಗಳಾದ 02. Soumya Venugopal {M/s. Sumukha Office Solutions, Mysuru} ಮತ್ತು 04. G Narasimha Murthy {M/s. Synergy Inc, Bengaluru} ಈ ಎರಡು ಸಂಸ್ಥೆಯವರು ಟೆಂಡರ್ ನಲ್ಲಿ ಕೋರಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸಿದ್ದರಿಂದ ಇವರ

ಕುಲಪತಿಗಳು ಕುಲಸಚಿವರು

ಆರ್ಥಿಕ ಬಿಡ್‌ಅನ್ನು ಅಂಗೀಕರಿಸಿ ಈ ಎರಡು ಸಂಸ್ಥೆಗಳ ಆರ್ಥಿಕ ಬಿಡ್ ಅನ್ನು ತೆರೆಯಲು ಸರ್ವಾನುಮತದಿಂದ ಒಪ್ಪಿ ಶಿಫಾರಸ್ಸು ಮಾಡಿತ್ತು. (ಅನುಬಂಧ–ಅ)

ಆರ್ಥಿಕ ಬಿಡ್ ಅನ್ನು ಅಂತಿಮಗೊಳಿಸುವ ಸಂಬಂಧ ದಿನಾಂಕ: 24.03.2026 ರಂದು ನಡೆದ ಸಭೆಯಲ್ಲಿ ಆರ್ಥಿಕ ಬಿಡ್‌ಗೆ ಅರ್ಹತೆ ಹೊಂದಿದಂತಹ ಎರಡು ಸಂಸ್ಥೆಗಳಾದ,

01. M/s. Sumukha Office Solution, Mysuru, ಇವರು ಆರ್ಥಿಕ ಬಿಡ್‌ಗೆ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳ ಕ್ರಮಸಂಖ್ಯೆ 01 ರಿಂದ 101 ಕ್ಕೆ ಒಟ್ಟಾರೆ ಮೊತ್ತ ರೂ. 1,94,550.50/- (ಒಂದು ಲಕ್ಷದ ತೊಂಭತ್ತ ನಾಲ್ಕು ಸಾವಿರದ ಐದು ನೂರ ಐವತ್ತು ರೂಪಾಯಿ ಮತ್ತು ಐವತ್ತು ಪೈಸೆ ಮಾತ್ರ) ಗಳ ಮೊತ್ತ ನಮೂದಿಸಿರುತ್ತಾರೆ.

02. M/s. Synergy Inc, Bengaluru. ಇವರು ಆರ್ಥಿಕ ಬಿಡ್‌ಗೆ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳ ಕ್ರಮಸಂಖ್ಯೆ 01 ರಿಂದ 101 ಕ್ಕೆ ಒಟ್ಟಾರೆ ಮೊತ್ತ ರೂ. 2,13,789/- (ಎರಡು ಲಕ್ಷದ ಹದಿಮೂರು ಸಾವಿರದ ಏಳು ನೂರ ಎಂಭತ್ತೊಂಬತ್ತು ರೂಪಾಯಿಗಳು ಮಾತ್ರ)ಗಳ ಮೊತ್ತ ನಮೂದಿಸಿರುತ್ತಾರೆ.

ಈ ಎರಡು ಸಂಸ್ಥೆಯವರು ಸಲ್ಲಿಸಿದ್ದ ಆರ್ಥಿಕ ಬಿಡ್ ದರಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಟೆಂಡರ್ ಅಧಿಸೂಚನೆಯ General Terms and conditions for eligible tenderersನ ಕ್ರಮಸಂಖ್ಯೆ–26 (Overall lowest rates will be considered for award of contract) ರ ಷರತ್ತಿನಂತೆ, ಎಲ್–1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ E-Procurement ನ K.P.P.P ಮುಖಾಂತರ ದರ ಸಂಧಾನ ಮಾಡಲು ತೀರ್ಮಾನಿಸಿ ಸಭೆಯನ್ನು ಮುಂದೂಡಲಾಯಿತು. (ಅನುಬಂಧ–ಆ)

ದಿನಾಂಕ: 01.04.2026 ರಂದು ನಡೆದ ಸಭೆಯಲ್ಲಿ ಎಲ್–1 ಬಿಡ್‌ದಾರರು E-Procurement ನ K.P.P.P ಯಲ್ಲಿ ಪ್ರತಿಯೊಂದು ಸಾಮಗ್ರಿಗಳಿಗೂ ನಮೂದಿಸಿರುವ Negotiated Unit Price ಗಳನ್ನು ಪರಿಶೀಲಿಸಿ ಆರ್ಥಿಕ ಬಿಡ್ ಅನ್ನು ಅಂತಿಮಗೊಳಿಸಿ ಶಿಫಾರಸ್ಸು ಮಾಡಿರುತ್ತದೆ. (ಅನುಬಂಧ–ಇ)

ವಿಶ್ವವಿದ್ಯಾನಿಲಯದ ವಿಭಾಗಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಅಗತ್ಯವಾಗಿ ಬೇಕಾಗಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಎಲ್–1 ದರಗಳಲ್ಲಿ ಖರೀದಿಸುವ ಸಂಬಂಧ ಎಲ್–1 ಬಿಡ್‌ದಾರರೊಂದಿಗೆ ಒಂದು ವರ್ಷದ ಅವಧಿಗೆ ದರಗಳ ಕುರಿತು ದರ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. (ಅನುಬಂಧ–ಈ)

- ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ದಿನಾಂಕ: 09.01.2026 ರ ನಂತರ ಖರೀದಿಸಲಾಗಿರುವುದಿಲ್ಲ.
- ವಿಶ್ವವಿದ್ಯಾನಿಲಯದಲ್ಲಿ ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರವೇಶಾತಿ ಪ್ರಕ್ರಿಯೆ ಮತ್ತು ಪರೀಕ್ಷೆಗಳು ನಡೆಯುತ್ತಿದೆ ಮತ್ತು ಕಚೇರಿಗಳ ದಿನನಿತ್ಯದ ಕೆಲಸ ಕಾರ್ಯಗಳಿಗೂ ತೊಂದರೆಯಾಗದಂತೆ ಕ್ರಮವಹಿಸಬೇಕಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಟೆಂಡರ್‌ನ ಮೌಲ್ಯಮಾಪನಾ ಸಮಿತಿಯು ಟೆಂಡರ್‌ಅನ್ನು ಅಂತಿಮಗೊಳಿಸಿರುವ ಕ್ರಮಕ್ಕೆ, ಟೆಂಡರ್‌ನಲ್ಲಿ ಅರ್ಹತೆ ಪಡೆದ ಎಲ್–1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ಒಂದು ವರ್ಷದ ಅವಧಿಗೆ ಮಾಡಿಕೊಂಡಿರುವ ದರಕರಾರು ಒಪ್ಪಂದಕ್ಕೆ, ವಿಶ್ವವಿದ್ಯಾನಿಲಯದ ವಿಭಾಗಗಳು ಮತ್ತು ಪ್ರಾದೇಶಿಕ

ಕುಲಪತಿಗಳು ಕುಲಸಚಿವರು

ಕೇಂದ್ರಗಳ ಬೇಡಿಕೆ ಅನುಸಾರ ಎಲ್–1 ದರಗಳಲ್ಲಿ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಮೂರರಿಂದ ನಾಲ್ಕು ತಿಂಗಳಿಗೊಮ್ಮೆ ಬೇಡಿಕೆ ಅನುಸಾರ ಕಾರ್ಯಾದೇಶ ನೀಡಿ ಖರೀದಿಸಲು ಕೈಗೊಂಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ ವಿಷಯವನ್ನು ಮಂಡಿಸಿದೆ.

*****

ಕುಲಪತಿಗಳು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ 2 ಬಾರಿ ಪ್ರವೇಶಾತಿ ಮತ್ತು ಪರೀಕ್ಷೆಗಳು ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಕೆಲಸ–ಕಾರ್ಯಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಇವುಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಇವುಗಳನ್ನು ನಿಯಮಾನುಸಾರ ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವವರಿಂದ ಎಲ್-1 ರವರು ನಮೂದು ಮಾಡಿರುವ ದರಗಳಲ್ಲಿ ಖರೀದಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ. ಯತೀಶ್ ರವರು ಮಾತನಾಡಿ ಈ ಹಿಂದೆ ಈ ಟೆಂಡೆರ್‌ನಲ್ಲಿ ಎಷ್ಟು ಜನ ಭಾಗವಹಿಸಿದ್ದರು ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿರುವ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡಲು ಟೆಂಡೆರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಹಲವರು ಭಾಗವಹಿಸಿದ್ದು, Technical ಬಿಡ್‌ನಲ್ಲಿ ಮೂವರು ಮಾತ್ರ ಹಾಜರಾಗಿದ್ದು, ಮುಂದಿನ Finance ಬಿಡ್‌ನಲ್ಲಿ ಇಬ್ಬರು ಮಾತ್ರ ಹಾಜರಾಗಿದ್ದು, ಅದರಲ್ಲಿ M/s. Sumukha Office Solutions, Mysuru ಇವರು ಅರ್ಹರಾಗಿ ಎಲ್– 1 ಆಗಿರುತ್ತಾರೆ ಎಂಬ ವಿವರಗಳನ್ನು ಕಡತದಲ್ಲಿ ಪರಿಶೀಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಟೆಂಡರ್‌ನಲ್ಲಿ ಅರ್ಹತೆ ಪಡೆದ ಎಲ್–1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ಒಂದು ವರ್ಷದ ಅವಧಿಗೆ ದರ ಕರಾರು ಒಪ್ಪಂದ ಮಾಡಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಬೇಕಾಗಿರುವ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಬೇಡಿಕೆ ಅನುಸಾರ ಎಲ್-1 ರವರ ದರಗಳಲ್ಲಿ ಖರೀದಿಸಲು ಸಭೆಯು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 186.08**

**ವಿಷಯ:** **ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಪದೋನ್ನತಿ ಸಂಬಂಧ ಕುಂದು ಕೊರತೆ ನಿವಾರಣಾ ಸಮಿತಿ ಸಭೆಯ ವರದಿಯನ್ವಯ ಕ್ರಮವಹಿಸಿರುವ ಕುರಿತು.**

– * –

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಹಾಗೂ ಇತರೆ ತತ್ಸಮಾನ ವೃಂದದವರಿಗೆ ಮುಂದಿನ ಹಂತದ ಪದೋನ್ನತಿ ನೀಡುವ ಸಂಬಂಧ "Screening-cum-Evaluation Committee and Selection Committee" ಯ ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಯ ಶಿಫಾರಸ್ಸು, ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಮುಂದಿನ ಹಂತದ ಪದೋನ್ನತಿಯನ್ನು ನೀಡಿ ಆದೇಶ ಹೊರಡಿಸಲಾಗಿರುತ್ತದೆ.

ಪದೋನ್ನತಿಗೆ ಸಂಬಂಧಿಸಿದಂತೆ 09 ಅಧ್ಯಾಪಕ ವೃಂದದವರುಗಳು ತಮ್ಮ ಅಹವಾಲುಗಳನ್ನು ಸಲ್ಲಿಸಿದ್ದು, ಸದರಿ ಅಹವಾಲುಗಳನ್ನು ಪರಿಶೀಲಿಸಲು ದಿನಾಂಕ: 02.04.2025ರ ಆದೇಶದನ್ವಯ 'ಕುಂದು ಕೊರತೆ ನಿವಾರಣಾ ಸಮಿತಿ'ಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಅಧ್ಯಾಪಕ ವೃಂದದವರುಗಳು ಸಲ್ಲಿಸಿರುವ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ದಿನಾಂಕ: 11.11.2025ರಂದು ಅಂತಿಮ ಸಭೆಯನ್ನು ನಡೆಸಿ,

**ಕುಲಪತಿಗಳು** **ಕುಲಸಚಿವರು**

ಸಮಿತಿಯ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಸಮಿತಿಯ ವರದಿಯನ್ನು ಕುಲಸಚಿವರು ಸಹಿ ಮಾಡಿ ಆಡಳಿತ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಕುಂದು ಕೊರತೆ ನಿವಾರಣಾ ಸಮಿತಿಯ ಶಿಫಾರಸ್ಸಿನ್ವಯ ಕ್ರಮವಹಿಸುವ ಮುಂದಿನ ಹಂತದ ಪದೋನ್ನತಿಗೆ ದಿನಾಂಕವನ್ನು ಪರಿಷ್ಕರಿಸಲು ಮಾನ್ಯ ಕುಲಪತಿಗಳು ಆದೇಶ ನೀಡಿರುವ ಹಿನ್ನೆಲೆಯಲ್ಲಿ 02 ಅಧ್ಯಾಪಕರುಗಳಿಗೆ ಮುಂದಿನ ಹಂತದ ಪದೋನ್ನತಿಯ ದಿನಾಂಕವನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ.

**ವಿವರ ಈ ಕೆಳಗಿನಂತಿರುತ್ತದೆ:**

| ಕ್ರಮ ಸಂಖ್ಯೆ | ಅಧ್ಯಾಪಕರ ಹೆಸರು, ವಿಭಾಗ ಮತ್ತು ಅಧ್ಯಾಪಕರ ಕೋರಿಕೆ | ಕುಂದು ಕೊರತೆ ನಿವಾರಣಾ ಸಮಿತಿಯ ಶಿಫಾರಸ್ಸು ಹಾಗೂ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮ |
|---|---|---|
| 1. | ಡಾ. ಡಿ.ಎಂ. ಮಹೇಶ<br>ಸಹಾಯಕ ಪ್ರಾಧ್ಯಾಪಕರು,<br>ಗಣಕ ವಿಜ್ಞಾನ ಅಧ್ಯಯನ ವಿಭಾಗ | ಡಾ. ಡಿ.ಎಂ. ಮಹೇಶ್, ಸಹಾಯಕ ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಇವರಿಗೆ ಪಿಹೆಚ್.ಡಿ ಪದವಿಯನ್ನು ಪಡೆದ ದಿನಾಂಕ:04.11.2018ರಿಂದ ಜಾರಿಗೆ ಬಂದಂತೆ Academic Level 10 to Academic Level 11 ಹಂತದ ಪದೋನ್ನತಿಯನ್ನು ಪರಿಷ್ಕರಿಸಬಹುದಾಗಿದ್ದು, Academic Level 11 to Academic Level 12 ಹಂತದ ಪದೋನ್ನತಿಯನ್ನು ಮೊದಲನೇ ಹಂತದ ಪದೋನ್ನತಿ ಪಡೆದ ನಂತರ ಐದು ವರ್ಷಗಳ ಅವಧಿಗೆ ದಿನಾಂಕ: 04.11.2023ರಿಂದ ಪರಿಷ್ಕರಿಸಬಹುದಾಗಿರುತ್ತದೆ ಎಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸಮಿತಿಯ ಶಿಫಾರಸ್ಸಿನನ್ವಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಡಾ. ಡಿ.ಎಂ. ಮಹೇಶ್‌ರವರಿಗೆ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ ದಿನಾಂಕ: 08.12.2025ರಂದು ಆದೇಶ ಹೊರಡಿಸಲಾಗಿರುತ್ತದೆ. |
| 2. | ಡಾ. ಜೆ.ಎಲ್ ಬನಶಂಕರಿ<br>ಸಹಾಯಕ ಪ್ರಾಧ್ಯಾಪಕರು,<br>ಅರ್ಥಶಾಸ್ತ್ರ ಅಧ್ಯಯನ ವಿಭಾಗ | ಡಾ. ಬನಶಂಕರಿ ಜೆ.ಎಲ್, ಸಹಾಯಕ ಪ್ರಾಧ್ಯಾಪಕರು, ಅಥಶಾಸ್ತ್ರ ಅಧ್ಯಯನ ವಿಭಾಗ, ಸದರಿಯವರು ನೇಮಕಾತಿ ಹೊಂದಿದನಾಲ್ಕುವರ್ಷಗಳ ಅವಧಿಗೆ ದಿನಾಂಕ:10.05.2017ರಿಂದ ಜಾರಿಗೆ ಬಂದಂತೆ Academic Level 10 to Academic Level11 ಹಂತದ ಪದೋನ್ನತಿಯನ್ನು ಪರಿಷ್ಕರಿಸಬಹುದಾಗಿದ್ದು, Academic Level 11 to Academic Level 12 ಹಂತದ ಪದೋನ್ನತಿಯನ್ನು ಮೊದಲನೇ ಹಂತದ ಪದೋನ್ನತಿ ಪಡೆದ ನಂತರ ಐದು ವರ್ಷಗಳ ಅವಧಿಗೆ ದಿನಾಂಕ: 10.05.2022ರಿಂದ ಪರಿಗಣಿಸಬಹುದಾಗಿರುತ್ತದೆ ಎಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸಮಿತಿಯ ಶಿಫಾರಸ್ಸಿನನ್ವಯ ಡಾ. ಬನಶಂಕರಿ ಜೆ.ಎಲ್ ರವರಿಗೆ ದಿನಾಂಕವನ್ನು ಪರಿಷ್ಕರಿಸಿ ದಿನಾಂಕ: 10.12.2025ರಂದು ಆದೇಶ ಹೊರಡಿಸಲಾಗಿರುತ್ತದೆ. |

ಕುಲಪತಿಗಳು

ಕುಲಸಚಿವರು

| | | |
|---|---|---|
| 3. | ಡಾ. ಐಶ್ವರ್ಯ. ಆರ್<br>ಸಹಾಯಕ ಪ್ರಾಧ್ಯಾಪಕರು,<br>ವಾಣಿಜ್ಯಶಾಸ್ತ್ರ, ಅಧ್ಯಯನ ವಿಭಾಗ | ಡಾ. ಐಶ್ವರ್ಯ ಆರ್., ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರು ಕೋರಿರುವಂತೆ ಸದರಿಯವರ ಮನವಿಯನ್ನು ವಿಶ್ವವಿದ್ಯಾನಿಲಯವು ಆಡಳಿತಾತ್ಮವಾಗಿ, ಯು.ಜಿ.ಸಿ ನಿಯಮಾನುಸಾರ ಪರಿಶೀಲಿಸಿ ಪರಿಗಣಿಸಬಹುದಾಗಿರುತ್ತದೆ ಎಂದು ಶಿಪಾರಸ್ಸು ಮಾಡಿದ್ದು ಅದರನ್ವಯ ಕ್ರಮವಹಿಸಲಾಗಿರುತ್ತದೆ. |
| 4. | ಡಾ. ವೈ.ಪಿ. ಚಂದ್ರಶೇಖರ್<br>ಸಹಾಯಕ ಪ್ರಾಧ್ಯಾಪಕರು,<br>ಭೂಗೋಳಶಾಸ್ತ್ರ ಅಧ್ಯಯನ ವಿಭಾಗ | ಡಾ. ವೈ.ಪಿ. ಚಂದ್ರಶೇಖರ್‌ರವರು ಕೋರಿರುವಂತೆ ತಮ್ಮ ಹಿಂದಿನ ಸೇವೆಯನ್ನು ಪರಿಗಣಿಸುವ ಸಂಬಂಧ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಸದರಿಯವರು ಯುಜಿಸಿ ನಿಯಮಗಳನ್ವಯ ಷರತ್ತುಗಳನ್ನು ಪೂರೈಸದಿರುವ ಹಿನ್ನೆಲೆಯಲ್ಲಿ, ನಿಯಮಗಳನ್ವಯ ಪರಿಗಣಿಸಲು ಅವಕಾಶವಿರುವುದಿಲ್ಲ. |
| 5. | ಡಾ. ಪಿ. ಸವಿತಾ<br>ಸಹಾಯಕ ಪ್ರಾಧ್ಯಾಪಕರು,<br>ವಾಣಿಜ್ಯಶಾಸ್ತ್ರ, ಅಧ್ಯಯನ ವಿಭಾಗ | ಡಾ. ಪಿ. ಸವಿತಾರವರು ಯುಜಿಸಿ ನಿಯಮ 10.0ರ ಪ್ರಕಾರ ಷರತ್ತುಗಳನ್ನು ಪೂರೈಸದಿರುವ ಹಿನ್ನೆಲೆಯಲ್ಲಿ, ಸದರಿಯವರ ಹಿಂದಿನ ಸೇವೆಯನ್ನು ಪದೋನ್ನತಿಗೆ ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ವಿಶ್ವವಿದ್ಯಾನಿಲಯವು ಯುಜಿಸಿ ಮಾರ್ಗಸೂಚಿಯನ್ನು ಅಳವಡಿಸಿಕೊಂಡು ಪದೋನ್ನತಿಗೆ ಕ್ರಮವಹಿಸಿದ್ದು, ಅದರಂತೆ ಪದೋನ್ನತಿಯನ್ನು ನೀಡಲಾಗಿರುತ್ತದೆ. ಎಐಸಿಟಿಇ ನಿಯಮಗಳನ್ವಯ ಪದೋನ್ನತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. |
| 6. | ಡಾ. ನಾಗೇಂದ್ರಕುಮಾರ್.ಆರ್<br>ಸಹಾಯಕ ಪ್ರಾಧ್ಯಾಪಕರು,<br>ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ | UGC Regulation 10.0ರ ಪ್ರಕಾರ ಪರಿಗಣಿಸಲು ಅವಕಾಶವಿರುವುದಿಲ್ಲ. |
| 7. | ಡಾ. ಶರಣಮ್ಮ. ಆರ್<br>ಸಹಾಯಕ ಪ್ರಾಧ್ಯಾಪಕರು,<br>ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ | UGC Regulation 10.0ರ ಪ್ರಕಾರ ಪರಿಗಣಿಸಲು ಅವಕಾಶವಿರುವುದಿಲ್ಲ. |
| 8. | ಡಾ. ಕೃಷ್ಣಪ್ಪ. ಎನ್<br>ಸಹಾಯಕ ಪ್ರಾಧ್ಯಾಪಕರು,<br>ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ | UGC Regulation 10.0ರ ಪ್ರಕಾರ ಪರಿಗಣಿಸಲು ಅವಕಾಶವಿರುವುದಿಲ್ಲ. |
| 9. | ಡಾ. ಜಾನಕಿ. ಎಂ<br>ಸಹಾಯಕ ಪ್ರಾಧ್ಯಾಪಕರು,<br>ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ | UGC Regulation 10.0ರ ಪ್ರಕಾರ ಪರಿಗಣಿಸಲು ಅವಕಾಶವಿರುವುದಿಲ್ಲ. |

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, 'ಕುಂದು ಕೊರತೆ ನಿವಾರಣಾ ಸಮಿತಿ ಸಭೆ'ಯ ಶಿಫಾರಸ್ಸಿನ್ವಯ ಡಾ. ಡಿ.ಎಂ. ಮಹೇಶ್, ಡಾ. ಬನಶಂಕರಿ ಜೆ.ಎಲ್ ಇವರುಗಳಿಗೆ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸಿ, ಆದೇಶ ಹೊರಡಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮದ ವರದಿಯನ್ನು ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

*****

ಕುಲಪತಿಗಳು

ಕುಲಸಚಿವರು

ತೀರ್ಮಾನ : ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಅಧ್ಯಾಪಕರು ಹಾಗೂ ಇತರೆ ತತ್ಸಮಾನ ವೃಂದದವರಿಗೆ ಮುಂದಿನ ಹಂತದ ಪದೋನ್ನತಿ ನೀಡುವ ಸಂಬಂಧ **"Screening-cum-Evaluation Committee and Selection Committee"**ಯ ಸಭೆಗಳನ್ನು ನಡೆಸಲಾಗಿದ್ದು, 09 ಅಧ್ಯಾಪಕ ವೃಂದದವರುಗಳು ತಮ್ಮ ಅಹವಾಲುಗಳನ್ನು ಸಲ್ಲಿಸಿದ್ದು, ಸದರಿ ಅಹವಾಲುಗಳನ್ನು ಪರಿಶೀಲಿಸಲು ದಿನಾಂಕ: 02.04.2025ರ ಆದೇಶದನ್ವಯ 'ಕುಂದು ಕೊರತೆ ನಿವಾರಣಾ ಸಮಿತಿ'ಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಅಧ್ಯಾಪಕ ವೃಂದದವರುಗಳು ಸಲ್ಲಿಸಿರುವ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ದಿನಾಂಕ: 11.11.2025ರಂದು ಅಂತಿಮ ಸಭೆಯನ್ನು ನಡೆಸಿ, ಸಮಿತಿಯ ವರದಿಯನ್ನು ಕುಂದು ಕೊರತೆ ನಿವಾರಣಾ ಸಮಿತಿಯ ಶಿಫಾರಸ್ಸಿನ್ವಯ ಕ್ರಮವಹಿಸುವ ಮುಂದಿನ ಹಂತದ ಪದೋನ್ನತಿಗೆ ದಿನಾಂಕವನ್ನು ಪರಿಷ್ಕರಿಸಲು ಮಾನ್ಯ ಕುಲಪತಿಗಳು ಆದೇಶ ನೀಡಿರುವ ಹಿನ್ನೆಲೆಯಲ್ಲಿ 02 ಅಧ್ಯಾಪಕರುಗಳಿಗೆ ಮುಂದಿನ ಹಂತದ ಪದೋನ್ನತಿಯ ದಿನಾಂಕವನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುವ ವಿಷಯವನ್ನು ಸಭೆಯು ಅನುಮೋದಿಸಿತು.

#####

**ವಿಷಯ ಸಂಖ್ಯೆ: 186.09**

**ವಿಷಯ:** **ಡಾ.ಆರ್. ಹೆಚ್. ಪವಿತ್ರ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರನ್ನು ಸರ್ಕಾರದ ಆದೇಶದನ್ವಯ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಗೊಂಡಿರುವ ಸಂಬಂಧ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮಕ್ಕೆ ಅನುಸಮಸರ್ಥನೆ ಕೋರಿರುವ ಬಗೆಗೆ.**

– * –

ಡಾ. ಆರ್. ಹೆಚ್. ಪವಿತ್ರ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರು ದಿನಾಂಕ: 24.06.2026ರಂದು ಮನವಿ ಪತ್ರವನ್ನು ಸಲ್ಲಿಸಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 49 ಯುಓವಿ 2023, ದಿನಾಂಕ: 23.06.2026ರಲ್ಲಿ ಅಂತರ್ ವಿಶ್ವವಿದ್ಯಾನಿಲಯದ ವರ್ಗಾವಣೆಯಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಿ ಆದೇಶಿಸಲಾಗಿದ್ದು, ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

ಡಾ. ಪವಿತ್ರ ಆರ್. ಹೆಚ್, ಇವರು KPSC ಮೂಲಕ ದಿನಾಂಕ: 29.10.2007ರಿಂದ 03.09.2009ರ ವರೆಗೆ ಬಾಲಕರ ಸರ್ಕಾರಿ ಕಾಲೇಜು, ಮಂಡ್ಯ ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದ್ದು, ನಂತರ ದಿನಾಂಕ: 05.09.2009ರಿಂದ 10.12.2012ರ ವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥ ಬಡಾವಣೆ, ಮೈಸೂರು ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ, ಡಿಸೆಂಬರ್–2012ರ ನೇರ ನೇಮಕಾತಿಯಲ್ಲಿ ಯುಕ್ತ ದ್ವಾರದ ಮುಖಾಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿ, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು, ದಿನಾಂಕ: 10.12.2012ರಂದು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿಯವರು ವೃತ್ತಿ ಪದೋನ್ನತಿ ಯೋಜನೆಯಡಿ ದಿನಾಂಕ: 16.03.2021ರಿಂದ ಜಾರಿಗೆ ಬಂದಂತೆ ಸಹ ಪ್ರಾಧ್ಯಾಪಕರಾಗಿ ಹಾಗೂ ದಿನಾಂಕ: 15.03.2024ರಿಂದ ಜಾರಿಗೆ ಬಂದಂತೆ ಪ್ರಾಧ್ಯಾಪಕರಾಗಿ ಪದೋನ್ನತಿಗೊಂಡು ಕಾರ್ಯ ನಿರ್ವಹಿಸಿರುತ್ತಾರೆ. ಡಾ. ಆರ್. ಹೆಚ್. ಪವಿತ್ರರವರು 2007ರಲ್ಲಿ ಸರ್ಕಾರಿ ಸೇವೆಗೆ ನೇಮಕಗೊಂಡಿರುವ ಹಿನ್ನೆಲೆಯಲ್ಲಿ, ಸರಿಯವರು ನೂತನ ಪಿಂಚಣಿ ಯೋಜನೆಗೆ ಒಳಪಡುತ್ತಾರೆ.

ಡಾ. ಆರ್.ಹೆಚ್. ಪವಿತ್ರರವರು ಕರಾಮುವಿಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಸಂಬಂಧ ನಿರಾಕ್ಷೇಪಣಾ ಪತ್ರ ಕೋರಿದ್ದು, ಈ ಸಂಬಂಧ ದಿನಾಂಕ: 01.12.2023ರಂದು ನಡೆದ 175ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಸದರಿಯವರ ವಿಷಯವು ಚರ್ಚಿತಗೊಂಡಿದ್ದು, ಸಭೆಯಲ್ಲಿ ಡಾ. ಆರ್. ಹೆಚ್. ಪವಿತ್ರ, ಸಹಾಯಕ ಪ್ರಾಧ್ಯಾಪಕರು, ಅವರ ಹುದ್ದೆಯನ್ನು ವಿಭಾಗದಲ್ಲಿಯೇ ಉಳಿಸಿಕೊಂಡು ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ಮಾಡಬಹುದಾಗಿರುತ್ತದೆಂದು ತೀರ್ಮಾನವಾಗಿದ್ದು, ಈ ಸಭೆಯ

ಕುಲಪತಿಗಳು ಕುಲಸಚಿವರು

ತೀರ್ಮಾನದಂತೆ ಸದರಿಯವರಿಗೆ ದಿನಾಂಕ:23.01.2024ರಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ. ದಿನಾಂಕ: 08.10.2024ರಂದು ನಡೆದ 180ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಡಾ. ಆರ್. ಹೆಚ್. ಪವಿತ್ರರವನ್ನು ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಹುದ್ದೆಯೊಂದಿಗೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲವೆಂದು ತೀರ್ಮಾನವಾಗಿರುತ್ತದೆ.

ಡಾ. ಆರ್.ಹೆಚ್. ಪವಿತ್ರರವರು ದಿನಾಂಕ: 18.01.2025ರಂದು ಪತ್ರವನ್ನು ಸಲ್ಲಿಸಿ, 180ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನದಂತೆ ಹುದ್ದೆ ರಹಿತ ನಿರಾಕ್ಷೇಪಣ ಪತ್ರವನ್ನು ಸರ್ಕಾರಕ್ಕೆ ಹಾಗೂ ರಾಜ್ಯಪಾಲರ ಕಾರ್ಯಲಯಕ್ಕೆ ರವಾನಿಸುವಂತೆ ಕೋರಿದ್ದು, ಈ ಸಂಬಂಧ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯವು ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ಸಂಬಂಧ ಯಾವುದೇ ಪರಿನಿಯಮವನ್ನು ರಚಿಸಿಕೊಂಡಿರುವುದಿಲ್ಲ, ಈ ಹಿನ್ನೆಲೆಯಲ್ಲಿ ಅಂತರ್ ವಿಶ್ವವಿದ್ಯಾನಿಲಯದ ವರ್ಗಾವಣೆ ಅಡಿಯಲ್ಲಿ ಕರಾಮುವಿಯಿಂದ ಹುದ್ದೆ ರಹಿತ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲು ಆಕ್ಷೇಪಣೆ ಇಲ್ಲವೆಂದು ನಿರಾಕ್ಷೇಪಣ ಪತ್ರವನ್ನು ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 49 ಯುಓವಿ 2023, ದಿನಾಂಕ: 23.06.2026ರನ್ವಯ ಡಾ. ಆರ್. ಹೆಚ್. ಪವಿತ್ರ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಇವರನ್ನು ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ಇಲ್ಲಿನ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದಲ್ಲಿ ರಿಕ್ತವಿರುವ ಪ್ರಾಧ್ಯಾಪಕರ ಹುದ್ದೆಗೆ ಷರತ್ತಿಗೊಳಪಟ್ಟು ಅಂತರ್–ವಿಶ್ವವಿದ್ಯಾನಿಲಯ ವರ್ಗಾವಣೆ ಮಾಡಿ ಆದೇಶಿಸಲಾಗಿರುತ್ತದೆ. ಷರತ್ತುಗಳು:

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನೊಳಗೊಂಡಂತೆ ರಾಜ್ಯದ ಯಾವುದೇ ಇತರೆ ವಿಶೇಷ ವಿಶ್ವವಿದ್ಯಾನಿಲಯಗಳ ಬೋಧಕ–ಬೋಧಕೇತರ ಸಿಬ್ಬಂದಿಗಳು ಸದರಿಯವರ ವರ್ಗಾವಣೆಯನ್ನು ಪೂರ್ವ ನಿದರ್ಶನ / ದೃಷ್ಟಾಂತ ಪ್ರಕರಣವೆಂದು ಪರಿಗಣಿಸತಕ್ಕದ್ದಲ್ಲ ಹಾಗೂ ಕೋರಿಕೆಯನ್ನು ಸಲ್ಲಿಸತಕ್ಕದ್ದಲ್ಲ.
2. ಸದರಿಯವರು ಸೇವಾ ಜೇಷ್ಠತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ವೃಂದದ ಜೇಷ್ಠತೆಯಲ್ಲಿ ಕಿರಿಯವರಾಗಿ ನಿಗದಿಪಡಿಸತಕ್ಕದ್ದು.
3. ಸದರಿಯವರು ಹೊಸ ಪಿಂಚಣಿ ಯೋಜನೆಗೆ ಒಳಪಟ್ಟಿದ್ದಲ್ಲಿ ಅದೇ ಯೋಜನೆಯಡಿಯಲ್ಲಿ ಮುಂದುವರಿಸಲು ಹಾಗೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ PRAN ವರ್ಗಾವಣೆ ಮಾಡಲು NSDL ಸೂಕ್ತ ಕ್ರಮ ಜರುಗಿಸುವುದು.
4. ಸದರಿ ಬೋಧಕರು ಈಗಾಗಲೇ ಪಡೆದಿರುವ ವೃತ್ತಿ ಪದೋನ್ನತಿ ಯೋಜನೆ ಏನಾದರೂ ಇದ್ದಲ್ಲಿ ಆ ಬಡ್ತಿಯನ್ನು ವರ್ಗಾವಣೆಗೊಂಡ ವಿಶ್ವವಿದ್ಯಾನಿಲಯದಲ್ಲಿ ಪರಿಗಣಿಸತಕ್ಕದ್ದು.
5. ಸದರಿಯವರ ಲೀನ್‌ಅನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಖಾಯಂ ಆಗಿ ವರ್ಗಾಯಿಸತಕ್ಕದ್ದು.
6. ಸದರಿಯವರು ಮೈಸೂರು ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳು, ಸೇವಾ ಷರತ್ತು ಹಾಗೂ ನಿಬಂಧನೆಗಳು/ಪರಿನಿಯಮಗಳಿಗೆ ಒಳಪಟ್ಟಿರುತ್ತಾರೆ.
7. ಸದರಿ ಪ್ರಕರಣವು ಸ್ವ–ಇಚ್ಛಾ ಕೋರಿಕೆ ವರ್ಗಾವಣೆಯಾಗಿರುವ ಕಾರಣ ಸದರಿಯವರಿಗೆ ಯಾವುದೇ ಪ್ರಯಾಣ ಭತ್ಯೆ/ದಿನಭತ್ಯೆ ಮತ್ತು ಸೇರಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.
8. ಮೈಸೂರು ವಿಶ್ವವಿದ್ಯಾನಿಲಯದ ಇತರೆ ಖಾಯಂ ಸಿಬ್ಬಂದಿಗಳಿಗೆ ನೀಡುತ್ತಿರುವಂತೆ ಹೆಚ್.ಆರ್.ಎಂ.ಎಸ್ (HRMS) ತಂತ್ರಾಂಶದ ಮೂಲಕ ಸಂಬಂಧಿತರ ವೇತನ, ಭತ್ಯೆ ಮತ್ತು ಇತರೆ ಉಪಲಬ್ಧಿಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ನಿಯಮಗಳು ಹಾಗೂ ಪರಿನಿಯಮಗಳನ್ವಯ ಸದರಿಯವರ ಸೇವೆಯು ಅವರ ಸಹಜ ವಯೋ ನಿವೃತ್ತಿಯಾಗುವವರೆಗೆ (Superannuation) ಮುಂದುವರೆಯತಕ್ಕದ್ದು.
9. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸಂಬಂಧಿತರ ಸೇವಾ ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕಳುಹಿಸತಕ್ಕದ್ದು.

ಕುಲಪತಿಗಳು

ಕುಲಸಚಿವರು

ಸರ್ಕಾರದ ಆದೇಶದನ್ವಯ ಷರತ್ತಿಗೊಳಪಟ್ಟು, ಡಾ. ಆರ್. ಹೆಚ್. ಪವಿತ್ರರವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಹುದ್ದೆ ರಹಿತವಾಗಿ ವಿಶ್ವವಿದ್ಯಾನಿಲಯದ ಸೇವೆಯಿಂದ ದಿನಾಂಕ: 24.06.2026ರಂದು ಬಿಡುಗಡೆಗೊಳಿಸಲಾಗಿರುತ್ತದೆ.

ಸರ್ಕಾರದ ಆದೇಶದಲ್ಲಿನ ಷರತ್ತಿನಲ್ಲಿ ತಿಳಿಸಿರುವಂತೆ, ಡಾ.ಆರ್. ಹೆಚ್. ಪವಿತ್ರರವರು ನೂತನ ಪಿಂಚಣಿ ಯೋಜನೆಗೆ ಒಳಪಡುವುದರಿಂದ, ಸದರಿಯವರ PRAN ಖಾತೆಯಲ್ಲಿರುವ ಮೊತ್ತವನ್ನು PRAN ಸಮೇತ ಹಾಗೂ ಸದರಿಯವರ ಸೇವಾ ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಬೇಕಾಗಿರುತ್ತದೆ. ಆದುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಂದ ಬೇಬಾಕಿಯನ್ನು ಪಡೆದು ನಂತರ ಮುಂದಿನ ಕ್ರಮವಹಿಸಬೇಕಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ,

- ಡಾ. ಆರ್. ಹೆಚ್. ಪವಿತ್ರರವರನ್ನು ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ ಹಾಗೂ
- ಡಾ. ಆರ್. ಹೆಚ್. ಪವಿತ್ರರವರ ಸೇವಾ ಪುಸ್ತಕ ಹಾಗೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ PRAN ವರ್ಗಾವಣೆ ಮಾಡುವ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಸರ್ಕಾರದ ಆದೇಶ ಸಂಖ್ಯೆ: ಇಡಿ 49 ಯುಓವಿ 2023, ದಿನಾಂಕ: 23.06.2026ರಲ್ಲಿ ಅಂತರ್ ವಿಶ್ವವಿದ್ಯಾನಿಲಯದ ವರ್ಗಾವಣೆಯಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಿ ಆದೇಶಿಸಲಾಗಿದ್ದು, ಡಾ. ಆರ್. ಹೆಚ್. ಪವಿತ್ರರವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಹುದ್ದೆ ರಹಿತವಾಗಿ ವಿಶ್ವವಿದ್ಯಾನಿಲಯದ ಸೇವೆಯಿಂದ ದಿನಾಂಕ: 24.06.2026ರಂದು ಬಿಡುಗಡೆಗೊಳಿಸಲಾಗಿರುವ ಅಂಶಗಳನ್ನು ಸಭೆಯು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 186.10**

**ವಿಷಯ:** **ಶ್ರೀ. ರಾಜಶೇಖರ ಹೆಚ್. ಆರ್, ಉಪಕುಲಸಚಿವ (ಸ್ವಪ್ರ), ಪರೀಕ್ಷಾ ವಿಭಾಗ, ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿ ಕುರಿತು.**

– * –

ಶ್ರೀ. ರಾಜಶೇಖರ ಹೆಚ್. ಆರ್, ಉಪಕುಲಸಚಿವ (ಸ್ವಪ್ರ), ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು ಇವರು ಕಾಮಾಕ್ಷಿ ಆಸ್ಪತ್ರೆ, ಕುವೆಂಪುನಗರ, ಮೈಸೂರು ಇಲ್ಲಿ ಡಯಾಲಿಸಿಸ್ ಚಿಕಿತ್ಸೆಯನ್ನು ಪಡೆದು ರೂ. 50,192/–ಗಳ ಹುಂಡಿಯನ್ನು ಮರುಭರಿಕೆ ಮಾಡಿಕೊಡುವಂತೆ ಕೋರಿ ದಿನಾಂಕ: 15/06/2026ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿಯವರ ವೈದ್ಯಕೀಯ ಮರುಭರಿಕೆಯ ಹುಂಡಿಯನ್ನು KMAR ನಿಯಮ 1963 ಮತ್ತು CGHS ಬೆಂಗಳೂರು–2014ರ ದರಗಳನ್ವಯ ಪರಿಶೀಲಿಸಲಾಗಿದ್ದು, ಸದರಿಯವರಿಗೆ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. 49,146/–ಗಳಾಗಿರುತ್ತವೆ.

ಮುಂದುವರೆದು, ಪ್ರಸಕ್ತ 2026–27ನೇ ಆರ್ಥಿಕ ಸಾಲಿನಲ್ಲಿ ಸದರಿಯವರಿಗೆ ದಿನಾಂಕ:15/05/2026 ರಂದು ಮೊತ್ತ ರೂ. 80,070/–ಗಳನ್ನು ಪಾವತಿಸಿದ್ದು, ಪ್ರಸ್ತುತ ಪಾವತಿಸಬೇಕಿರುವ ಹುಂಡಿಯ ಮೊತ್ತ ರೂ. 49,146/–ಗಳನ್ನು ಸೇರಿಸಿದಲ್ಲಿ ವೈದ್ಯಕೀಯ ವೆಚ್ಚದ ಮರುಭರಿಕೆಯ ಒಟ್ಟಾರೆ ಮೊತ್ತ ರೂ. 1,29,216/–ಗಳಾಗುತ್ತದೆ. ವಿಶ್ವವಿದ್ಯಾನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು

**ಕುಲಪತಿಗಳು** **ಕುಲಸಚಿವರು**

ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂಬುದಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಹಿನ್ನಲೆಯಲ್ಲಿ ಸದರಿಯವರಿಗೆ ಮೇಲ್ಕಂಡ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ ರೂ. 49,146/– (ನಲವತ್ತೊಂಬತ್ತು ಸಾವಿರದ ಒಂದು ನೂರ ನಲವತ್ತಾರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

ಸದಸ್ಯರಾದ ಶ್ರೀಮತಿ. ಪ್ರಾಚಿ ಗೌಡ ರವರು ಮಾತನಾಡಿ ನೌಕರರುಗಳಿಗೆ ಆರೋಗ್ಯ ವಿಮೆಯನ್ನು ಮಾಡಿಸುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹೆಚ್ಚು ಹಣಕಾಸಿನ ಹೊರೆ ಬರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾನಿಲಯದಿಂದ ಹಾಗೂ ನೌಕರರಿಂದ ಇಂತಿಷ್ಟು ಹಣವನ್ನು ಪಡೆದು ವಾರ್ಷಿಕ ವಿಮಾ ಮೊತ್ತವನ್ನು ಮಾಹೆಯಾನ ವಿಂಗಡಿಸಿ ಅವರುಗಳ ವೇತನದಲ್ಲಿ ಕಡಿತಗೊಳಿಸಿ ಮಾಡುವುದು ಉತ್ತಮವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ನೌಕರರುಗಳಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಆದುದರಿಂದ ರೂ. 1 ಲಕ್ಷಕ್ಕಿಂತ ಹೆಚ್ಚಿನ ವೆಚ್ಚಗಳಾದಲ್ಲಿ ಅಂತಹ ವಿಷಯಗಳನ್ನು ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತಂದು ಅನುಮೋದನೆ ಪಡೆದು ನಂತರ ಪಾವತಿಸಲಾಗುತ್ತದೆ. ಹೃದಯ ಸಂಬಂಧಿ ಕಾಯಿಲೆಗಳಿಗೆ ಖಾಯಂ ನೌಕರರಿಗೆ ಅನುಕೂಲವಾಗುವ ದೃಷ್ಟಿಯಿಂದ ಈಗಾಗಲೇ ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಈಗಾಗಲೇ ಮೂರು ವರ್ಷಗಳಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀಮತಿ. ಪ್ರಾಚಿ ಗೌಡ ರವರು ಮಾತನಾಡಿ, ಇದೇ ರೀತ್ಯಾ ಇತರೆ ಸಂಸ್ಥೆ/ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಖಾಯಂ ನೌಕರರುಗಳಿಗೆ ಅನುಕೂಲ ಮಾಡುವುದು ಉತ್ತಮವೆಂದು ತಿಳಿಸಿದರು.

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2026–27ನೇ ಆರ್ಥಿಕ ಸಾಲಿನಲ್ಲಿ ಸದರಿಯವರಿಗೆ ದಿನಾಂಕ:15/05/2026 ರಂದು ಮೊತ್ತ ರೂ. 80,070/– ಗಳನ್ನು ಪಾವತಿಸಿದ್ದು, ಪ್ರಸ್ತುತ ಪಾವತಿಸಬೇಕಿರುವ ಹುಂಡಿಯ ಮೊತ್ತ ರೂ. 49,146/– ಗಳನ್ನು ಸೇರಿಸಿದಲ್ಲಿ ವೈದ್ಯಕೀಯ ವೆಚ್ಚದ ಮರುಭರಿಕೆಯ ಒಟ್ಟಾರೆ ಮೊತ್ತ ರೂ. 1,29,216/–ಗಳಾಗುತ್ತದೆ. ಆದುದರಿಂದ ಈಗ ಶ್ರೀ. ರಾಜಶೇಖರ ಹೆಚ್. ಆರ್, ಉಪಕುಲಸಚಿವ (ಸ್ವಪ್ರ), ಪರೀಕ್ಷಾ ವಿಭಾಗ, ಇವರಿಗೆ ಈಗ ವೈದ್ಯಕೀಯ ವೆಚ್ಚದ ಪ್ರಸ್ತುತ ಪಾವತಿಸಬೇಕಿರುವ ಹುಂಡಿಯ ಮೊತ್ತ ರೂ.49,146/–ಗಳನ್ನು ಪಾವತಿಸಲು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 186.11**

<u>ವಿಷಯ:</u> **ಡಾ. ಶಂಕರನಾರಾಣಪ್ಪ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ ನೀಡಲಾಗಿರುವ ಪದೋನ್ನತಿಗೆ ಅನುಸಮರ್ಥನೆ ಕೋರಿರುವ ಬಗೆಗೆ.**

– * –

ಡಾ. ಶಂಕರನಾರಾಣಪ್ಪ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರು ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ಯೋಜನೆಯಡಿ ಅರ್ಜಿ ಸಲ್ಲಿಸಿದ್ದು, ಸದರಿಯವರು ಸಲ್ಲಿಸಿರುವ ಅರ್ಜಿಯನ್ನು ಪ್ರಾಥಮಿಕ ಹಂತವಾಗಿ ಪರಿಶೀಲಿಸಿ, ದಿನಾಂಕ: 08.11.2023ರಂದು ನಡೆದ ಆಯ್ಕೆ ಸಮಿತಿ ಸಭೆಗೆ ಅರ್ಜಿಯನ್ನು ಮಂಡಿಸಲಾಗಿರುತ್ತದೆ. ಆಯ್ಕೆ ಸಮಿತಿಯ ಸದಸ್ಯರುಗಳು ಡಾ. ಶಂಕರನಾರಾಣಪ್ಪರವರ ಪದೋನ್ನತಿ ಅರ್ಜಿಯನ್ನು ಪರಿಶೀಲಿಸಿ, ಸಂದರ್ಶನ ನಡೆಸಿದ್ದು, ಸಭೆಯ ನಡವಳಿಯನ್ನು ಮುಚ್ಚಿದ ಲಕೋಟೆಯಲ್ಲಿ ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಆಯ್ಕೆ ಸಮಿತಿ ಸದಸ್ಯರುಗಳು ಪದೋನ್ನತಿಗೆ ಅರ್ಹತಾ

ಕುಲಪತಿಗಳು ಕುಲಸಚಿವರು

ದಿನಾಂಕವನ್ನು ನಮೂದಿಸಿರುವುದಿಲ್ಲ. ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ಸಭೆಯ ನಡವಳಿಯನ್ನು ದಿನಾಂಕ: 01.12.2023ರಂದು ನಡೆದ 175ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಲಾಗಿ, ಸದರಿ ಸಭೆಯಲ್ಲಿ ಡಾ. ಶಂಕರನಾರಾಣಪ್ಪರವರ ಪದೋನ್ನತಿಗೆ ಸಂಬಂಧಿಸಿದ ನಡವಳಿಯ ಬಗ್ಗೆಯೂ ಸಹ ಚರ್ಚಿಸಲಾಗಿರುತ್ತದೆ. ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ "ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಯುಜಿಸಿ ನಿಯಮಾನುಸಾರ ಪದೋನ್ನತಿಗೆ ಪರಿಗಣಿಸುವ ಸಂಬಂಧ ಆಯ್ಕೆ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ನೀಡಿರುವ ತೀರ್ಮಾನದ ಅನುಸಾರ ಮುಂದಿನ ಕ್ರಮಕೈಗೊಳ್ಳುವಂತೆ" ತೀರ್ಮಾನವಾಗಿರುತ್ತದೆ.

ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ ಹಾಗೂ ಆಯ್ಕೆ ಮಂಡಳಿ ಸಭೆಯ ನಡವಳಿಯನ್ನು ಕಡತದಲ್ಲಿ ಮಂಡಿಸಿ ಮುಂದಿನ ಆದೇಶ ಕೋರಲಾಗಿ, ಕುಲಸಚಿವರು ಡಾ. ಶಂಕರನಾರಾಣಪ್ಪರವರ ಪದೋನ್ನತಿಯ ಅರ್ಹತಾ ದಿನಾಂಕವನ್ನು ನೇಮಕಾತಿಗೊಂಡ ಮೂರು ವರ್ಷಗಳ ಅವಧಿಗೆ ದಿನಾಂಕ: 11.12.2015ಕ್ಕೆ ನಿಗದಿಪಡಿಸಬಹುದಾಗಿರುತ್ತದೆ ಎಂಬ ಅಂಶಕ್ಕೆ ಆದೇಶ ಕೋರಿದ್ದು, ಸದರಿ ವಿಷಯಕ್ಕೆ ಮಾನ್ಯ ಕುಲಪತಿಗಳು ಅನುಮೋದನೆ ನೀಡಿ, ಆಯ್ಕೆ ಸಮಿತಿಯ ನಡವಳಿಯಲ್ಲಿ 11.12.2015 ಎಂದು ದಿನಾಂಕವನ್ನು ನಮೂದಿಸಿ ಆದೇಶಿಸಿರುತ್ತಾರೆ.

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡಾ. ಶಂಕರನಾರಾಣಪ್ಪ ಇವರಿಗೆ ದಿನಾಂಕ: 11.12.2015ರಿಂದ ಜಾರಿಗೆ ಬಂದಂತೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ದಿನಾಂಕ: 19.02.2024ರಂದು ಆದೇಶ ಹೊರಡಿಸಲಾಗಿರುತ್ತದೆ ಹಾಗೂ ಪದೋನ್ನತಿಗೊಂಡ ಹುದ್ದೆಯಲ್ಲಿ ವೇತನ ನಿಗದಿಪಡಿಸಲಾಗಿರುತ್ತದೆ. ಅರ್ಹತಾ ದಿನಾಂಕಕ್ಕೆ ಸಂಬಂಧಿಸಿದಂತೆ ಅರ್ಹತಾ ದಿನಾಂಕವು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿರುವುದಿಲ್ಲವೆಂದು ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಲಾಗಿರುತ್ತದೆ.

ಮಾನ್ಯ ಕುಲಪತಿಗಳು ಅರ್ಹತಾ ದಿನಾಂಕವನ್ನು ನಮೂದಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ, ಡಾ. ಶಂಕರನಾರಾಣಪ್ಪ, ಇವರಿಗೆ ದಿನಾಂಕ: 11.12.2015ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಸಹಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಹೊರಡಿಸಲಾಗಿದ್ದು, ಪದೋನ್ನತಿ ನೀಡಿರುವ ಕ್ರಮವನ್ನು ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಅನುಸಮರ್ಥನೆ ಕೋರಿ ವಿಷಯ ಮಂಡಿಸಿದೆ.

*****

ಕುಲಪತಿಗಳು ಮಾತನಾಡಿ ಡಾ. ಶಂಕರನಾರಾಣಪ್ಪ ಇವರಿಗೆ ದಿನಾಂಕ: 11.12.2015ರಿಂದ ಜಾರಿಗೆ ಬಂದಂತೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ದಿನಾಂಕ: 19.02.2024ರಂದು ಆದೇಶ ಹೊರಡಿಸಲಾಗಿರುತ್ತದೆ ಹಾಗೂ ಪದೋನ್ನತಿಗೊಂಡ ಹುದ್ದೆಯಲ್ಲಿ ವೇತನ ನಿಗದಿಪಡಿಸಲಾಗಿರುತ್ತದೆ. ಅರ್ಹತಾ ದಿನಾಂಕಕ್ಕೆ ಸಂಬಂಧಿಸಿದಂತೆ ಅರ್ಹತಾ ದಿನಾಂಕವು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿರುವುದಿಲ್ಲವೆಂದು ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಲಾಗಿದ್ದು, ಅರ್ಹತಾ ದಿನಾಂಕವನ್ನು ನಮೂದಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ, ಡಾ. ಶಂಕರನಾರಾಣಪ್ಪ, ಇವರಿಗೆ ದಿನಾಂಕ: 11.12.2015ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಸಹಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಲಾಗಿದೆ ಎಂದು ತಿಳಿಸಿದರು.

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಡಾ. ಶಂಕರನಾರಾಣಪ್ಪ, ಇವರಿಗೆ ದಿನಾಂಕ: 11.12.2015ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಲಾಗಿದೆ. ಈ ಬಗ್ಗೆ ದಿನಾಂಕ: 19.02.2024ರಂದು ಆದೇಶ ಹೊರಡಿಸಲಾಗಿರುತ್ತದೆ ಹಾಗೂ ಪದೋನ್ನತಿಗೊಂಡ ಹುದ್ದೆಯಲ್ಲಿ ವೇತನ ನಿಗದಿಪಡಿಸಲಾಗಿರುವುದರಿಂದ ಈಗಾಗಲೇ, ಆಯ್ಕೆ ಸಮಿತಿಯ ನಡವಳಿಯಲ್ಲಿ ಅರ್ಹತಾ ದಿನಾಂಕ: 11.12.2015 ಎಂದು ದಿನಾಂಕವನ್ನು ನಮೂದಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ವ್ಯವಸ್ಥಾಪನ ಮಂಡಳಿ ಸಭೆಯು ಅನುಸಮರ್ಥಿಸಿತು.**

#####

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ: 186.12

**ವಿಷಯ:** ಕರಾಮುವಿ ನಿಲಯದ ಆವರಣಕ್ಕೆ 1MW on Grid Solor Power Plant ಅನ್ನು ಹೊಸದಾಗಿ ಅಳವಡಿಸುವ ಬಗ್ಗೆ.

– * –

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿವಿಧ ವಿಭಾಗಗಳ ಕಟ್ಟಡಗಳಿದ್ದು, ವಿವಿಧ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು, 635 KVA HT ವಿದ್ಯುತ್ ಸಂಪರ್ಕವನ್ನು CESCOM ನಿಂದ ಪಡೆಯಲಾಗಿದ್ದು, ಪ್ರತಿ ಮಾಹೆಯಲ್ಲಿ ಸುಮಾರು 75,000 Units ನಷ್ಟು ವಿದ್ಯುತ್ ವಿವಿನಿಲಯದ ಆವರಣದ ವಿವಿಧ ಕಟ್ಟಡಗಳಲ್ಲಿ ಒಳಕೆಯಾಗುತ್ತಿದ್ದು, ಕರಾಮುವಿ ನಿಲಯದ ಆವರಣದಲ್ಲಿ ಈಗಾಗಲೇ 200 KW on Grid Solor Power Plant ಅನ್ನು ಅಳವಡಿಸಲಾಗಿದ್ದು, ಸದರಿ ಸೋಲಾರ್ ಪವರ್ ಪ್ಲಾಂಟ್ ನಿಂದ ಸರಿಸುಮಾರು ಪ್ರತಿ ಮಾಹೆಯಲ್ಲಿ 20,000 ದಿಂದ 25,000 Units ಗಳು ವಿದ್ಯಚ್ಛಕ್ತಿ ಉತ್ಪತ್ತಿಯಾಗುತ್ತಿದ್ದು, ವಿವಿಧ ಕಟ್ಟಡಗಳಲ್ಲಿ ಒಳಕೆಯಾಗುತ್ತಿರುತ್ತದೆ. ಇನ್ನುಳಿದ 50,000 Units ಗಳನ್ನು CESCOM ನಿಂದ ಸರಬರಾಜು ಮಾಡಿಕೊಳ್ಳಲಾಗುತ್ತಿದ್ದು, ಪ್ರಸ್ತುತ ಪ್ರತಿ ಮಾಹೆಯಲ್ಲಿ ಸರಿಸುಮಾರು 6 ರಿಂದ 6.5 ಲಕ್ಷಗಳು ವಿದ್ಯುತ್ ಹುಂಡಿಯನ್ನು ಪಾವತಿಸಲಾಗುತ್ತಿರುತ್ತದೆ.

ಆದ್ದರಿಂದ ಕರಾಮುವಿ ನಿಲಯದ ಆವರಣದಲ್ಲಿರುವ ವಿವಿಧ ಕಟ್ಟಡಗಳ ಮೇಲ್ಚಾವಣಿಯ ಮೇಲೆ 1MW on Grid Solor Power Plant ಅನ್ನು ಅಳವಡಿಸಿದ್ದಲ್ಲಿ ಪ್ರತಿ ಮಾಹೆಗೆ ಸರಿ ಸುಮಾರು 1,25,000 Units ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾಗಿದ್ದು, ಇದರಲ್ಲಿ 50,000 Units ಗಳನ್ನು ವಿವಿನಿಲಯಕ್ಕೆ ಬಳಕೆ ಮಾಡಿಕೊಳ್ಳುವುದರಿಂದ ವಿದ್ಯುಚ್ಛಕ್ತಿ ಹೊರೆ ಕಡಿಮೆಯಾಗುವ ಸಂಬಂಧವಿರುತ್ತದೆ. ಅಲ್ಲದೆ ಇನ್ನುಳಿದ 75,000 Units ವಿದ್ಯಚ್ಛಕ್ತಿಯನ್ನು ಪ್ರಾದೇಶಿಕ ಕೇಂದ್ರಗಳ ಕಟ್ಟಡಗಳಿಗೆ ನೀಡಬಹುದಾಗಿರುತ್ತದೆ. ಇದರಿಂದ ಪ್ರತಿ ಮಾಹೆಗೆ ರೂ. 2,50,000/- ಗಳಷ್ಟು ಮೊತ್ತವನ್ನು ವಿವಿನಿಲಯಕ್ಕೆ ಬಳಸಬಹುದಾಗಿರುತ್ತದೆ.

ಆದ್ದರಿಂದ ವಿವಿನಿಲಯದ ಆವರಣಕ್ಕೆ 1 MW on Grid Solor Power Plant ಅಳವಡಿಸಲು ಒಂದು KWಗೆ ಅಂದಾಜು ರೂ.54,000 ಗಳಂತೆ 1000KW(1MW)ಗೆರೂ. 5.4 ಕೋಟಿಗಳು ವೆಚ್ಚವಾಗಬಹುದಾಗಿರುತ್ತದೆ.

ಪ್ರಸ್ತುತ ವಿವಿನಿಲಯದ ಆವರಣಕ್ಕೆ 1 MW on Grid Solor Power Plant ಅಳವಡಿಸುವುದರಿಂದ ಪ್ರತಿ ಮಾಹೆಯಲ್ಲಿ ಸುಮಾರು 1,25,000 Units ಗಳಷ್ಟು ವಿದ್ಯಚ್ಛಕ್ತಿಯನ್ನು ಉತ್ಪಾದಿಸಬಹುದು ಇದರಿಂದ ಪ್ರತಿ ಮಾಹೆಯಲ್ಲಿ ಸರಿ ಸುಮಾರು 8 ರಿಂದ 10 ಲಕ್ಷಗಳು ವಿವಿನಿಲಯಕ್ಕೆ ಉಳಿತಾಯವಾಗುತ್ತದೆ. ಒಂದು ವರ್ಷಕ್ಕೆ ಸುಮಾರು 1 ಕೋಟಿಗಳಷ್ಟು ಮೊತ್ತ ಉಳಿತಾಯವಾಗುತ್ತದೆ. ಇದರಿಂದ 1 MW ನ ವೆಚ್ಚ ರೂ. 5.4 ಕೋಟಿಯ ಮೊತ್ತವನ್ನು 5 ರಿಂದ 6 ವರ್ಷಗಳಲ್ಲಿ ಮರಳಿ ಪಡೆಯಬಹುದಾಗಿದ್ದು, ಮುಂದಿನ 5 ವರ್ಷದಿಂದ 20 ವರ್ಷಗಳ ತನಕ ಪ್ರತಿ ಮಾಹೆಗೆ 8 ರಿಂದ 10 ಲಕ್ಷಗಳು ವಿವಿನಿಲಯಕ್ಕೆ ಆದಾಯವಾಗಿ ಬರುತ್ತದೆ.

ಆದ್ದರಿಂದ ವಿವಿನಿಲಯದ ಆವರಣದ ವಿವಿಧ ಕಟ್ಟಡಗಳ ಮೇಲ್ಚಾವಣಿಯಲ್ಲಿ 1 MW on Grid Solor Power Plant ಅನ್ನು ಅಂದಾಜು ರೂ. 5.4 ಕೋಟಿಗಳ ವೆಚ್ಚದಲ್ಲಿ (18% ಜಿ. ಎಸ್.ಟಿ ಸಹಿತ) ನಿರ್ವಹಿಸಲು ವೆಚ್ಚವಾಗಬಹುದೆಂದು ಗಮನಕ್ಕೆ ತರುತ್ತಾ, ಸದರಿ ಕೆಲಸವನ್ನು ನಿಯಮಾನುಸಾರ GEM Portal / KPP Portal ಮುಖಾಂತರ ಟೆಂಡರ್ ಆಹ್ವಾನಿಸಲು ವಿಷಯವನ್ನು ಘನ ವ್ಯವಸ್ಥಾಪನ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

**ತೀರ್ಮಾನ :** ಸದರಿ ವಿಷಯವನ್ನು ಮುಂದೂಡಲಾಯಿತು.

#####

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 186.13**

**<u>ವಿಷಯ:</u>** **ಡಾ. ಪವಿತ್ರ ಎಂ, ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ), ಇವರಿಗೆ ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ ಹಿಂಬರಹ ನೀಡಿರುವ ಕುರಿತು.**

– * –

ಡಾ. ಎಂ ಪವಿತ್ರ, ಸಹಾಯಕ ಪ್ರಾಧ್ಯಾಪಕ (ತಾತ್ಕಾಲಿಕ), ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರು ವಿಶ್ವವಿದ್ಯಾನಿಲಯದಲ್ಲಿ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ತಮ್ಮನ್ನು ಖಾಯಂಗೊಳಿಸುವಂತೆ ಕೋರಿ ಮಾನ್ಯ ಉಚ್ಛನ್ಯಾಯಾಲಯ, ಬೆಂಗಳೂರು, ಇಲ್ಲಿ W.P.No.26489/2025ರ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣವು ದಿನಾಂಕ: 16.02.2026ರ ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ ಈ ಕೆಳಗಿನಂತೆ ಇತ್ಯರ್ಥಗೊಂಡಿರುತ್ತದೆ.

- Respondents-University is directed to consider the representation dated 25.08.2025 vide Annexure-L and the additional representation, keeping in view the decision of this Court in W.P.No.36509/2019 and the judgement of the Apex Court in 'Bhola Nath' (supra), in accordance with law, as expenditiously as possible and not later than three months from the date of receipt of additional representation.

- It is further directed that till consideration of such representations of the petitioner, the respondents are directed not to discontinue the petitioner from the service.

ಶ್ರೀಮತಿ ಪವಿತ್ರ .ಎಂ ರವರ ಪ್ರಥಮ ನೇಮಕಾತಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆ 1992ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 2(9)(iii) ರ ಪ್ರಕಾರ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದಡಿಯಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ, ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರನ್ನಾಗಿ ಒಂದು ಬಾರಿಗೆ ಆರು ತಿಂಗಳು ಮೀರದ ಅವಧಿಗೆ ಗೌರವ ಸಂಭಾವನೆಯಾಗಿ ಮಾಹೆಯಾನ ರೂ. 20,000/–ಗಳನ್ನು ನಿಗದಿಪಡಿಸಿ ದಿನಾಂಕ: 02.07.2014ರ ಆದೇಶದನ್ವಯ ನೇಮಕ ಮಾಡಲಾಗಿರುತ್ತದೆ.

ನೇಮಕಾತಿ ಅವಧಿಯು ಆರು ತಿಂಗಳು ಮುಕ್ತಾಯವಾದ ನಂತರ ಎರಡು/ಮೂರು ದಿನಗಳ ಬಿಡುವು ನೀಡಿ ನಂತರ ಮುಂದಿನ ಅವಧಿಗೆ ನೇಮಕಾತಿಯನ್ನು ಮಾಡಲಾಗಿದ್ದು, ನೇಮಕಾತಿಯು ನಿರಂತರವಾಗಿರುವುದಿಲ್ಲ, Service Break ಆಗಿರುತ್ತದೆ. ದಿನಾಂಕ: 02.07.2014 ರಿಂದ ಈವರೆವಿಗೂ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದ್ದು, ಇದೇ ಕ್ರಮವನ್ನು ಅನುಸರಿಸಲಾಗುತ್ತಿದೆ. ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡ ದಿನಾಂಕದಿಂದ ಇಲ್ಲಿಯವರೆಗಿನ ಸೇವೆಯಲ್ಲಿ **ದಿನಾಂಕ: 02.07.2017 ರಿಂದ 17.06.2018ರವರೆಗಿನ 11 ತಿಂಗಳ ಅವಧಿಗೆ ವಿಶ್ವವಿದ್ಯಾನಿಲಯದ ಸೇವೆಯಲ್ಲಿ ನೇಮಕ ಮಾಡಿರುವುದಿಲ್ಲ**. ಈ ಹಿನ್ನೆಲೆಯಲ್ಲಿ ಸದರಿಯವರ ಸೇವೆಯು ನಿರಂತರವಾಗಿ ಹತ್ತು ವರ್ಷಗಳ ಅವಧಿಯನ್ನು ಪೂರೈಸಿರುವುದಿಲ್ಲ.

ಡಾ. ಪವಿತ್ರ ಎಂ.ರವರು ವಿಶ್ವವಿದ್ಯಾನಿಲಯಕ್ಕೆ ಪ್ರಥಮವಾಗಿ ಅತಿಥಿ ಉಪನ್ಯಾಸಕರಾಗಿ ನೇಮಕಗೊಳ್ಳುವ ಸಂದರ್ಭದಲ್ಲಿ ಯು.ಜಿ.ಸಿ.ಯು ಸಹಾಯಕ ಪ್ರಾಧ್ಯಾಪಕರುಗಳಿಗೆ ನಿಗದಿಪಡಿಸಿರುವ ವಿದ್ಯಾಭ್ಯಾಸದ ಅರ್ಹತೆಯಾದ NET/SLET/SET or Ph.D., ಪದವಿಯನ್ನು ಹೊಂದಿರುವುದಿಲ್ಲ. ನಂತರದ ದಿನಗಳಲ್ಲಿ ದಿನಾಂಕ: 16.03.2016ರಂದು SLET ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಹಾಗೂ ದಿನಾಂಕ: 21.04.2021ರಂದು ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ Ph.D., ಪದವಿಯನ್ನು ಪಡೆದಿರುತ್ತಾರೆ.

Amana prahas

**ಕುಲಪತಿಗಳು**

**ಕುಲಸಚಿವರು**

ಮಾನ್ಯ ಉಚ್ಚನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ ಸೂಕ್ತ ಕಾನೂನು ಅಭಿಪ್ರಾಯ ನೀಡುವಂತೆ ಶ್ರೀ ಟಿ.ಪಿ. ರಾಜೇಂದ್ರಕುಮಾರ್ ಸುಂಗ್ಯೆ, ವಕೀಲರು, ಬೆಂಗಳೂರು, ಇವರಿಗೆ ಪತ್ರವನ್ನು ರವಾನಿಸಲಾಗಿದ್ದು, ಸದರಿಯವರು ದಿನಾಂಕ: 25.05.2026ರಂದು ನೀಡಿರುವ ತಮ್ಮ ಕಾನೂನು ಅಭಿಪ್ರಾಯದಲ್ಲಿ ಡಾ. ಪವಿತ್ರ ಎಂ., ರವರಿಗೆ ಖಾಯಂ ಹುದ್ದೆಗೆ ಪರಿಗಣಿಸಲು ಅವಕಾಶವಿರುವುದಿಲ್ಲವೆಂದು, ಈ ಬಗ್ಗೆ ಹಿಂಬರಹ ನೀಡಬಹುದಾಗಿದೆ ಎಂದು ತಿಳಿಸಿರುತ್ತಾರೆ. ವಕೀಲರು ನೀಡಿರುವ ಕಾನೂನು ಅಭಿಪ್ರಾಯ ಹಾಗೂ ಮಾನ್ಯ ನ್ಯಾಯಾಲಯದ ಆದೇಶದನ್ವಯ ಡಾ. ಪವಿತ್ರರವರಿಗೆ "ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿನ ಪ್ರಕರಣವು ಹಾಗೂ ನಿಮ್ಮ ಪ್ರಕರಣವು ವಿಭಿನ್ನವಾಗಿದ್ದು, ನಿಮ್ಮನ್ನು ಸದರಿ ನ್ಯಾಯಾಲಯದ ಆದೇಶದಲ್ಲಿನ ಪ್ರಕರಣಗಳನ್ವಯ ಪರಿಗಣಿಸಲು ಹಾಗೂ ನಿಮ್ಮ ಸೇವೆಯನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ" ಎಂದು ತಿಳಿಸಿ ದಿನಾಂಕ: 06.06.2026ರಂದು ಹಿಂಬರಹ ನೀಡಲಾಗಿರುತ್ತದೆ.

ಡಾ. ಪವಿತ್ರ ಎಂ.ರವರ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಹಿಂಬರಹ ನೀಡಲಾಗಿದ್ದು, ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಕ್ಕೆ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

*****

**<u>ತೀರ್ಮಾನ</u> :** ಸದರಿ ವಿಷಯವನ್ನು ಮುಂದೂಡಲಾಯಿತು.

#####

**ವಿಷಯ ಸಂಖ್ಯೆ: 186.14**

**<u>ವಿಷಯ:</u>** **ಶ್ರೀ ರವಿಶಂಕರ್ ಎಂ. ದ್ವಿ.ದ.ಗು. (ಗ್ರೇಡೆಡ್ ಪೇ) ಡೀನ್ (ಅ.ಕೇಂ) ಇವರನ್ನು ಮಾನ್ಯ ಉಪ ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿಗಳ ಕಛೇರಿಗೆ ಅನ್ಯ ಸೇವೆ ನಿಮಿತ್ತ (OOD) ನಿಯೋಜಿಸಿರುವ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿ.**

– * –

ಶ್ರೀ ರವಿಶಂಕರ್ ಎಂ. ದ್ವಿತೀಯ ದರ್ಜೆ ಸಹಾಯಕ (ಗ್ರೇಡೆಡ್ ಪೇ) ನೌಕರ ಡೀನ್ (ಅ. ಕೇಂ) ಕರಾಮುವಿ., ಇವರನ್ನು ಉಪ ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿಗಳ ಕಛೇರಿಗೆ ಅನ್ಯ ಸೇವೆ ನಿಮಿತ್ತ (OOD) ನಿಯೋಜನೆ ಮಾಡುವಂತೆ ದಿನಾಂಕ 10.07.2026ರ ಪತ್ರದಲ್ಲಿ(ಅನುಬಂಧ–1) ಕೋರಲಾಗಿದ್ದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸದರಿಯವರನ್ನ ಅನ್ಯ ಸೇವೆ ನಿಮಿತ್ತ (OOD) ನಿಯೋಜನೆ ಮಾಡಿ ದಿನಾಂಕ: 01.08.2026ರಂದು ಕಛೇರಿ ಆದೇಶ ಹೊರಡಿಸಲಾಗಿರುತ್ತದೆ. (ಅನುಬಂಧ–2)

ಮುಂದುವರೆದು, ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಮಂಡಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ, ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ.

*****

**<u>ತೀರ್ಮಾನ</u> :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ ರವಿಶಂಕರ್ ಎಂ. ದ್ವಿ.ದ.ಗು. (ಗ್ರೇಡೆಡ್ ಪೇ) ನೌಕರ, ಡೀನ್ (ಅ.ಕೇಂ) ಇವರನ್ನು ಮಾನ್ಯ ಉಪ ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿಗಳ ಕಛೇರಿಗೆ ಅನ್ಯ ಸೇವೆ ನಿಮಿತ್ತ (OOD) ನಿಯೋಜಿಸಿರುವ ಪ್ರಕ್ರಿಯೆಯನ್ನು ಸಭೆಯು ಅನುಸಮರ್ಥಿಸಿತು.**

#####

**ವಿಷಯ ಸಂಖ್ಯೆ: 186.15**

**<u>ವಿಷಯ:</u>** **ಡಾ. ಜಗದೀಶ್ ಬಾಬು ಹೆಚ್.ಕೆ., ಸಹಾಯಕ ಪ್ರಾಧ್ಯಾಪಕರು(ಅಮಾನತ್ತು), ಇವರಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ವರದಿಯ ಬಗೆಗೆ.**

– * –

ಕುಲಪತಿಗಳು

ಕುಲಸಚಿವರು

ಡಾ. ಜಗದೀಶ್ ಬಾಬು ಹೆಚ್.ಕೆ, ಸಹಾಯಕ ಪ್ರಾಧ್ಯಾಪಕ(ಅಮಾನತ್ತು), ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಿದ್ದು, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ದಿನಾಂಕ: 18.04.2026ರಂದು ನಡೆದ 185ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ " ಡಾ. ಜಗದೀಶ್ ಬಾಬುರವರ ವಿರುದ್ಧ ನಡೆಸಲಾಗುತ್ತಿದ್ದ ಇಲಾಖಾ ವಿಚಾರಣೆಯ ವರದಿ ಆಧಾರದ ಮೇಲೆ ಮತ್ತು ಮಾನ್ಯ ಘನತೆವೆತ್ತ ಕುಲಾಧಿಪತಿಗಳಿಂದ ಬಂದಿರುವ ಪತ್ರದ ಅನುಸಾರ ಸದರಿಯವರ ಬಗ್ಗೆ ಶಿಸ್ತು ಪ್ರಾಧಿಕಾರದ ಅಧ್ಯಕ್ಷರಾದ ಕುಲಪತಿಗಳು ನಿರ್ಣಯವನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಬಗ್ಗೆ ನಿರ್ಣಯದ ವರದಿಯನ್ನು ಸಿದ್ಧಪಡಿಸಿ, ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು" ಎಂದು ತೀರ್ಮಾನವಾಗಿರುತ್ತದೆ.

ಹಿಂದಿನ ಕುಲಪತಿಗಳು ಡಾ. ಜಗದೀಶ್ ಬಾಬುರವರ ವಿಚಾರಣಾ ವರದಿ ಹಾಗೂ ಘನತೆವೆತ್ತ ಕುಲಾಧಿಪತಿಗಳಿಂದ ಬಂದಿರುವ ಪತ್ರದ ಅನುಸಾರ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ(ಪ್ರತಿ ಲಗತ್ತಿಸಿದೆ). ಸದರಿ ವರದಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

**ತೀರ್ಮಾನ :** **ಸದರಿ ವಿಷಯವನ್ನು ಮುಂದೂಡಲಾಯಿತು.**

#####

**ವಿಷಯ ಸಂಖ್ಯೆ: 186.16**

**ವಿಷಯ:** **ಇಲಾಖಾ ವಿಚಾರಣಾ(ಸಂಖ್ಯೆ:03/2024) ರ ವಿಚಾರಣಾ ವರದಿ ಹಾಗೂ ವಿಚಾರಣಾ ವರದಿಯ ಮೇಲಿನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವ ಕುರಿತು.**

– * –

ವಿಶ್ವವಿದ್ಯಾನಿಲಯವು ಶ್ರೀಬಸನಗೌಡ ಗೌಡರ್, ಪ್ರಥಮ ದರ್ಜೆ ಗುಮಾಸ್ತ, ಕರಾಮುವಿ ಪ್ರಾದೇಶಿಕ ಕೇಂದ್ರ, ಬೆಳಗಾವಿ, ಇವರ ವಿರುದ್ಧ ಕರ್ತವ್ಯಲೋಪದ ಸಂಬಂಧ ಸಿಸಿಎ ನಿಯಮಗಳ ಪ್ರಕಾರ ವಿಚಾರಣೆಯನ್ನು ನಡೆಸಿ ವಿಚಾರಣಾಧಿಕಾರಿಗಳು ದಿನಾಂಕ:04.12.2025ರಂದು ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ "The prosecution i.e., the KSOU Mysore University has failed to prove the charges against him. Hence the guilt of CSO has not brought home as per the charges. Therefore, there is no sufficient materials to support the charges. The CSO is not found guilty of the charges levelled against him."ಎಂದಿರುತ್ತದೆ. (ಇಲಾಖಾ ವಿಚಾರಣಾ ವರದಿಯ ಪ್ರತಿ ಲಗತ್ತಿಸಿದೆ).

ಸದರಿ ವಿಚಾರಣಾ ವರದಿಯ ಮೇಲೆ ಲಿಖಿತ ಹೇಳಿಕೆ ನೀಡುವಂತೆ ಶ್ರೀ ಬಸನಗೌಡ ಗೌಡರ್, ಪ್ರಥಮ ದರ್ಜೆ ಗುಮಾಸ್ತ, ಕರಾಮುವಿ ಪ್ರಾದೇಶಿಕ ಕೇಂದ್ರ, ಬೆಳಗಾವಿ, ಇವರಿಗೆ ದಿನಾಂಕ:01.01.2026ರ ಪತ್ರ ಮುಖೇನಾ ಮಾಹಿತಿ ನೀಡಲಾಗಿದ್ದು ಸದರಿಯವರು ಸದರಿ ವಿಚಾರಣಾ ವರದಿಯನ್ನಾಧರಿಸಿ ನನ್ನನ್ನು ಆರೋಪಮುಕ್ತನೆಂದು ಘೋಷಿಸಿ, ನನ್ನ ಸೇವಾ ಪುಸ್ತಕದಲ್ಲಿ ನಮೂದಿಸಲು ಮತ್ತು ಇಲಾಖಾ ವಿಚಾರಣಾ ಅವಧಿಯಲ್ಲಿ ತಡೆಹಿಡಿಯಲಾದ ಮುಂಬಡ್ತಿ, ವಾರ್ಷಿಕ ವೇತನ ಬಡ್ತಿ ಮತ್ತುಇತರೆ ರಜೆಗಳನ್ನು ಕೆ.ಸಿ.ಎಸ್ ನಿಯಮಾನುಸಾರ ಮಂಜೂರು ಮಾಡುವಂತೆ ದಿನಾಂಕ:12.02.2026ರ ಲಿಖಿತ ಹೇಳಿಕೆ ಪತ್ರದಲ್ಲಿ ಕೋರಿರುತ್ತಾರೆ (ದಿನಾಂಕ:12.02.2026ರ ಪತ್ರದ ಪ್ರತಿ ಲಗತ್ತಿಸಿದೆ).

ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ, ಶಿಸ್ತು ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯವನ್ನು ಮಂಡಿಸಿದೆ.

*****

**ತೀರ್ಮಾನ :** **ಸದರಿ ವಿಷಯವನ್ನು ಮುಂದೂಡಲಾಯಿತು.**

#####

**ಕುಲಪತಿಗಳು** **ಕುಲಸಚಿವರು**

**ವಿಷಯ ಸಂಖ್ಯೆ: 186.17**

**ವಿಷಯ:** **ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ವೃತ್ತಿ ಪದೋನ್ನತಿ ಯೋಜನೆಯಡಿ ನಡೆಸಲಾದ 'ಆಯ್ಕೆ ಸಮಿತಿ' ಸಭೆಯ ನಡವಳಿಯನ್ನು ತೆರೆಯುವ ಬಗೆಗೆ.**

– * –

ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಮುಂದಿನ ಹಂತದ ಪದೋನ್ನತಿ ನೀಡುವ ಸಂಬಂಧ ದಿನಾಂಕ: 28.07.2026ರಂದು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ ಮತ್ತು ಕನ್ನಡ ವಿಷಯಗಳ ಒಟ್ಟು ಎಂಟು ಅಧ್ಯಾಪಕರುಗಳಿಗೆ ಆಯ್ಕೆ ಸಮಿತಿ ಸಭೆಗಳನ್ನು ನಡೆಸಿ, ಸಭೆಯ ನಡವಳಿಯನ್ನು ಮುಚ್ಚಿದ ಲಕೋಟೆಯಲ್ಲಿ ಕುಲಸಚಿವರಿಗೆ ಸಲ್ಲಿಸಿರುತ್ತಾರೆ.

ಆಯ್ಕೆ ಸಮಿತಿ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಮಾನ್ಯ ಸದಸ್ಯರ ಸಮ್ಮುಖದಲ್ಲಿ ತೆರೆದು, ಈ ಸಂಬಂಧ ಮುಂದಿನ ಕ್ರಮವಹಿಸಲು ಚರ್ಚೆ ಹಾಗೂ ನಿರ್ಣಯಕ್ಕಾಗಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

*****

ಕುಲಸಚಿವರು ಮಾತನಾಡಿ ದಿನಾಂಕ: 28.07.2026ರಂದು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ ಮತ್ತು ಕನ್ನಡ ವಿಷಯಗಳ ಒಟ್ಟು ಎಂಟು ಅಧ್ಯಾಪಕರುಗಳಿಗೆ ಆಯ್ಕೆ ಸಮಿತಿ ಸಭೆಗಳನ್ನು ನಡೆಸಿ, **ಸಭೆಯ ನಡವಳಿಯನ್ನು ಮುಚ್ಚಿದ ಲಕೋಟೆಯಲ್ಲಿ ನಮಗೆ ಸಲ್ಲಿಸಿದ್ದು, ಸದರಿ ಮುಚ್ಚಿದ ಲಕೋಟೆಯನ್ನು** ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಹಾಜರಿರತಕ್ಕ ಸದಸ್ಯರುಗಳ ಸಮ್ಮುಖದಲ್ಲಿ ಲಕೋಟೆಯನ್ನು ತೆಯಲಾಗುತ್ತಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ದಿನಾಂಕ: 28.07.2026ರಂದು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ ಮತ್ತು ಕನ್ನಡ ವಿಷಯಗಳ ಒಟ್ಟು ಎಂಟು ಅಧ್ಯಾಪಕರುಗಳಿಗೆ ಆಯ್ಕೆ ಸಮಿತಿ ಸಭೆಗಳನ್ನು ನಡೆಸಿ, ಅದರಲ್ಲಿ ಪ್ರಾಧ್ಯಾಪಕರಿಂದ ಸೀನಿಯರ್ ಪ್ರಾಧ್ಯಾಪಕರಾಗಿ, ಸಹ ಪ್ರಾಧ್ಯಾಪಕರನ್ನು ಪ್ರಾಧ್ಯಾಪಕರನ್ನಾಗಿ ಮತ್ತು ಸಹಾಯಕ ಪ್ರಾಧ್ಯಾಪಕರನ್ನು ಸಹ ಪ್ರಾಧ್ಯಾಪಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಮಾತನಾಡಿ ಪದೋನ್ನತಿಗಳನ್ನು ನೀಡುವ ಮುನ್ನ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದೆಯೇ, ಮಂಜೂರಾಗಿರುವ ಹುದ್ದೆಗಳ ಎದುರಾಗಿ ನೀಡಲಾಗಿದೆಯೇ ಎಂದು ಕೇಳಿದರು.

ಸದಸ್ಯರಾದ ಶ್ರೀ. ಮಂಜು .ಆರ್ ರವರು ಈ ವಿಷಯದ ವಿವರಗಳನ್ನು ನೀಡಬೇಕೆಂದು ಕೇಳಿದರು.

ಕುಲಪತಿಗಳು ಮಾತನಾಡಿ ಅಧ್ಯಾಪಕರ ಹುದ್ದೆಗಳು ಮಂಜೂರಾಗಿದ್ದು, ಈಗಾಗಲೇ ನೇಮಕವಾಗುವ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕರುಗಳನ್ನು ಮತ್ತು ಸಹ ಪ್ರಾಧ್ಯಾಪಕರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದ್ದು, ಸದರಿಯವರಿಗೆ ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಪದೋನ್ನತಿಗಳಿಗೆ ನಿಗದಿಪಡಿಸಿರುವ ಅವಧಿಗಳಿಗೆ ಸಹಾಯಕ ಪ್ರಾಧ್ಯಾಪಕರಿಂದ – ಸಹ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರಿಂದ – ಪ್ರಾಧ್ಯಾಪಕರು/ ಪ್ರಾಧ್ಯಾಪಕರುಗಳನ್ನು – ಸೀನಿಯರ್ ಪ್ರಾಧ್ಯಾಪಕರುಗಳನ್ನಾಗಿ ಈ ಕೆಳಕಂಡ ಪಟ್ಟಿಯಲ್ಲಿ ನಮೂದಿಸಿರುವ ರೀತ್ಯಾ ಪದೋನ್ನತಿಗಳನ್ನು ನೀಡಲಾಗಿದೆ ಎಂದು ಸಭೆಯಲ್ಲಿ ವಿವರಿಸಿದರು.

Annapoorna prakash

ಕುಲಪತಿಗಳು

ಕುಲಸಚಿವರು

**<u>ಕರಾಮುವಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ :</u>**

1. ಪ್ರೊ. ಕವಿತಾ ರೈ – ಪ್ರಾಧ್ಯಾಪಕರಿಂದ – ಹಿರಿಯ ಪ್ರಾಧ್ಯಾಪಕರು
   (ಅರ್ಹತಾ ದಿನಾಂಕ: 10.12.2025 ರಿಂದ ಜಾರಿಗೆ ಬಂದಂತೆ)
2. ಪ್ರೊ. ಡಿ. ನಾಗಣ್ಣ – ಪ್ರಾಧ್ಯಾಪಕರಿಂದ – ಹಿರಿಯ ಪ್ರಾಧ್ಯಾಪಕರು
   (ಅರ್ಹತಾ ದಿನಾಂಕ: 02.01.2023 ರಿಂದ ಜಾರಿಗೆ ಬಂದಂತೆ)

**<u>ಕರಾಮುವಿ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ :</u>**

1. ಪ್ರೊ. ರಮಾನಂದ ಎಂ.ಎಸ್– ಪ್ರಾಧ್ಯಾಪಕರಿಂದ – ಹಿರಿಯ ಪ್ರಾಧ್ಯಾಪಕರು
   (ಅರ್ಹತಾ ದಿನಾಂಕ: 15.12.2025 ರಿಂದ ಜಾರಿಗೆ ಬಂದಂತೆ)
2. ಡಾ. ಶಿವಕುಮಾರಸ್ವಾಮಿ – ಸಹ ಪ್ರಾಧ್ಯಾಪಕರಿಂದ – ಪ್ರಾಧ್ಯಾಪಕರು
   (ಅರ್ಹತಾ ದಿನಾಂಕ: 07.02.2026 ರಿಂದ ಜಾರಿಗೆ ಬಂದಂತೆ)
3. ಡಾ. ಬನಶಂಕರಿ .ಜೆ.ಎಲ್ – ಸಹಾಯಕ ಪ್ರಾಧ್ಯಾಪಕರಿಂದ – ಸಹ ಪ್ರಧ್ಯಾಪಕರು
   (ಅರ್ಹತಾ ದಿನಾಂಕ: 10.05.2025 ರಿಂದ ಜಾರಿಗೆ ಬಂದಂತೆ)

**<u>ಕರಾಮುವಿ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ</u>**

1. ಡಾ. ಶಂಕರನಾರಾಣಪ್ಪ – ಪ್ರಾಧ್ಯಾಪಕರಿಂದ – ಹಿರಿಯ ಪ್ರಾಧ್ಯಾಪಕರು
   (ಅರ್ಹತಾ ದಿನಾಂಕ: 11.12.2025 ರಿಂದ ಜಾರಿಗೆ ಬಂದಂತೆ)

**<u>ಕರಾಮುವಿ ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ :</u>**

1. ಪ್ರೊ. ಮಹದೇವಮೂರ್ತಿ .ಸಿ – ಪ್ರಾಧ್ಯಾಪಕರಿಂದ – ಹಿರಿಯ ಪ್ರಾಧ್ಯಾಪಕರು
   (ಅರ್ಹತಾ ದಿನಾಂಕ: 15.12.2025 ರಿಂದ ಜಾರಿಗೆ ಬಂದಂತೆ)
2. ಡಾ. ಸವಿತ .ಪಿ – ಸಹಾಯಕ ಪ್ರಾಧ್ಯಾಪಕರಿಂದ – ಸಹ ಪ್ರಧ್ಯಾಪಕರು
   (ಅರ್ಹತಾ ದಿನಾಂಕ: 28.12.2025 ರಿಂದ ಜಾರಿಗೆ ಬಂದಂತೆ)

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 28.07.2026 ರಂದು ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ನಿರ್ವಹಣಾಶಾಸ್ತ್ರ ಮತ್ತು ಕನ್ನಡ ವಿಷಯಗಳ ಒಟ್ಟು ಎಂಟು ಅಧ್ಯಾಪಕರುಗಳಿಗೆ ಆಯ್ಕೆ ಸಮಿತಿ ಸಭೆಯನ್ನು ನಡೆಸಿ, ಸದರಿ ಸಭೆಯ ಮುಖಾಂತರ ಅರ್ಹರಾಗಿರುವ ಹುದ್ದೆಗಳಿಗೆ ಆಯ್ಕೆಗೊಂಡಿದ್ದು, ಅವರುಗಳಿಗೆ ಅರ್ಹತಾ ದಿನಾಂಕದಿಂದ ಜಾರಿಗೆ ಬಂದಂತೆ ಪದೋನ್ನತಿ ನೀಡಿರುವುದನ್ನು ಸಭೆಯು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 186.18**

<u>ವಿಷಯ:</u> **ಕರಾಮುವಿ ನಿಲಯದ ವಿಜ್ಞಾನ ಭವನ ಕಟ್ಟಡದ ಮೇಲ್ಭಾಗದಲ್ಲಿ (ಎರಡನೇ ಹಂತಸ್ತಿನ ಮೇಲ್ಭಾಗದಲ್ಲಿ) ಹೆಚ್ಚುವರಿಯಾಗಿ ಮೂರನೇ ಹಂತಸ್ತಿನ ನಿರ್ಮಾಣದ ಕಾಮಗಾರಿ ಕೆಲಸದ ಬಗ್ಗೆ**

– * –

ಕರಾಮುವಿ ಆವರಣದ ವಿಜ್ಞಾನ ಭವನದಲ್ಲಿ ದಿನಾಂಕ: 03.08.2026 ರಂದು ಮಾನ್ಯ ಕುಲಪತಿರವರು ವಿಜ್ಞಾನ ವಿಭಾಗದ ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರುಗಳ ಜೊತೆಯಲ್ಲಿ ಕುಂದು ಕೊರತೆ ಸಭೆ ನಡೆಸಲಾಗಿ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರುಗಳು BSc ಹಾಗೂ MSc ಕೋರ್ಸ್‌ಗಳ ಪ್ರತಿ ವಿಭಾಗಕ್ಕೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಪ್ರಸ್ತುತ ಅನ್ಯ ವಿಶ್ವವಿದ್ಯಾನಿಲಯ/ ಕಾಲೇಜುಗಳಲ್ಲಿ ಪ್ರಯೋಗಾಲಯ ತರಗತಿಗಳನ್ನು ನಡೆಸಲಾಗುತ್ತಿರುತ್ತದೆ. ಮುಂದೆ ಆಗ್ಗಿಂದಾಗ್ಗೆ ಅನಿಯಮಿತವಾಗಿ ಪ್ರಯೋಗಾಲಯ ತರಗತಿಗಳನ್ನು ನಡೆಸಬೇಕಿರುವುದರಿಂದ ಅನ್ಯ ವಿಶ್ವವಿದ್ಯಾನಿಲಯ

**ಕುಲಪತಿಗಳು** **ಕುಲಸಚಿವರು**

/ಕಾಲೇಜುಗಳಲ್ಲಿ ಕಾಲಮಿತಿಯೊಳಗೆ ನೆಡೆಸಲು ಕಷ್ಟವಾಗಲಿದ್ದು, ಪಿಹೆಚ್.ಡಿ ಪದವಿಯ ವಿದ್ಯಾರ್ಥಿಗಳಿಗೆ ಸಂಶೋಧನ ಚಟುವಟಿಕೆಗಳನ್ನು ನೆಡೆಸಲು ಪ್ರತಿದಿನವು ಪ್ರಯೋಗಾಲಯ ಹಾಗೂ ತರಗತಿ ಕೊಠಡಿಗಳ ಅವಶ್ಯಕತೆ ಇರುತ್ತದೆ. ಅಲ್ಲದೆ, ಪ್ರತಿ ವಿಭಾಗಕ್ಕೆ ಪ್ರಸ್ತುತ ಒಂದು ಪ್ರಯೋಗಾಲಯ ಸೌಲಭ್ಯವಿದ್ದು ವಾರ್ಷಿಕ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರತಿ ವಿಭಾಗಕ್ಕೆ ಹೆಚ್ಚುವರಿಯಾಗಿ ಎರಡರಿಂದ ಮೂರು ಪ್ರಯೋಗಾಲಯ ಹಾಗೂ ತರಗತಿ ಕೊಠಡಿಗಳು ಅವಶ್ಯಕವಿರುತ್ತದೆ ಎಂದು ಸಭೆಯಲ್ಲಿ ಮಾನ್ಯ ಕುಲಪತಿರವರ ಗಮನಕ್ಕೆ ತಂದಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ವಿಜ್ಞಾನ ವಿಭಾಗದ ಕಟ್ಟಡವನ್ನು ನೆಲಮಹಡಿ, ಮೊದಲನೇ ಮತ್ತು ಎರಡನೇ ಮಹಡಿಯವರೆಗೆ ಮಾತ್ರ ವಿನ್ಯಾಸ ರೂಪಿಸಲಾಗಿದ್ದು, ಈ ಹಿನ್ನಲೆಯಲ್ಲಿ ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಬೇಕಿದ್ದಲ್ಲಿ ಲೈಟ್ ರೂಫಿಂಗ್ (Light Roofing) ವಿನ್ಯಾಸದೊಂದಿಗೆ ಮೂರನೇ ಮಹಡಿಗೆ ಕಟ್ಟಡವನ್ನು ವಿಸ್ತರಿಸಬೇಕಾಗಿರುತ್ತದೆ ಎಂದು ವಿವಿನಿಲಯದ ವತಿಯಿಂದ ನೇಮಕಗೊಂಡಿರುವ ವಾಸ್ತುಶಿಲ್ಪ ಮತ್ತು ವಿನ್ಯಾಸಗಾರರು ಸೂಚಿಸಿರುತ್ತಾರೆ.

ಈ ಸಂಬಂಧ ಲೋಕೋಪಯೋಗಿ ಇಲಾಖೆ ದರಸೂಚಿ 2023–24ರ ಅನ್ವಯ ಕಟ್ಟಡ ಕಾಮಗಾರಿ ಕೆಲಸವನ್ನು ನಿರ್ವಹಿಸಲು ಸರಿಸುಮಾರು ರೂ. 1000.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದ್ದು, ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

ಕುಲಪತಿಗಳು ಮಾತನಾಡಿ, ದಿನಾಂಕ: 03.08.2026 ರಂದು ವಿಜ್ಞಾನ ವಿಭಾಗದ ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರುಗಳ ಜೊತೆಯಲ್ಲಿ ಕುಂದು ಕೊರತೆ ಸಭೆ ನಡೆಸಲಾಗಿ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರುಗಳು B.Sc ಹಾಗೂ M.Sc ಕೋರ್ಸ್‌ಗಳ ಪ್ರತಿ ವಿಭಾಗಕ್ಕೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 3000 ಗಳಿರುತ್ತದೆ. ಪ್ರಸ್ತುತ ಅನ್ಯ ವಿಶ್ವವಿದ್ಯಾನಿಲಯ/ ಕಾಲೇಜುಗಳಲ್ಲಿ ಪ್ರಯೋಗಾಲಯ ತರಗತಿಗಳನ್ನು ನಡೆಸಲಾಗುತ್ತಿರುತ್ತದೆ. ಪ್ರತಿದಿನವು ಪ್ರಯೋಗಾಲಯ ಹಾಗೂ ತರಗತಿ ಕೊಠಡಿಗಳ ಅವಶ್ಯಕತೆ ಇರುತ್ತದೆ. ಅಲ್ಲದೆ, ಪ್ರತಿ ವಿಭಾಗಕ್ಕೆ ಪ್ರಸ್ತುತ ಒಂದು ಪ್ರಯೋಗಾಲಯ ಸೌಲಭ್ಯವಿದ್ದು ವಾರ್ಷಿಕ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪ್ರತಿ ವಿಭಾಗಕ್ಕೆ ಹೆಚ್ಚುವರಿಯಾಗಿ ಎರಡರಿಂದ ಮೂರು ಪ್ರಯೋಗಾಲಯ ಹಾಗೂ ತರಗತಿ ಕೊಠಡಿಗಳು ಅವಶ್ಯಕವಿರುತ್ತದೆ. ಎಂದು ತಿಳಿಸಿದರು.

ಮುಂದುವರೆದು, ಜೊತೆಗೆ **AI** ಗೆ ಸಂಬಂಧಿಸಿದಂತೆ ಮತ್ತು ಇತರೆ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ, ಹೊಸ ಪ್ರೋಗ್ರಾಮ್‌ಗಳನ್ನು ಪ್ರಾರಂಭಿಸುವುದರಿಂದ ಅದಕ್ಕೆ ಸಂಬಂಧಪಟ್ಟ ಪ್ರಯೋಗಾಲಯಗಳು ಹಾಗೂ ಕರಾಮುವಿಯು NCVET ಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಅದಕ್ಕೆ ಸಂಬಂಧಿಸಿದ ಪ್ರೋಗ್ರಾಮ್‌ಗಳನ್ನು ನಡೆಸಲು ಮತ್ತಷ್ಟು ಕೊಠಡಿಗಳು ಹಾಗೂ ಪ್ರಯೋಗಾಲಯಗಳು ಬೇಕಾಗಿರುವುದರಿಂದ ಆಯಾ ವಿಭಾಗಕ್ಕೆ ಸಂಬಂಧಪಟ್ಟ ಕೊಠಡಿಗಳ ಇದರ ಅವಶ್ಯಕತೆ ಇದೆ ಎಂದು ಸಭೆಗೆ ತಿಳಿಸಿದರು.

ಕುಲಸಚಿವರು ಮಾತನಾಡಿ, ಈಗಾಗಲೇ ವಿಜ್ಞಾನ ಭವನದ 2 ಅಂತಸ್ತಿನ ಕಟ್ಟಡಕ್ಕೆ ಹೆಚ್ಚುವರಿಯಾಗಿ ಮೂರನೇ ಮಹಡಿಗೆ ವಿಜ್ಞಾನ ವಿಷಯಗಳಿಗೆ ಪ್ರಯೋಗಾಲಯನ್ನು ನಿರ್ಮಾಣ ಮಾಡಬೇಕಾಗಿದ್ದು, ಈ ಸಂಬಂಧ ವಿಸ್ಕೃತ ನಕ್ಷೆ ಮತ್ತು DPAR ಸಿದ್ಧಪಡಿಸಿ, ನಿಯಮಾನುಸಾರ ಕ್ರಮ ವಹಿಸುವುದು ಸೂಕ್ತವೆಂದು ತಿಳಿಸಿದರು.

ಉಪಕಾರ್ಯದರ್ಶಿಗಳು ಮಾತನಾಡಿ, ಸದರಿ ಪ್ರಯೋಗಾಲಯ ನಿರ್ಮಾಣ ಸಂಬಂಧ ವಿಸ್ಕೃತ ನಕ್ಷೆ ಮತ್ತು ಡಿಪಿಎಆರ್‌ಗಳನ್ನು ಸಿದ್ಧಪಡಿಸಿ ಇದಕ್ಕೆ ತಗಲುವ ಅಂದಾಜು ವಿವರಗಳೆಷ್ಟು ಮತ್ತು ಆಯ್ಯ-ವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿರಸಲಾಗಿದೆ ಎಂದು ಕೇಳಿದರು.

ಕುಲಪತಿಗಳು ಮಾತನಾಡಿ, ನಮ್ಮ ವಿಶ್ವವಿದ್ಯಾನಿಲಯ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಯೋಗಾಲಯಗಳ ನಿರ್ಮಾಣ ಅತ್ಯಂತ ಅವಶ್ಯಕವಾಗಿರುತ್ತದೆ. ಆದುದರಿಂದ ನಮ್ಮ ವಿಶ್ವವಿದ್ಯಾನಿಲಯದ ಆವರಣದೊಳಗೆ ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಿಜ್ಞಾನ ವಿಭಾಗದ ಮೂರನೇ ಮಹಡಿಗೆ ಕಟ್ಟಡವನ್ನು ವಿಸ್ತರಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕುಲಪತಿಗಳು                                                                 ಕುಲಸಚಿವರು

ತೀರ್ಮಾನ : ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯಲ್ಲಿ ಪ್ರಸ್ತುತ ವಿಜ್ಞಾನ ವಿಭಾಗದ ಕಟ್ಟಡವನ್ನು ನೆಲಮಹಡಿ, ಮೊದಲನೇ ಮತ್ತು ಎರಡನೇ ಮಹಡಿಯವರೆಗೆ ಮಾತ್ರ ವಿನ್ಯಾಸ ರೂಪಿಸಲಾಗಿದ್ದು, ಈ ಹಿನ್ನಲೆಯಲ್ಲಿ ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಬೇಕಿದ್ದಲ್ಲಿ ಲೈಟ್ ರೂಫಿಂಗ್ (Light Roofing) ವಿನ್ಯಾಸದೊಂದಿಗೆ ಮೂರನೇ ಮಹಡಿಗೆ ಕಟ್ಟಡವನ್ನು ವಿಸ್ತರಿಸಬೇಕಾಗಿದ್ದು, ಈ ಸಂಬಂಧ ಲೋಕೋಪಯೋಗಿ ಇಲಾಖೆ ದರಸೂಚಿ 2023-24ರ ಅನ್ವಯ ಕಟ್ಟಡ ಕಾಮಗಾರಿ ಕೆಲಸವನ್ನು ನಿರ್ವಹಿಸಲು ಸರಿಸುಮಾರು ರೂ. 1000.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದ್ದು, ಇವುಗಳನ್ನು ಸರ್ಕಾರದ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದು ಕಾರ್ಯನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ವಿಷಯ ಸಂಖ್ಯೆ: 186.19**

ವಿಷಯ: ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen Dining Hall, Meeting hall ಮತ್ತು VVIP/ VIP ಕೊಠಡಿಗಳನ್ನು ನವೀಕರಿಸುವ ಹಾಗೂ ಇತರೆ ಕೊಠಡಿಗಳ ದುರಸ್ಥಿ ಮತ್ತು ನೀರು ಸರಬರಾಜು, ನೈರ್ಮಲ್ಯಕರಣದ ಕೆಲಸಗಳನ್ನು ನಿರ್ವಹಿಸುವುದರ ಬಗ್ಗೆ.

– * –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅತಿಥಿ ಗೃಹವು ನಿರ್ಮಾಣಗೊಂಡು ಸುಮಾರು 16 ವರ್ಷಗಳಾಗಿರುತ್ತದೆ, ಪ್ರಸ್ತುತ ವಿವಿನಿಲಯದಲ್ಲಿ ಪ್ರಮುಖ ಕಾರ್ಯಕ್ರಮಗಳು ಹಾಗೂ ಪ್ರತಿ ಶೈಕ್ಷಣಿಕ ವರ್ಷವು ಘಟಿಕೋತ್ಸವ ಸಮಾರಂಭ ನಡೆಯುವ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರ ಮತ್ತು ಗಣ್ಯ ವ್ಯಕ್ತಿಗಳಿಗೆ D-Litt ಪ್ರಶಸ್ತಿ ಪುರಸ್ಕಾರಗಳನ್ನು ವಿತರಿಸಲು ಘನತೆವೆತ್ತ ರಾಜ್ಯಪಾಲರು, ಮುಖ್ಯ ಅತಿಥಿಗಳು, ಉನ್ನತ ಶಿಕ್ಷಣ ಸಚಿವರು, ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ಸೇರಿದಂತೆ ಇತರೆ ಗಣ್ಯ ವ್ಯಕ್ತಿಗಳು ಆಗಮಿಸುತ್ತಿರುತ್ತಾರೆ. ಈ ಸಂದರ್ಭದಲ್ಲಿ ಸದರಿ ಗಣ್ಯ ವ್ಯಕ್ತಿಗಳಿಗೆ ಅತಿಥಿಗೃಹದ ಮುಂಭಾಗದಲ್ಲಿ ಊಟದ ವ್ಯವಸ್ಥೆಯನ್ನು ಕಲ್ಪಿಸಲು ಹೈಟೆಕ್ (German / Pagoda) ಶಾಮಿಯಾನದೊಂದಿಗೆ ಸುಸಜ್ಜಿತವಾದ ಊಟದ ಮೇಜು ಮತ್ತು ಇತರೆ ಅಗತ್ಯ ವಸ್ತುಗಳ ವ್ಯವಸ್ಥೆಯನ್ನು ಪ್ರತಿ ವರ್ಷ ಮಾಡಲಾಗುತ್ತಿದ್ದು ಇದಕ್ಕೆ ಪ್ರತಿ ವರ್ಷವೂ ಶಾಮಿಯಾನ ಬಾಡಿಗೆ ಮತ್ತು ಇತರೆ ಕಾರ್ಯಗಳಿಗೆ ಹುಂಡಿ ಪಾವತಿಸಲಾಗುತ್ತಿರುತ್ತದೆ.

ಈ ಸಂಬಂಧ ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಪ್ರಸ್ತುತವಿರುವ ಅತಿಥಿ ಗೃಹದಲ್ಲಿನ Kitchen, Dining Hall, Meeting Hall ಅಲ್ಲಿ Civil Works, Wall Paneling, False Ceiling, Electrical Works ಮತ್ತು ಇತರೆ ಕೆಲಸಗಳೊಂದಿಗೆ ಗಣ್ಯರಿಗೆ ಊಟ ಉಪಚಾರದ ವ್ಯವಸ್ಥೆಗೆ ಅನುಕೂಲ ವಾಗುವಂತೆ ನವೀಕರಿಸಬೇಕಾಗಿರುತ್ತದೆ ಅಲ್ಲದೆ, ಸದರಿ ಘಟಿಕೋತ್ಸವ ಸಮಾರಂಭಕ್ಕೆ ಆಗಮಿಸುವ VVIP /VIP ಗಳಿಗೆ ಅತಿಥಿ ಗೃಹದಲ್ಲಿನ VVIP /VIP ಕೊಠಡಿಗಳಲ್ಲಿ ಉಳಿದುಕೊಳ್ಳುವ ಸಂದರ್ಭವುಂಟಾಗುತ್ತಿರುತ್ತದೆ. ಸದರಿ ಕಟ್ಟಡವು ತುಂಬಾ ಹಳೆಯದಾಗಿರುವುದರಿಂದ 08 ಸಂಖ್ಯೆಯ VVIP /VIP ಕೊಠಡಿಗಳಲ್ಲಿ Water Line, Sanitary fittings, Tiles, Wall Paneling, Painting ಮತ್ತು ಅಗತ್ಯವಿರುವ ದುರಸ್ತಿ ಕಾಮಗಾರಿ ನಿರ್ವಹಿಸಬೇಕಾಗಿರುತ್ತದೆ ಹಾಗೂ ಇತರೆ ಸಮಾನ್ಯ ಕೊಠಡಿಗಳಲ್ಲು ಸಹ Water Proofing, Water Line, Sanitary fittings, Tiles, Wall Painting, Door frame & Shutters ಮತ್ತು ಅಗತ್ಯವಿರುವ ದುರಸ್ತಿ ಕಾಮಗಾರಿ ಒಳಗೊಂಡಂತೆ ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಈ ಎಲ್ಲಾ ಕಾಮಗಾರಿಗಳ ನಿರ್ವಹಿಸುವುದರ ಸಂಬಂಧ ಅಂದಾಜು ಮೊತ್ತ ರೂ. 99,00,000/- (ಜಿ.ಎಸ್.ಟಿ ಸಹಿತ) ಗಳಾಗಬಹುದೆಂದು ಅಂದಾಜಿಸಲಾಗಿದೆ.

Curana prahas

ಕುಲಪತಿಗಳು

ಕುಲಸಚಿವರು

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen Dining Hall, Meeting hall ಮತ್ತು VVIP /VIP ಕೊಠಡಿಗಳನ್ನು ನವೀಕರಿಸುವ ಹಾಗೂ ಇತರೆ ಕೊಠಡಿಗಳ ದುರಸ್ಥಿ ಕಾಮಗಾರಿಗಳನ್ನು ಒಟ್ಟು ಅಂದಾಜು ವೆಚ್ಚ ರೂ. 99,00,000/- ಗಳ ವೆಚ್ಚದಲ್ಲಿ ನಿಯಮಾನುಸಾರ ಕೈಗೊಳ್ಳುವುದರ ಸಂಬಂಧದ ವಿಷಯವನ್ನು ವ್ಯವಸ್ಥಾಪನ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

ಈ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ. ಮಾಲತಿ .ಟಿ ಹಾಗೂ ಕುಮಾರಿ. ಪ್ರಾಚಿ ಗೌಡ ರವರು ಮಾತನಾಡಿ ಮೇಲೆ ತಿಳಿಸಿರುವ ಅತಿಥಿಗೃಹದ ದುರಸ್ಥಿಗಳ ಜೊತೆಗೆ Bathroom/Toilet ಕೂಡ ದುಸ್ಥಿತಿಯಲ್ಲಿದ್ದು, ಅವುಗಳನ್ನು ಸಹ ಸರಿಪಡಿಸಬೇಕೆಂದು ಸಭೆಗೆ ತಿಳಿಸಿದರು.

ಡಾ. ಬಿ.ಜಿ. ಪಾಟೀಲ್ ರವರು ಸಹ ಇದಕ್ಕೆ ಧ್ವನಿಗೂಡಿಸಿದರು ಹಾಗೂ ನಮೂದಿಸಿರುವ ಅಂದಾಜು ವೆಚ್ಚ ಕಡಿಮೆ ಇದ್ದು, ಇಲ್ಲಿ ನಮೂದಿಸಿರುವ ಅಂದಾಜು ವೆಚ್ಚಕ್ಕಿಂತ ಹೆಚ್ಚಿನ ಅನುದಾನವನ್ನು ನಿಗಧಿಪಡಿಸಿ, ತುರ್ತಾಗಿ ದುರಸ್ಥಿ ಕಾರ್ಯಗಳನ್ನೂ ಸಹ ಕೈಗೊಳ್ಳಲು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಅತಿಥಿಗೃಹದ ಕೆಲವು ಕೊಠಡಿಗಳಲ್ಲಿ ನೀರು ಸೋರಿಕೆಯಾಗುತ್ತಿದ್ದು, ಅವುಗಳನ್ನು ಉಪಯೋಗಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿ, ಈ ಸಂಬಂಧ ಪೂರ್ತಿ ಕಟ್ಟಡಕ್ಕೆ Waterproof ಗಳನ್ನು ಕೂಡ ಮಾಡಬೇಕಾಗಿದೆ ಎಂದು ತಿಳಿಸಿದರು.

**ತೀರ್ಮಾನ :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸಿ ನವೀಕರಿಸುವ ಬದಲು ಇತರೆ ದುರಸ್ತಿ ಕಾಮಗಾರಿಗಳನ್ನು ಮಾಡುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಸಂಬಂಧ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಕಚೇರಿ ಪತ್ರ ಸಂಖ್ಯೆ: GS.07.KOM, 2026 Dated: 14.07.2026ರ ಪ್ರಕಾರ 184ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಮಾನ್ಯ ಮಾಡಿರುವುದರಿಂದ ಮೇಲ್ಕಂಡ ತೀರ್ಮಾನದ ರೀತ್ಯಾ ಕ್ರಮವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 186.20**

**ವಿಷಯ:** **ವಿಶ್ವವಿದ್ಯಾನಿಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣದಲ್ಲಿ Indoor LED Display Board ಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ.**

– * –

ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಸಂಪರ್ಕ ತರಗತಿಗಳು (Contact Classes), ವಿಶೇಷ ಉಪನ್ಯಾಸಗಳು, ಕಾರ್ಯಾಗಾರಗಳು, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳು, ಅಧ್ಯಾಪಕರ Faculty Development Programmes, ತರಬೇತಿ ಕಾರ್ಯಕ್ರಮಗಳು ಹಾಗೂ ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ ನಿಯಮಿತವಾಗಿ ಆಯೋಜಿಸಲಾಗುತ್ತಿದ್ದು, ಪ್ರಸ್ತುತ ಸಭಾಂಗಣಗಳಲ್ಲಿ ಹಳೆಯ ಮಾದರಿಯ ಪ್ರೊಜೆಕ್ಟರ್‌ಗಳು ಬಳಕೆಯಲ್ಲಿದ್ದು, ಅವುಗಳ ಕಾರ್ಯಕ್ಷಮತೆ ಕಡಿಮೆಯಿಂದಾಗಿ reduced brightness, poor image clarity, dependence on ambient lighting conditions ನಿಂದ ಶೈಕ್ಷಣಿಕ ಚಟುವಟಿಕೆಗಳ ಪರಿಣಾಮಕಾರಿ ನಿರ್ವಹಣೆಗೆ ಅಡಚಣೆ ಉಂಟಾಗಿ ಪದೇ ಪದೇ ನಿರ್ವಹಣೆಯ ಅವಶ್ಯಕತೆ ಉಂಟಾಗುತ್ತಿರುತ್ತದೆ.

ಕುಲಪತಿಗಳು ಕುಲಸಚಿವರು

ಮುಂದುವರೆದು, digital teaching methodologies, blended learning, multimedia-based instruction, and technology-enabled academic delivery ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, Indoor LED Display Board ಅನ್ನು ಸದರಿ ಸಭಾಂಗಣಗಳಲ್ಲಿ ಅಳವಡಿಸುವ ಮೂಲಕ ಉತ್ತಮ ಗುಣಮಟ್ಟದ Presentations, ವೀಡಿಯೊಗಳು, ಗ್ರಾಫ್‌ಗಳು ಹಾಗೂ ಡಿಜಿಟಲ್ ಅಧ್ಯಯನ ಸಾಮಗ್ರಿಗಳನ್ನು ಸ್ಪಷ್ಟವಾಗಿ display ಆಗುವುದರೊಂದಿಗೆ, ಆನ್‌ಲೈನ್ ಉಪನ್ಯಾಸಗಳು, ವೆಬಿನಾರ್‌ಗಳು, ಹೈಬ್ರಿಡ್ ತರಗತಿಗಳು ಹಾಗೂ ವರ್ಚುವಲ್ ಸಂವಾದ ಕಾರ್ಯಕ್ರಮಗಳನ್ನು ಅತ್ಯುತ್ತಮ ಗುಣಮಟ್ಟದಲ್ಲಿ ಆಯೋಜಿಸಲು ಅನುಕೂಲವಾಗುತ್ತದೆ ಮತ್ತು ಶೈಕ್ಷಣಿಕ ಬೋಧನೆಯ ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಿಸುವುದಲ್ಲದೆ, ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಒಟ್ಟಾರೆ ಕಲಿಕೆಯ ಅನುಭವವನ್ನೂ ಉತ್ತಮಗೊಳಿಸುತ್ತದೆ.

ಈ ಆಧುನಿಕ ಡಿಜಿಟಲ್ ಮೂಲಸೌಕರ್ಯವು ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಪ್ರತಿಬಿಂಬಿಸುವುದರ ಜೊತೆಗೆ NAAC, UGC ಹಾಗೂ ಇತರೆ ಮಾನ್ಯತಾ ಸಂಸ್ಥೆಗಳ ಗುಣಮಟ್ಟದ ಮಾನದಂಡಗಳನ್ನು ಬಲಪಡಿಸಲು ಸಹಕಾರಿಯಾಗುತ್ತದೆ. ಇದರೊಂದಿಗೆ, LED Display Board ದೀರ್ಘಕಾಲ ಬಾಳಿಕೆ ಬರುವುದರ ಜೊತೆಗೆ ನಿರಂತರ ಬಳಕೆಗೆ ಸೂಕ್ತವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ವಿವಿಯ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ Indoor LED Display Board ಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಅವಶ್ಯವಿರುವ ಉಪಕರಣಗಳನ್ನು ಈ ಕೆಳಕಂಡ ಪ್ರಮಾಣದಲ್ಲಿ ಅಂತಿಮಗೊಳಿಸಲಾಗಿ, ಸದರಿ ಉಪಕರಣಗಳ ಅಂದಾಜು ಮೊತ್ತ ಕೆಳಕಂಡಂತ್ತಿರುತ್ತದೆ.

ಮೇಲ್ಕಂಡ ಉಪಕರಣಗಳನ್ನು ಖರೀದಿಸಿ ವಿಶ್ವವಿದ್ಯಾನಿಲಯ ಸಭಾಂಗಣಗಳಲ್ಲಿ ಅಳವಡಿಸಲು ಒಟ್ಟು ಮೊತ್ತ ರೂ.1,51,18,818.00 (ಒಂದು ಕೋಟಿ ಐವತ್ತೊಂದು ಲಕ್ಷದ ಹದಿನೆಂಟು ಸಾವಿರದ ಎಂಟು ನೂರ ಹದಿನೆಂಟು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳೆಂದು ಅಂದಾಜಿಸಿದ್ದು, ಈ ಸಂಬಂಧ ಸದರಿ ಉಪಕರಣಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಗಳಲ್ಲಿ ಇರುವ Indoor LED Display Board ಗಳ ಕಾರ್ಯಕ್ಷಮತೆ ಕಡಿಮೆಯಿಂದಾಗಿ reduced brightness, poor image clarity, dependence on ambient lighting conditions ನಿಂದ ಶೈಕ್ಷಣಿಕ ಚಟುವಟಿಕೆಗಳ ಪರಿಣಾಮಕಾರಿ ನಿರ್ವಹಣೆಗೆ ಅಡಚಣೆ ಉಂಟಾಗುತ್ತಿರುತ್ತದೆ. digital teaching methodologies, blended learning, multimedia-based instruction, and technology-enabled academic delivery ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, Indoor LED Display Board ಅನ್ನು ಸದರಿ ಸಭಾಂಗಣಗಳಲ್ಲಿ ಅಳವಡಿಸುವ ಮೂಲಕ ಉತ್ತಮ ಗುಣಮಟ್ಟದ Presentations, ವೀಡಿಯೊಗಳು, ಗ್ರಾಫ್‌ಗಳು ಹಾಗೂ ಡಿಜಿಟಲ್ ಅಧ್ಯಯನ ಸಾಮಗ್ರಿಗಳನ್ನು ಸ್ಪಷ್ಟವಾಗಿ display ಆಗುವುದರೊಂದಿಗೆ, ಆನ್‌ಲೈನ್ ಉಪನ್ಯಾಸಗಳು, ವೆಬಿನಾರ್‌ಗಳು, ಹೈಬ್ರಿಡ್ ತರಗತಿಗಳು ಹಾಗೂ ವರ್ಚುವಲ್ ಸಂವಾದ ಕಾರ್ಯಕ್ರಮಗಳನ್ನು ಅತ್ಯುತ್ತಮ ಗುಣಮಟ್ಟದಲ್ಲಿ ಆಯೋಜಿಸಲು ಅನುಕೂಲವಾಗುತ್ತದೆ ಮತ್ತು ಶೈಕ್ಷಣಿಕ ಬೋಧನೆಯ ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಾಗುತ್ತದೆಂದು ತಿಳಿಸಿದರು.

ಮುಂದುವರೆದು, ಮೇಲ್ಕಂಡ ಉಪಕರಣಗಳನ್ನು ಖರೀದಿಸಿ ವಿಶ್ವವಿದ್ಯಾನಿಲಯ ಸಭಾಂಗಣಗಳಲ್ಲಿ ಅಳವಡಿಸಲು ಒಟ್ಟು ಮೊತ್ತ ರೂ.1,51,18,818.00 (ಒಂದು ಕೋಟಿ ಐವತ್ತೊಂದು ಲಕ್ಷದ ಹದಿನೆಂಟು ಸಾವಿರದ ಎಂಟು ನೂರ ಹದಿನೆಂಟು ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆಗಳು ಸೇರಿ) ಗಳೆಂದು ಅಂದಾಜಿಸಿದ್ದು, ಈ ಸಂಬಂಧ ಸದರಿ ಉಪಕರಣಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಕುಲಪತಿಗಳು　　　　ಕುಲಸಚಿವರು

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಮಾತನಾಡಿ ನಾನು ಹಲವಾರು ಟೆಂಡರ್‌ಗಳನ್ನು ನೋಡಿದ್ದು, ಅದರಲ್ಲಿ ಈ LED Display Board functionಗಳು ಅವುಗಳ ಬೆಲೆಯ ಆಧಾರದ ಮೇಲೆ ಇವುಗಳ ದರಗಳನ್ನು ನಮೂದಿಸುತ್ತಾರೆ. ಈ ಬೆಲೆಯು ಅತ್ಯಂತ ಹೆಚ್ಚಾಗಿರುತ್ತದೆ. ಈ ಬಗ್ಗೆ ಸದರಿ ವಿಷಯಗಳ ವಿವರಗಳು ನಮಗೆ ಬಾರದೆ ಇರುವುದರಿಂದ ಇದನ್ನು ಮುಂದೆ ನೋಡೋಣ ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕ ಗುಣಮಟ್ಟದ Indoor LED Display Boardಗಳು ತಾಂತ್ರಿಕತೆಯ ಅನುಗುಣವಾಗಿ ದರಗಳನ್ನು ನಿಗದಿಪಡಿಸುತ್ತಾರೆ. ಆ ದರಗಳ ಅನ್ವಯ ಸೂಚಿಸಿರುವ ಅಂದಾಜು ವೆಚ್ಚಗಳಾಗಬಹುದೆಂದು ಕುಲಪತಿಗಳು ತಿಳಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯದ ಗಂಗಾ ಹಾಗೂ ನಳ ಸಭಾಂಗಣಕ್ಕೆ LED Display Boardಗಳು ತುರ್ತಾಗಿ ಅಳವಡಿಸಬೇಕಾಗಿದ್ದು, ಇದನ್ನು ಅನುಮೋದಿಸಬೇಕೆಂದು ಕೋರಿದೆ ಎಂದು ತಿಳಿಸಿದರು.

ಇದು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿರುವ ಮಾಹಿತಿಗಳ ಅನ್ವಯ ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ಒಪ್ಪಿದರು.

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಕಾವೇರಿ, ಗಂಗಾ ಹಾಗೂ ನಳ ಸಭಾಂಗಣಕ್ಕೆ ಗುಣಮಟ್ಟದ Indoor LED Display Boardಗಳನ್ನು ನಿಯಮಾವಳಿಗಳ ಪ್ರಕಾರ ಉಪಕರಣಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಸಭೆಯು ಅನುಮೋದಿಸಿತು.**

#####

**ವಿಷಯ ಸಂಖ್ಯೆ: 186.21**

<u>ವಿಷಯ:</u> **ವಿವಿಯ ಪ್ರವೇಶಾತಿಯನ್ನು ಹೆಚ್ಚಳ ಮಾಡುವ ಸಂಬಂಧ ಅನುಸರಿಸಬೇಕಾದ ಕ್ರಮಗಳ ಬಗ್ಗೆ.**

– * –

ವಿವಿಯ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಿ ಪ್ರವೇಶಾತಿಯನ್ನು ಹೆಚ್ಚಿಸಲು ಅವಶ್ಯವಿದ್ದ Digital Marketing ಸೇವೆಯನ್ನು ನಿಯಮಾನುಸಾರ ಕ್ರಮವಹಿಸಿ, ವಿವಿಯ ಶಾಸನಬದ್ಧ ಸಮಿತಿಗಳ ತೀರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ M/s. NPU Solutions & Services LLP, Bengaluru ರವರಿಂದ ಮೂರು ವರ್ಷಗಳ ಅವಧಿಗೆ ದಿನಾಂಕ 17.08.2023 ರಂತೆ ಕಾರ್ಯಾದೇಶ ನೀಡಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಅದರಂತೆ, ಸದರಿ ಸಂಸ್ಥೆಯವರು Digital Marketing ಸೇವೆಯನ್ನು ವಿವಿಗೆ ನೀಡುತ್ತಿದ್ದು, ಸದರಿ ಸೇವೆಯ ಅವಧಿಯು ದಿನಾಂಕ: 18.08.2026 ರಂದು ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಸದರಿ ಸೇವೆಯ ಕುರಿತು ದಿನಾಂಕ 18.07.2026 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದು, ಅನುಬಂಧ–1 ರಂತೆ ಚರ್ಚೆ ಹಾಗೂ ತೀರ್ಮಾನ ಕೈಗೊಳ್ಳಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿವಿಯ ಪ್ರವೇಶಾತಿಯನ್ನು ಪರಿಣಾಮಕಾರಿಯಾಗಿ ಹಾಗು ಸಮರ್ಥಕವಾಗಿ ಹೆಚ್ಚಳ ಮಾಡುವ ಸಂಬಂಧ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳುವ ಉದ್ದೇಶದಿಂದ, ದಿನಾಂಕ: 04.08.2026 ರಂದು ಸಮಿತಿ ರಚನೆಯಾಗಿರುತ್ತದೆ (ಅನುಬಂಧ–2). ಈ ಸಂಬಂಧ ಅನುಸರಿಸಬೇಕಾದ ಮುಂದಿನ ಕ್ರಮದ ಬಗ್ಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

*****

ಕುಲಪತಿಗಳು ಮಾತನಾಡಿ ಪ್ರವೇಶಾತಿ ಪ್ರಕ್ರಿಯೆಯು ಅಕ್ಟೋಬರ್ ಮಾಹೆಯವರೆಗೆ ನಡೆಯಲಿದ್ದು, ನಾವು ಪ್ರವೇಶಾತಿಯನ್ನು ಹೆಚ್ಚಿಸಬೇಕಾಗಿರುತ್ತದೆ. ಕಾರಣವೇನೆಂದರೆ ನಮ್ಮಲ್ಲಿ ಹೆಚ್ಚು ವಿದ್ಯಾರ್ಥಿಗಳು ಪ್ರವೇಶಾತಿ ಪಡೆದರೆ, ಆ ಪ್ರವೇಶಾತಿ ಶುಲ್ಕವು ವಿಶ್ವವಿದ್ಯಾನಿಲಯದ ಸಂಪನ್ಮೂಲಗಳಾಗಿರುತ್ತದೆಂದು ಸಭೆಗೆ ತಿಳಿಸಿದರು. ಸರ್ಕಾರದಿಂದ ಯಾವುದೇ ಅನುದಾನವಿಲ್ಲದೇ ಸ್ವಂತ ಹಣಕಾಸು ಸೌಲಭ್ಯವನ್ನು ವಿದ್ಯಾರ್ಥಿಗಳ ಪ್ರವೇಶಾತಿ ಮತ್ತು ಪರೀಕ್ಷೆಯ ಅಧಾರದ ಮೇಲಿರುತ್ತದೆಂದು ಸಭೆಗೆ ತಿಳಿಸಿದರು.

ಕುಲಪತಿಗಳು | ಕುಲಸಚಿವರು

ಜೊತೆಗೆ ಕುಲಪತಿಗಳು ಮಾತನಾಡಿ ಹಿಂದಿನ ಏಜೆನ್ಸಿಯವರು, ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಮ್ಮುಖದಲ್ಲಿ Call center ಸ್ಥಾಪಿಸಿ, Google, Twitter, facebook, Instagram, youtube ಇತರೇ Social media ಗಳಲ್ಲಿ ಜಾಹೀರಾತುಗಳನ್ನು ನೀಡಿ, ವಿದ್ಯಾರ್ಥಿಗಳಿಗೆ ದೂರವಾಣಿ ಮುಖಾಂತರ ಮಾರ್ಗದರ್ಶನಗಳನ್ನು ನೀಡಿದರೆಂದು ಸಭೆಗೆ ತಿಳಿಸಿ, ಇದೇ ರೀತಿ ಪ್ರವೇಶಾತಿ ಹೆಚ್ಚಿಸಲು ಮುಂದೆಯೂ ಕೂಡ Digital media ಮುಖಾಂತರ Advertisement ಅಳವಡಿಸಿಕೊಳ್ಳಬಹುದೆಂದು ತಿಳಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆಯವರು ಮಾತನಾಡಿ, ವಿಶ್ವವಿದ್ಯಾನಿಲಯದ 3 ವರ್ಷದ ಆಡಿಟ್ ವರದಿಯನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಮಂಡಿಸಿ ಅನುಮೋದನೆ ಪಡೆಯಬೇಕು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಟೆಂಡರ್ ಕರೆದರೂ ಸಹ ನಮ್ಮಲ್ಲಿ ಇಬ್ಬರು ನಿವೃತ್ತ ಆಡಿಟರ್‌ಗಳನ್ನು ನೇಮಿಸಿಕೊಂಡು ಅವರುಗಳನ್ನೂ ಈ ಸಂದರ್ಭದಲ್ಲಿ ಅಹ್ವಾನಿಸುತ್ತಿದ್ದೇವೆ ಎಂದು ತಿಳಿಸಿದರು.

<u>ತೀರ್ಮಾನ</u> : ಸದರಿ ವಿಷಯವನ್ನು ಮುಂದೂಡಲಾಯಿತು.

#####

**ವಿಷಯ ಸಂಖ್ಯೆ: 186.22**

**<u>ವಿಷಯ:</u> ಹಣಕಾಸು ಸಮಿತಿಯ 94ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ**

– * –

ದಿನಾಂಕ: 07/08/2026 ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 94ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 186ನೇ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

*****

ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ದಿನ ಅಥವಾ ಅದರ ಹಿಂದಿನ ದಿನ ಸಭೆ ನಡೆಸಿ ನಡಾವಳಿಯನ್ನು ಟೇಬಲ್ ಅಜೆಂಡಾ ರೀತಿ ಸಭೆಯಲ್ಲೇ ನೀಡಿದರೆ, ಅದರಲ್ಲಿರುವ ವಿಷಯಗಳನ್ನು ಮತ್ತು ತೀರ್ಮಾನಗಳನ್ನು ತಿಳಿದುಕೊಳ್ಳದೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ತೀರ್ಮಾನಿಸುವುದು ಕಷ್ಟಕರವಾಗಿರುತ್ತದೆ. ಆದುದರಿಂದ ಇನ್ನು ಮುಂದೆ ವ್ಯವಸ್ಥಾಪನ ಮಂಡಳಿ ಸಭೆಯ ಹಿಂದಿನ 10 ದಿನಗಳ ಮುಂಚಿತವಾಗಿಯೇ ಶೈಕ್ಷಣಿಕ ಮಂಡಳಿ ಸಭೆ ಮತ್ತು ಹಣಕಾಸಿನ ಸಭೆಯನ್ನು ನಡೆಸಿ ಅವುಗಳನ್ನು ವ್ಯವಸ್ಥಾಪನ ಮಂಡಳಿ ಸಭೆಯ ಸದಸ್ಯರುಗಳಿಗೆ ಮೇನ್ ಅಜಂಡಾದಲ್ಲೇ ಕಳುಹಿಸಿದರೆ ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆಂದು ಎಲ್ಲಾ ಸದಸ್ಯರುಗಳು ತಮ್ಮಗಳ ಅಭಿಪ್ರಾಯವನ್ನು ತಿಳಿಸಿದರು.

ಕುಲಪತಿಗಳು ಮಾತನಾಡಿ ನಾನು ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ಇತ್ತೀಚೆಗೆ ಬಂದಿದ್ದು, ಇದು ಮೊದಲನೇ ಸಭೆಯಾಗಿರುತ್ತದೆ. ಇದರಲ್ಲಿ ಸದಸ್ಯರುಗಳು ಕೆಲವು ಅಮೂಲ್ಯ ಸಲಹೆಗಳನ್ನು ತಿಳಿಸಿದ್ದು, ಅವುಗಳ ರೀತ್ಯಾ ಮುಂದಿನ ದಿನಗಳಲ್ಲಿ ಮಾರ್ಪಡು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

ಮುಂದುವರೆದು, ವ್ಯವಸ್ಥಾಪನ ಮಂಡಳಿಯ ಸದಸ್ಯರುಗಳಲ್ಲಿ ಇಬ್ಬರು ಸದಸ್ಯರಾದ ವಿತ್ತೀಯ ಮತ್ತು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಇಬ್ಬರು ವಿಧಾನಸಭಾ ಸದಸ್ಯರು ಹಣಕಾಸು ಸಮಿತಿ ಸಭೆಯಲ್ಲಿ ಇರುತ್ತಾರೆ. ಈ ಸಭೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಾಗಿರುವ ವಿಷಯಗಳನ್ನು ಮಂಡಿಸಿ, ಕೈಗೊಂಡ ನಿರ್ಣಯಗಳನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಅನುಮೋದನೆಗೆ ಮಂಡಿಸಲಾಗಿದೆ ಎಂದು ವಿವರಿಸಿದರು.

ಉಪಕಾರ್ಯದರ್ಶಿಗಳು, ಹಣಕಾಸು ಇಲಾಖೆ ರವರು ಮಾತನಾಡಿ ನಮಗೆ ಈ ವಿಷಯಗಳು ಬಂದಿರುವುದಿಲ್ಲ. ಇದರಿಂದ ಚರ್ಚಿಸಲು ಮಾಹಿತಿ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಇತರೆ ಸದಸ್ಯರು ಹಣಕಾಸು ಸಮಿತಿಯಲ್ಲಿ ನಮ್ಮ ಸದಸ್ಯರುಗಳು ಇರುವುದರಿಂದ ಒಪ್ಪಿಗೆ ಸೂಚಿಸಿದರು.

<u>ತೀರ್ಮಾನ</u> : **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಹಣಕಾಸು ಸಮಿತಿಯ 94ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.**

#####

**ಕುಲಪತಿಗಳು** **ಕುಲಸಚಿವರು**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1) **ವಿಷಯ:** **ವಿಶ್ವವಿದ್ಯಾನಿಲಯದಲ್ಲಿ ವ್ಯವಸ್ಥಾಪನಾ ಮಂಡಳಿ ಸಭೆಯ ವಿವಿಧ ಸಭೆಗಳಲ್ಲಿನ ತೀರ್ಮಾನಗಳಿಗೆ ಮಾನ್ಯ ಸದಸ್ಯಗಳಿಂದ ಸಲ್ಲಿಸಲಾದ ಆಕ್ಷೇಪಣೆಗೆ ಸಂಬಂಧ ಘನತೆವೆತ್ತ ಕುಲಾಧಿಪತಿಗಳ ನಿರ್ಧಾರವನ್ನು ದಾಖಲಿಸುವ ಬಗ್ಗೆ.**

– * –

ವಿಶ್ವವಿದ್ಯಾನಿಲಯದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗಳಾದ 180 (ವಿ.ಸಂ.10), 181, 182, 183 (ವಿ.ಸಂ.10 ಮತ್ತು 11) ಮತ್ತು 184 (ವಿ.ಸಂ.04, ಮತ್ತು 13) ರ ವಿಷಯಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕೆಲವು ನಿರ್ಣಯಗಳ ಕುರಿತು ಮಾನ್ಯ ಸದಸ್ಯರುಗಳು ಆಕ್ಷೇಪಣೆ/ಅಸಮ್ಮತಿಯನ್ನು ಸಲ್ಲಿಸಿದ್ದರು.

ಸದರಿ ಆಕ್ಷೇಪಣೆ/ಅಸಮ್ಮತಿ ಕುರಿತು ವಿಶ್ವವಿದ್ಯಾನಿಲಯ ಸಮಗ್ರ ವರದಿಯನ್ನು ಸಿದ್ದಪಡಿಸಿ ಘನತೆವೆತ್ತ ಕುಲಾಧಿಪತಿಗಳ ಗಮನಕ್ಕೆ ಮತ್ತು ಸೂಕ್ತ ವಿವರಣೆಗಳೊಂದಿಗೆ ಮಾರ್ಗದರ್ಶನ ಕೋರಿ ದಿನಾಂಕ:11.06.2026 ರಂದು ಪತ್ರ ಸಲ್ಲಿಸಲಾಗಿರುತ್ತದೆ(ಅನುಬಂಧ–1).

ವಿಶ್ವವಿದ್ಯಾನಿಲಯದಿಂದ ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಘನತೆವೆತ್ತ ಕುಲಾಧಿಪತಿಗಳು ವಿವರಣೆಗಳನ್ನು ಗಮನಿಸಿ, ವ್ಯವಸ್ಥಾಪನಾ ಮಂಡಳಿ ಸಭೆ 180 ರಿಂದ 184ರ ಸಭೆಗಳಿಗೆ ದಿನಾಂಕ: 14.07.2026 ರ ಪತ್ರದ ಮೂಲಕ ಅನುಮೋದನೆಯನ್ನು ನೀಡಿ, "Meetings are Accepted" ಎಂದು ತಿಳಿಸಲಾಗಿದೆ. (ಅನುಬಂಧ–2).

ವ್ಯವಸ್ಥಾಪನಾ ಮಂಡಳಿಯ ಮೇಲ್ಕಂಡ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಸಲ್ಲಿಸಿದ್ದ ಆಕ್ಷೇಪಣೆ/ಅಸಮ್ಮತಿಗಳ ಕುರಿತು ಮಾನ್ಯ ಕುಲಾಧಿಪತಿಗಳು ನೀಡಿರುವ ನಿರ್ಧಾರವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರಲಾಗಿದೆ.

*****

ಕುಲಪತಿಗಳು ಮಾತನಾಡಿ, ಈ ಹಿಂದೆ ಯಾವ ಸಭೆಗಳಲ್ಲಿ ಯಾವ ವಿಷಯಗಳು ಮಂಡನೆಯಾಗಿದ್ದು, ಅವುಗಳಿಗೆ ಯಾವ ರೀತಿಯ ತೀರ್ಮಾನಗಳಾಗಿರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮಾನ್ಯ ಘನತೆವೆತ್ತ ಕುಲಾಧಿಪತಿಗಳು ವಿವರಣೆಗಳನ್ನು ಗಮನಿಸಿ, ವ್ಯವಸ್ಥಾಪನಾ ಮಂಡಳಿ ಸಭೆ 180 ರಿಂದ 184ರ ಸಭೆಗಳಿಗೆ ದಿನಾಂಕ: 14.07.2026ರ ಪತ್ರದ ಮೂಲಕ ಅನುಮೋದನೆಯನ್ನು ನೀಡಿ, "Meetings are Accepted" ಎಂದು ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಬದಲಾವಣೆ ಮಾಡದೇ ನಾವುಗಳು ಆಯಾ ವಿಷಯಗಳ ಬಗ್ಗೆ ಯಾವ ತೀರ್ಮಾನಗಳನ್ನು ತೆಗೆದುಕೊಂಡಿರುತ್ತೇವೆ ಅದೇ ರೀತಿ ಇದ್ದರೆ ಆಕ್ಷೇಪಣೆಗಳನ್ನು ಯಾರು ಸಲ್ಲಿಸುವುದಿಲ್ಲವೆಂದು ಸದಸ್ಯರುಗಳು ಸಭೆಗೆ ತಿಳಿಸಿದರು.

ಹಣಕಾಸು ಸಮಿತಿ ಸಭೆಗೆ ಇಬ್ಬರು ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನು ನೇಮಕ ಮಾಡಲಾಗಿದ್ದು, ಅದರಂತೆ ವಿಶ್ವವಿದ್ಯಾನಿಲಯದಲ್ಲಿ ಇರುವ ಇತರೆ ಸಮಿತಿಗಳಿಗೂ ಸಹ ಇತರೆ ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನ ನೇಮಕ ಮಾಡಬೇಕೆಂದು ಹಾಜರಿದ್ದ ಎಲ್ಲಾ ಸದಸ್ಯರುಗಳು ಸಭೆಗೆ ತಿಳಿಸಿದರು.

ಈ ಬಗ್ಗೆ ಕುಲಪತಿಗಳು ಮಾತನಾಡಿ, ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ನೀಡಿದ್ದು, ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

**ತೀರ್ಮಾನ :** **ಮಾನ್ಯ ಘನತೆವೆತ್ತ ಕುಲಾಧಿಪತಿಗಳು ವ್ಯವಸ್ಥಾಪನಾ ಮಂಡಳಿ ಸಭೆ 180 ರಿಂದ 184ರ ಸಭೆಗಳಿಗೆ ದಿನಾಂಕ: 14.07.2026 ರ ಪತ್ರದ ಮೂಲಕ ಅನುಮೋದನೆಯನ್ನು ನೀಡಿ, "Meetings are Accepted" ಎಂದು ತಿಳಿಸಿರುವುದನ್ನು ಮಾನ್ಯ ಮಾಡಲಾಯಿತು.**

#####

ಕುಲಪತಿಗಳು

ಕುಲಸಚಿವರು

2) **ವಿಷಯ:** **ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾದೇಶಿಕ ನಿರ್ದೇಶಕರು (ಗ್ರೇಡೆಡ್ ಪೇ/ಕಾ.ವೇ.ಶ್ರೇ), ಗ್ರೇಡೆಡ್ ಪೇ ನೌಕರರುಗಳು ಹಾಗೂ ಎಸ್ಟೇಟ್ ಆಫೀಸರ್ (ಕಾಲಿಕ ವೇತನ ಶ್ರೇಣಿ) ಇವರುಗಳಿಗೆ ರಾಜ್ಯ 7ನೇ ವೇತನ ಆಯೋಗದ ಪರಿಷ್ಕೃತ ವೇತನ ಹಾಗೂ ಇತರೆ ಭತ್ಯೆಗಳು ಮತ್ತು ಸೌಲಭ್ಯಗಳನ್ನು ಜಾರಿಗೊಳಿಸಿರುವ ಕುರಿತು.**

– * –

ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಪ್ರಾದೇಶಿಕ ನಿರ್ದೇಶಕರು(ಗ್ರೇಡೆಡ್ ಪೇ/ಕಾಲಿಕ ವೇತನ ಶ್ರೇಣಿ)ಗಳಿಗೆ 7ನೇ ವೇತನ ನೀಡುವ ಸಂಬಂಧ ದಿನಾಂಕ:31.10.2025 ರಂದು ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ 184ನೇ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ, ಚರ್ಚಿಸಲಾದ ಇತರೆ ವಿಷಯಗಳ ಕ್ರಮ ಸಂಖ್ಯೆ "01"ರಲ್ಲಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ಕೆ. ಹರೀಶ್ ಗೌಡರವರು ವಿಷಯ ಪ್ರಸ್ತಾಪಿಸಿರುತ್ತಾರೆ.

ಈ ಸಂಬಂಧ ಸದರಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ್ದು, ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಗಿರುತ್ತದೆ(ಅನುಬಂಧ–1).

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ/ಕಾಲಿಕ ವೇತನ ಶ್ರೇಣಿಯ 17 ಪ್ರಾದೇಶಿಕ ನಿರ್ದೇಶಕರುಗಳಿಗೆ **"7ನೇ ವೇತನವನ್ನು ಮಾತ್ರ"** ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.
2. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಪದನಾಮಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ನೌಕರರುಗಳಿಗೆ **"7ನೇ ವೇತನವನ್ನು ಮಾತ್ರ"** ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

ಮುಂದುವರಿದು, ದಿನಾಂಕ:18.04.2026 ರಂದು ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ 185ನೇ ಸಭೆಯಲ್ಲಿ ಕರಾಮುವಿಯಲ್ಲಿ ತಾತ್ಕಾಲಿಕ ನೌಕರರುಗಳಾಗಿ ಗ್ರೇಡೆಡ್ ಪೇ/ಕಾಲಿಕ ವೇತನ ಶ್ರೇಣಿಯಲ್ಲಿರುವ ನೌಕರರುಗಳಿಗೆ 7ನೇ ವೇತನ ನೀಡಬೇಕಾದರೆ, ಈ ಸಂಬಂಧ ಹಣಕಾಸು ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಗಳಿಗೆ ಪತ್ರ ಬರೆದು ಅನುಮೋದನೆ ಪಡೆದ ನಂತರ ಮುಂದಿನ ಕ್ರಮವಹಿಸಬೇಕೆಂದು ತೀರ್ಮಾನಿಸಲಾಗಿರುತ್ತದೆ(ಅನುಬಂಧ–2).

ಮಾನ್ಯ ವ್ಯವಸ್ಥಾಪನಾ ಮಂಡಳಿಯ 184ನೇ ಸಭೆಯ ತೀರ್ಮಾನವನ್ನು ಅನುಸ್ಠಾನಗೊಳಿಸುವ ಸಂಬಂಧದಲ್ಲಿ ಮಾನ್ಯ ಕುಲಪತಿಗಳು ನೀಡಿರುವ ಆದೇಶದ ಮೇರೆಗೆ, ಕ್ರಮವಾಗಿ ದಿನಾಂಕ:30.1.2026, 18.06.2026, 25.06.2026 ರಂದು ನಾಲ್ಕು ಪ್ರತ್ಯೇಕ ಕಚೇರಿ ಆದೇಶಗಳನ್ನು ಹೊರಡಿಸಿ 17 ಮಂದಿ ಗ್ರೇಡೆಡ್ ಪೇ/ಕಾ.ವೇ.ಶ್ರೇ ಪ್ರಾದೇಶಿಕ ನಿರ್ದೇಶಕರುಗಳಿಗೆ, 167 ಮಂದಿ ವಿವಿಧ ಪದನಾಮಗಳ ಗ್ರೇಡೆಡ್ ಪೇ ನೌಕರರುಗಳಿಗೆ (ದ್ವಿ.ದ.ಗು/ಪರಿಚಾರಕ/ಸೇವಕ/ಇತರೆ), 25 ಮಂದಿ ಗ್ರೇಡೆಡ್ ಪೇ ಡಿ.ಇ.ಓ ನೌಕರರುಗಳಿಗೆ ಹಾಗೂ ಒಬ್ಬರು ಎಸ್ಟೇಟ್ ಆಫೀಸರ್(ಕಾ.ವೇ.ಶ್ರೇ), ಇವರುಗಳಿಗೆ ರಾಜ್ಯ 7ನೇ ವೇತನ ಆಯೋಗದ ಶಿಫಾರಸ್ಸಿನ ಪರಿಷ್ಕೃತ ವೇತನ ಶ್ರೇಣಿಗಳನ್ವಯ ಪರಿಷ್ಕೃತ ವೇತನ ಹಾಗೂ ಭತ್ಯೆಗಳು ಮತ್ತು ಇತರೆ ಸೌಲಭ್ಯಗಳನ್ನು ದಿನಾಂಕ:01.01.2026 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಲಾಗಿದ್ದು(ಅನುಬಂಧ– 3 ರಿಂದ 6), ಕೈಗೊಳ್ಳಲಾಗಿರುವ ಸದರಿ ಪ್ರಕ್ರಿಯೆಗಳ ಸಂಬಂಧ ಅನುಸಮರ್ಥನೆಗಾಗಿ ದಿನಾಂಕ:07.08.2026 ರಂದು ನಡೆದ ಹಣಕಾಸು ಸಮಿತಿಗೆ ಈಗಾಗಲೇ ವಿಷಯ ಮಂಡಿಸಲಾಗಿರುವುದನ್ನು ಅವಗಾಹನೆಗಾಗಿ ತರುತ್ತಾ, ಈ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಡಾ. ಮಹೇಶ್ .ಎಸ್ ರವರು ಮಾತನಾಡಿ, ಈಗಾಗಲೇ ವಿಶ್ವವಿದ್ಯಾನಿಲಯದ ಹಿಂದಿನ ಕುಲಪತಿಗಳ ಆದೇಶದಂತೆ, 17 ಮಂದಿ ಗ್ರೇಡೆಡ್ ಪೇ/ಕಾ.ವೇ.ಶ್ರೇ ಪ್ರಾದೇಶಿಕ ನಿರ್ದೇಶಕರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನ ಪರಿಷ್ಕೃತ ವೇತನ ಶ್ರೇಣಿಗಳನ್ವಯ ವೇತನ ಹಾಗೂ ಭತ್ಯೆಗಳನ್ನು ದಿನಾಂಕ: 01.01.2026 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಲಾಗಿದ್ದು ಅದು ಸಮಂಜಸವಾಗಿರುತ್ತದೆಂದು ತಿಳಿಸಿದರು.

ಸದರಿ ವಿಷಯಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

**ಕುಲಪತಿಗಳು** **ಕುಲಸಚಿವರು**

ಡಾ. ಮಹೇಶ್ .ಎಸ್ ರವರು ಮಾತನಾಡಿ, 25 ಮಂದಿ ಗ್ರೇಡೆಡ್ ಪೇ ಡಿ.ಇ.ಓ ನೌಕರರುಗಳ ನೇಮಕಾತಿಯು ಸಾಮಾಜಿಕ ನ್ಯಾಯದಿಂದ ಕೂಡಿರುವುದಿಲ್ಲ. ಆದುದರಿಂದ ಇದನ್ನು ಮಾಡಲು ಬರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಕುಲಪತಿಗಳು ಮಾತನಾಡಿ ಈಗಾಗಲೇ ನಿರಂತರವಾಗಿ 10 ವರ್ಷಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನ ಪರಿಷ್ಕೃತ ವೇತನ ಶ್ರೇಣಿ ಮತ್ತು ಭತ್ಯೆಯನ್ನು ನೀಡಲಾಗುತ್ತಿದ್ದು, ಅದರಂತೆ ಪ್ರಾದೇಶಿಕ ಕೇಂದ್ರಗಳ ಪ್ರಾದೇಶಿಕ ನಿರ್ದೇಶಕರುಗಳಿಗೆ, ಎಸ್ಟೇಟ್ ಆಫೀಸರ್‌ಗೆ ಮತ್ತು ಡಿ.ಇ.ಓ ಗಳಿಗೆ ನೀಡುವುದು ಸೂಕ್ತವೆಂದು ತಿಳಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಮೇಲ್ಕಂಡಂತೆ ಸವಲತ್ತುಗಳನ್ನು ಇತರೆ ನೌಕರರುಗಳಿಗೆ ನೀಡುತ್ತಿದ್ದರೆ, ಸದರಿ ನೌಕರರಿಗೂ ನೀಡುವುದು ಸೂಕ್ತವೆಂದು ಸದಸ್ಯರುಗಳು ಸಭೆಗೆ ತಿಳಿಸಿದರು.

ತೀರ್ಮಾನ : 1) **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾದೇಶಿಕ ನಿರ್ದೇಶಕರುಗಳಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ 17 ಮಂದಿ ಗ್ರೇಡೆಡ್ ಪೇ/ಕಾ.ವೇ.ಶ್ರೇ ಪ್ರಾದೇಶಿಕ ನಿರ್ದೇಶಕರುಗಳಿಗೆ ಮತ್ತು ಎಸ್ಟೇಟ್ ಆಫೀಸರ್‌ಗೆ (ಕಾಲಿಕ ವೇತನ ಶ್ರೇಣಿ) 7ನೇ ವೇತನ ಆಯೋಗದ ಶಿಫಾರಸ್ಸಿನ ಪರಿಷ್ಕೃತ ವೇತನ ಶ್ರೇಣಿ ಮತ್ತು ಭತ್ಯೆಯನ್ನು ದಿನಾಂಕ: 01.01.2026ರಿಂದ ಜಾರಿಗೊಳಿಸಲು ತೀರ್ಮಾನಿಸಲಾಯಿತು.**

2) **25 ಮಂದಿ ಗ್ರೇಡೆಡ್ ಪೇ ಡಿ.ಇ.ಓ ನೌಕರರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನ ಪರಿಷ್ಕೃತ ವೇತನ ಶ್ರೇಣಿಗಳನ್ವಯ ವೇತನ ಹಾಗೂ ಭತ್ಯೆಯನ್ನು ದಿನಾಂಕ:01.01.2026ರಿಂದಪೂರ್ವಾನ್ವಯವಾಗಿ ನೀಡಲು ತೀರ್ಮಾನಿಸಲಾಯಿತು.**

#####

3) ವಿಷಯ: **41ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 06-08-2026ರಂದು ನಡೆದ 41ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನದ ನಡಾವಳಿಯನ್ನು ದಿನಾಂಕ: 07-08-2026 ರಂದು ರಂದು ನಡೆಯಲಿರುವ 186ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*****

ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿರುವ ವಿಷಯಗಳನ್ನು ಮಂಡಿಸಲಾಗಿದ್ದು, ಸದರಿ ವಿಷಯಗಳ ಬಗ್ಗೆ ತಮ್ಮಗಳ ಅನುಮೋದನೆ ಅವಶ್ಯಕವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ವಿಷಯಗಳು ಈ ಕೆಳಕಂಡಂತಿದೆ:-

| ಕ್ರಮ ಸಂಖ್ಯೆ | ವಿಷಯ ಸಂಖ್ಯೆ | ವಿಷಯ |
|---|---|---|
| 01 | 41.01 | MBA 3 ಮತ್ತು 4ನೇ ಸೆಮಿಸ್ಟರ್ ನ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ Specialization ಮುದ್ರಿಸುವ ಕುರಿತು. |
| 02 | 41.02 | ವಿಶ್ವವಿದ್ಯಾನಿಲಯದ CBCS ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ Additional Mandatory Course ಗಳಾದ Indian Constitution & Human Rights ಮತ್ತು Environmental Science ವಿಷಯಗಳಿಗೆ ಸಂಬಂಧಿಸಿದಂತೆ ಸೆಮಿಸ್ಟರ್ ಅಂಕಪಟ್ಟಿಯಲ್ಲಿ SGPA ಹಾಗೂ ಅಂತಿಮ ಸೆಮಿಸ್ಟರ್ ಅಂಕಪಟ್ಟಿಯಲ್ಲಿ CGPA ನಮೂದಿಸುವ ಬಗ್ಗೆ. |

ಕುಲಪತಿಗಳು

ಕುಲಸಚಿವರು

| | | |
|---|---|---|
| 03 | 41.03 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸಿರುವ ಸಂಬಂಧ ಅನುಸಮರ್ಥನೆಗಾಗಿ. |
| 04 | 41.04 | ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಸಂಬಂಧ ಅನುಸಮರ್ಥನೆಗಾಗಿ. |
| 05 | 41.05 | ಕರಾಮುವಿಯ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| 06 | 41.06 | ಗಣಕ ವಿಜ್ಞಾನ ಅಧ್ಯಯನ ವಿಭಾಗದಿಂದ ನೂತನವಾಗಿ ಪ್ರಾರಂಭಿಸುತ್ತಿರುವ Diploma in Cyber Security, Diploma in Artificial Intelligence Programme ಗಳನ್ನು Online Learning ಮೂಲಕವೂ ಸಹ ವಿದ್ಯಾರ್ಥಿಗಳಿಗೆ ನೀಡಲು ಅನುಮೋದನೆ ಕೋರುವ ಬಗ್ಗೆ. |
| 07 | 41.07 | ಕರಾಮುವಿಯ KSOU Programme Center/KSOU Work Center ನ ಅಡಿಯಲ್ಲಿ ಯೋಗ ವಿಜ್ಞಾನ ಸರ್ಟಿಫಿಕೇಟ್ ಕೋರ್ಸ್ ಅನ್ನು ಪ್ರಾರಂಭಿಸುವ ಬಗ್ಗೆ. |
| 08 | 41.08 | ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗಗಳಿಗೆ ಅವಶ್ಯಕವಾದ ರಸಾಯನಿಕ ಪದಾರ್ಥಗಳು ಹಾಗೂ ಪ್ರಯೋಗಾಲಯ ಸಲಕರಣೆಗಳನ್ನು ಖರೀದಿಸುವ ಸಂಬಂಧ Rate Contract ಮಾಡುವ ಬಗೆಗೆ. |
| 09 | 41.09 | ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರುಗಳಿಗೆ ಯುಜಿಸಿ ನಿಯಮದಂತೆ ವಿಶೇಷ ಸಾಂದರ್ಭಿಕ ರಜೆ, Duty Leave ಎಂಬ ರಜೆಗಳನ್ನು ನಿಗಧಿಪಡಿಸುವ ಬಗ್ಗೆ. |
| 10 | 41.10 | PGCIT, DIT ಮತ್ತು UGCICT ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಕಡಿಮೆ ಇರುವ ಕೋರ್ಸ್‌ಗಳ ಬಗೆಗೆ ಮತ್ತು ಹೊಸ ಡಿಪ್ಲೋಮ ಕಾರ್ಯಕ್ರಮಗಳ ಪರಿಚಯಿಸುವ ಬಗೆಗೆ. (ಐ.ಟಿ. ವಿಭಾಗ) |
| 11 | 41.11 | ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Digital Evaluation ಅನ್ನು ಮುಂದುವರಿಸುವ ಸಂಬಂಧ ನಿರ್ಣಯ ಕೈಗೊಳ್ಳುವ ಬಗೆಗೆ. |
| 12 | 41.12 | ದಿನಾಂಕ: 29.07.2026 ರಂದು ನಡೆಸಲಾದ ಪಿಹೆಚ್.ಡಿ. ಶಿಕ್ಷಣ ಕ್ರಮದ ಕುಂದುಕೊರತೆಗೆ ಸಂಬಂಧಿಸಿದ ಸಮಿತಿ ಸಭೆಯ ನಡಾವಳಿ ಅನುಮೋದನೆ ಕೋರಿ. |
| 13 | 41.13 | 2025–26ನೇ ಸಾಲಿನಲ್ಲಿ ಖಾಲಿಯಿರುವ ಪಿಹೆಚ್.ಡಿ ಸೀಟುಗಳಿಗೆ ಪರಿಷ್ಕೃತ ಅಧಿಸೂಚನೆ ಹೊರಡಿಸಿರುವ ಬಗ್ಗೆ (ಅನುಸಮರ್ಥನೆಗಾಗಿ) |
| 14 | 41.14 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಚಲನಚಿತ್ರಕ್ಕೆ ಸಂಬಂಧಿಸಿದ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗೆಗೆ. |
| 15 | 41.15 | ODL ನಲ್ಲಿ Certificate, PG Diploma ಮತ್ತು Degree courses ಗಳನ್ನು ಪ್ರಾರಂಭಿಸಲು PPR/Syllabus ಅನುಮೋದನೆಗಾಗಿ. (Bio-chemistry) |
| 16 | 41.16 | ಕರಾಮುವಿ ಯಲ್ಲಿ ಎಂ.ಎಸ್ಸಿ. ಭೂ ವಿಜ್ಞಾನ ಕಾರ್ಯಕ್ರಮವನ್ನು ಮುಂದುವರೆಸುವ ಕುರಿತು ಸೂಕ್ತ ಚರ್ಚೆ ಮತ್ತು ನಿರ್ಣಯದ ಬಗ್ಗೆ |
| 17 | 41.17 | ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೌಶಲ್ಯಾಭಿವೃದ್ಧಿ ಯೋಜನೆಗಳು / ಕಾರ್ಯಕ್ರಮಗಳಡಿ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು (ಸಿ.ಐ.ಕ್ಯೂ.ಎ ವಿಭಾಗ) |
| 18 | 41.18 | ಸಮಾಜಕಾರ್ಯ ಸ್ನಾತಕ ಕಾರ್ಯಕ್ರಮದ (BSW) ಅಂಕಪಟ್ಟಿಗಳಲ್ಲಿ ಅಂಕಗಳನ್ನು ನಿಗಧಿಪಡಿಸುವ ಬಗ್ಗೆ. |
| 19 | 41.19 | Programs on Statistics and Data Analytics |
| 20 | 41.20 | ಅಧ್ಯಕ್ಷರ ಒಪ್ಪಿಗೆ ಮೇರೆಗೆ ಇತರೆ ವಿಷಯಗಳು |

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 41.11 ಕ್ಕೆ ಸಂಬಂಧಿಸಿದಂತೆ:** ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ **Digital Evaluation** ಅನ್ನು ಮುಂದುವರಿಸುವ ಸಂಬಂಧ ನಿರ್ಣಯ ಕೈಗೊಳ್ಳುವ ಬಗೆಗೆ.

– * –

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯದ ಮೌಲ್ಯಮಾಪನಾ ಕಾರ್ಯವನ್ನು ಡಿಜಿಟಲೀಕರಣಗೊಳಿಸುವ ಸಂಬಂಧ ಅವಶ್ಯವಿದ್ದ Digital Evaluation Software ಅನ್ನು ನಿಯಮಾನುಸಾರ ಕ್ರಮವಹಿಸಿ, ವಿವಿಯ ಶಾಸನಬದ್ಧ ಸಮಿತಿಗಳ ತೀರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ, M/s. Convergent Wireless Communication Pvt. Ltd., Bengaluru ರವರಿಗೆ Digital Evaluation Software ಅನ್ನು ವಿವಿಯಲ್ಲಿ ಅಳವಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ Subscription ನೀಡಲು ದಿನಾಂಕ: 10.03.2022 ಹಾಗೂ 08.03.2022 ರಂದು ಕಾರ್ಯಾದೇಶಗಳನ್ನು ನೀಡಲಾಗಿರುತ್ತದೆ. ಅದರಂತೆ, ಸದರಿ ತಂತ್ರಾಂಶವು ದಿನಾಂಕ: 18.07.2023 ರಿಂದ ವಿವಿಯಲ್ಲಿ ಬಳಕೆಯಲ್ಲಿದ್ದು, ಪ್ರಸ್ತುತ Subscription ಅವಧಿ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ, ತಂತ್ರಾಂಶದ ಕಾರ್ಯಕ್ಷಮತೆಯ ಬಗ್ಗೆ ಪರಿಶೀಲಿಸಲು ಹಾಗೂ ಸದರಿ ತಂತ್ರಾಂಶದ ಅವಶ್ಯಕತೆ, ಉಪಯುಕ್ತತೆ, ಪರಿಣಾಮಕಾರಿತ್ವದ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ: 23.07.2026 ರಂದು ಸಮಿತಿಯ ಸಭೆ ನಡೆದಿದ್ದು, ಸದರಿ ಸಮಿತಿಯು Digital Evaluation ತಂತ್ರಾಂಶವನ್ನು ಮುಂದುವರಿಸುವ ಸಂಬಂಧ ತೀರ್ಮಾನಿಸಿರುತ್ತದೆ. (ಅನುಬಂಧ–1)

ಮುಂದುವರೆದು, Digital Evaluation ತಂತ್ರಾಂಶಕ್ಕೆ ಅವಶ್ಯವಿರುವ Scope of Work ಅನ್ನು ದಿನಾಂಕ: 05.08.2026 ರಂದು ಕುಲಸಚಿವ (ಪರೀಕ್ಷಾಂಗ) ರವರು ಸಲ್ಲಿಸಿದ್ದು, (ಅನುಬಂಧ–2), ಈ ಸಂಬಂಧ Digital Evaluation ಅನ್ನು ವಿವಿಯಲ್ಲಿ ಮುಂದುವರಿಸುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲು ಮಾನ್ಯ ಶೈಕ್ಷಣಿಕ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ.

*****

**ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನ ಈ ಕೆಳಕಂಡಂತಿದೆ:**

**ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Digital Evaluation ಅನ್ನು ಮುಂದುವರಿಸುವ ದಿನಾಂಕ: 23.07.2026 ರಂದು ನಡೆದ ಸಮಿತಿ ಸಭೆಯ ತೀರ್ಮಾನಕ್ಕೆ ಅನುಮೋದನೆ ನೀಡಲಾಯಿತು. ಮುಂದುವರೆದು,ಹೊಸದಾಗಿ 3 ವರ್ಷದ ಅವಧಿಗೆ Digital Evaluation ತಂತ್ರಾಂಶದ Subscription (ಅವಧಿ ಪೂರ್ಣಗೊಳ್ಳುವ ಸಾಲಿನಲ್ಲಿ ಸಂಬಂಧಿತ ಸಾಲಿನ ಪರೀಕ್ಷಾ ಮೌಲ್ಯಮಾಪನ ಕಾರ್ಯ ಪೂರ್ಣಗೊಳ್ಳುವವರೆಗೆ ಸೇವೆ ಒದಗಿಸುವುದು ಎಂಬ ಷರತ್ತು ದಾಖಲಿಸಿ) ಪಡೆಯಲು ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದು ಎಂದು ತೀರ್ಮಾನಿಸಲಾಯಿತು.**

ಕುಲಪತಿಗಳು ಮಾತನಾಡಿ, ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Digital Evaluation ನ ಅವಧಿಯು ದಿನಾಂಕ: 18.07.2026ಕ್ಕೆ ಪೂರ್ಣಗೊಳ್ಳುವ ಮುಂಚಿತವಾಗಿ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ಕ್ರಮವಹಿಸಬೇಕಾಗಿತ್ತು. ಆದರೆ ಅವರು ಮಾಡದೇ ಇರುವುದು ಸಮಂಜಸವಲ್ಲವೆಂದು ತಿಳಿಸಿದರು.

ಮುಂದುವರೆದು, ಈ Digital Evaluation ಮಾಡುವುದರಿಂದ ವಿಶ್ವವಿದ್ಯಾನಿಲಯದಲ್ಲಿ ವಾರ್ಷಿಕ ಎರಡು ಆವೃತ್ತಿಯಲ್ಲಿ ಪ್ರವೇಶಾತಿಯನ್ನು ಹಾಗೂ ಎರಡು ಆವೃತ್ತಿಯಲ್ಲಿ ಪರೀಕ್ಷೆಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆದ ನಿಗದಿತ ಸಮಯದೊಳಗೆ ಫಲಿತಾಂಶಗಳನ್ನು ನೀಡಲು Digital Evaluation ಮಾಡುವುದರಿಂದ ಅವಕಾಶವಾಗುತ್ತದೆ. ವಿದ್ಯಾರ್ಥಿಗಳಿಗೆ ಸ್ನಾತಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿದ್ದು, ಅವರುಗಳು ಪ್ರಥಮ ವರ್ಷದಿಂದ ದ್ವಿತೀಯ ವರ್ಷದ ಪ್ರವೇಶಾತಿ ಪಡೆದು ಮತ್ತು ಪರೀಕ್ಷೆ ನಡೆದು ಫಲಿತಾಂಶ ನೀಡಿದರೆ ಮತ್ತೆ ವಿದ್ಯಾರ್ಥಿಗಳು ತೃತೀಯ ಸಾಲಿನ ಪ್ರವೇಶಾತಿ ಮತ್ತು ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಈ Digital Evaluation ಗಳಿಂದ ಸ್ನಾತಕ ಕಾರ್ಯಕ್ರಮಗಳಲ್ಲಿ ಉತ್ತೀರ್ಣರಾಗಿ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆಯುವವರ ಸಂಖ್ಯೆಯು ಹೆಚ್ಚಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯಕ್ಕೂ ಅನುಕೂಲವಾಗುತ್ತದೆ, ಜೊತೆಗೆ ತಂತ್ರಜ್ಞಾನಗಳು ಕೂಡ ತುಂಬಾ ಬದಲಾಗುತ್ತಿರುವುದರಿಂದ, ಇಂದಿನ ನಮ್ಮ ವಿಶ್ವವಿದ್ಯಾನಿಲಯದ ಅವಶ್ಯಕತೆಗೆ ತಕ್ಕಂತೆ ಸಾಫ್ಟ್‌ವೇರ್‌ಗಳನ್ನು

**ಕುಲಪತಿಗಳು** **ಕುಲಸಚಿವರು**

ಬದಲಾಯಿಸಿಕೊಳ್ಳಬಹುದೆಂದು ತಿಳಿಸಿ, ನಾವು Digital Evaluation ಗಳನ್ನು ಒಟ್ಟಾಗಿ ಬೇರೆ ಬೇರೆ ಪ್ರಾದೇಶಿಕ ಕೇಂದ್ರಗಳಲ್ಲಿ ಮಾಡುವ ಬಗ್ಗೆ ತಂತ್ರಾಂಶವನ್ನು ಗ್ರಾಹಕೀಕರಣಗೊಳಿಸುವಂತೆ ಮಾಡುವ ಅವಶ್ಯಕತೆಯಿದೆ. ಇದರಿಂದ ಮೌಲ್ಯಮಾಪಕರಿಗೆ ನೀಡುವ ಭತ್ಯೆ ಹಾಗು ವೆಚ್ಚಗಳನ್ನು ಕಡಿಮೆ ಮಾಡಬಹುದು. ಈ ರೀತಿ ಮಾಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಸದರಿ ವಿಷಯಕ್ಕೆ ಎಲ್ಲಾ ಸದಸ್ಯರುಗಳು ಸಹಮತ ವ್ಯಕ್ತಪಡಿಸಿದರು.

**ತೀರ್ಮಾನ :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಅಳವಡಿಸಿಕೊಳ್ಳಲಾಗಿರುವ Digital Evaluation ಅನ್ನು ಮುಂದುವರಿಸುವ ಸಂಬಂಧ ಹೊಸದಾಗಿ 2 ವರ್ಷದ ಅವಧಿಗೆ Digital Evaluation ತಂತ್ರಾಂಶದ ಜೊತೆಗೆ ಅಗತ್ಯವಿರುವ ಇತ್ತೀಚಿನ ನವೀಕರಣ Modules (ಅವಧಿ ಪೂರ್ಣಗೊಳ್ಳುವ ಸಾಲಿನಲ್ಲಿ ಸಂಬಂಧಿತ ಸಾಲಿನ ಪರೀಕ್ಷಾ ಮೌಲ್ಯಮಾಪನ ಕಾರ್ಯಪೂರ್ಣಗೊಳ್ಳುವವರೆಗೆ ಸೇವೆಗಳನ್ನು ಒದಗಿಸಬೇಕು ಎಂಬ ಷರತ್ತನ್ನ ದಾಖಲಿಸಿ) ಪಡೆಯಲು ನಿಯಮಾನುಸಾರ ದರಪಟ್ಟಿ ಕರೆದು ಪ್ರಕ್ರಿಯೆಗಳನ್ನು ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ವ್ಯವಸ್ಥಾಪನ ಮಂಡಳಿ ಸಭೆಗೆ 10 ದಿನಗಳ ಮುಂಚಿತವಾಗಿಯೇ ಶೈಕ್ಷಣಿಕ ಮತ್ತು ಹಣಕಾಸು ಸಭೆಯನ್ನು ನಡೆಸಿ ಅದರ ನಡಾವಳಿಗಳನ್ನು ವ್ಯವಸ್ಥಾಪನ ಮಂಡಳಿ ಸಭೆಗೆ ಕಳುಹಿಸುವ ವಿಷಯಗಳಲ್ಲೇ ಮುಂಚಿತವಾಗಿ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದರೆ ಅವುಗಳ ಸಾಧಕ-ಬಾಧಕಗಳನ್ನು ಪರಾಮರ್ಶಿಸಲು ಅನುಕೂಲವಾಗುತ್ತದೆಂದು ಎಲ್ಲಾ ಸದಸ್ಯರುಗಳು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಇನ್ನು ಮುಂದೆ ಈ ಬಗ್ಗೆ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

**ತೀರ್ಮಾನ :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಅನುಕೂಲವಾಗುವಂತೆ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುನ್ನಡೆಸುತ್ತಿರುವುದರಿಂದ ಶೈಕ್ಷಣಿಕ ಮಂಡಳಿಯ ತೀರ್ಮಾನಗಳಲ್ಲಿ ಕೆಲವು ಬದಲಾವಣೆಗಳಾಗಿದ್ದು, ಅವುಗಳನ್ನು ಅಳವಡಿಸಿಕೊಳ್ಳುವುದು. ಉಳಿದಂತೆ 41ನೇ ವಿಶೇಷ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.**

#####

**ಸದಸ್ಯರಾದ ಡಾ. ಮಹೇಶ್ .ಎಸ್. ರವರು ಮಂಡಿಸಿದ ವಿಷಯ:**

4) **ವಿಷಯ:** **ದಿನಾಂಕ: 10.06.2026 ಮತ್ತು ದಿನಾಂಕ: 02.08.2026ರಂದು ಲಿಖಿತವಾಗಿ ಮನವಿಯನ್ನು ಸಲ್ಲಿಸಿರುವ ಬಗ್ಗೆ.**

– * –

ದಿನಾಂಕ: 18-04-2026ರಂದು ನಡೆದ 185ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಕೈಗೊಂಡ ತೀರ್ಮಾನಗಳು ವಿಡಿಯೋ ರೆಕಾರ್ಡ್ ಆಗಿದ್ದು, ಅವುಗಳನ್ನು ನೀಡಬೇಕೆಂದು ಡಾ. ಮಹೇಶ್ .ಎಸ್ ರವರು ಕೋರಿದ್ದರು ಸಹ ಅದನ್ನು ಇದುವರೆವಿಗೂ ನೀಡಿರುವುದಿಲ್ಲ. ಇದಕ್ಕೆ ಕಾರಣವೇನೆಂದರು ಸಭೆಯಲ್ಲಿ ಕೇಳಿದರು.

*****

ಕುಲಪತಿಗಳು ಮಾತನಾಡಿ ಹಿಂದಿನ ವ್ಯವಸ್ಥಾಪನ ಸಭೆಗಳಲ್ಲಿ ಯಾವ ತೀತಿಯಲ್ಲಿ ತೀರ್ಮಾನಗಳಾಗಿದ್ದವು ಎಂಬ ಬಗ್ಗೆ ವಿವರಗಳು ನನಗೆ ತಿಳಿದಿರುವುದಿಲ್ಲ. ಅವುಗಳೆಲ್ಲವು ಕುಲಸಚಿವರಿಗೆ ತಿಳಿದಿರುತ್ತದೆಂದು ತಿಳಿಸಿದರು.

ಕುಲಪತಿಗಳು

ಕುಲಸಚಿವರು

ಕುಲಸಚಿವರು ಮಾತನಾಡಿ ದಿನಾಂಕ: 18-04-2026ರಂದು ನಡೆದ 185ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಕೈಗೊಂಡ ತೀರ್ಮಾನದ ಬಗ್ಗೆ ತಿಳಿದುಕೊಳ್ಳಲು ಅವರು ಕೋರಿರುವ ವಿಡಿಯೋ ರೆಕಾರ್ಡ್‌ಗಳನ್ನು ನೀಡಲು ಮುಂದಿನ ಕ್ರಮವಹಿಸಲಾಗುವುದೆಂದು ತಿಳಿಸಿದರು.

ತೀರ್ಮಾನ : **ವ್ಯವಸ್ಥಾಪನ ಮಂಡಳಿ ಸದಸ್ಯರಿಗೆ Video copyಯನ್ನು ಕೊಡಲು ತೀರ್ಮಾನಿಸಲಾಯಿತು.**

#####

5) ವಿಷಯ: **ದಿನಾಂಕ: 30.01.2026 ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 64ನೇ ವಿಶೇಷ ಸಭೆಯ ನಡಾವಳಿಯನ್ನು ಇದುವರೆವಿಗೂ ನೀಡಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.**

– * –

ಡಾ. ಮಹೇಶ್ .ಎಸ್ ರವರು ಮಾತನಾಡಿ, ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಯ 64ನೇ ವಿಶೇಷ ಸಭೆಯಲ್ಲಿ ಮಂಡಿಸಿದ ವಿಷಯಗಳ ಅನುಸಾರ ಕೈಗೊಂಡ ತೀರ್ಮಾನಗಳನ್ನು ತಿಳಿದುಕೊಳ್ಳಲು ಏಳು ತಿಂಗಳುಗಳಿಗಿಂತ ಹೆಚ್ಚು ದಿನಗಳಾಗಿದ್ದರೂ ಸಹ ಇದುವರೆವಿಗೂ ನಡಾವಳಿಯನ್ನು ಯಾರಿಗೂ ನೀಡಿರುವುದಿಲ್ಲ. ಇದು ಸರಿಯೇ ? ಎಂದು ಕೇಳಿದರು.

ಇತರೆ ಸದಸ್ಯರುಗಳಾದ ಡಾ. ಬಿ.ಜೆ. ಪಾಟೀಲ್, ಶ್ರೀ. ರಮೇಶ್ ಗುಬ್ಬೇವಾಡ, ಶ್ರೀಮತಿ, ಮಾಲತಿ .ಟಿ, ಶ್ರೀಮತಿ. ಪ್ರಾಚಿ ಗೌಡ ಹಾಗೂ ಶ್ರೀ. ಮಂಜು .ಆರ್ ರವರುಗಳು ಸಹ ನಮ್ಮಗಳಿಗೂ ಈ ಸಭೆಯ ನಡಾವಳಿಯನ್ನು ಕಳುಹಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ಕುಲಸಚಿವರನ್ನು ಕುಲಪತಿಗಳು ಕೇಳಿದಾಗ ಮುಂದಿನ ಸಭೆಯಲ್ಲಿ ಕೊಡುವುದಾಗಿ ತಿಳಿಸಿದರು.

ಕುಲಪತಿಗಳು ಮಾತನಾಡಿ ಕೂಡಲೇ ಅವುಗಳನ್ನು ಸಂಬಂಧಪಟ್ಟ ಎಲ್ಲಾ ಸದಸ್ಯರಿಗೂ ಕಳುಹಿಸಲು ತಿಳಿಸಿದರು.

ತೀರ್ಮಾನ : **64ನೇ ವಿಶೇಷ ವ್ಯವಸ್ಥಾಪನ ಮಂಡಳಿ ಸಭೆಯ ನಡಾವಳಿಯನ್ನು ಎಲ್ಲಾ ಸದಸ್ಯರುಗಳಿಗೆ ಮುಂದಿನ ಸಭೆಯಲ್ಲಿ ನೀಡಲಾಗುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

6) ವಿಷಯ: **ಶ್ರೀ. ರೂಪಾಸಿಂಗ್ ಚೌವ್ಹಾಣ್, ಡಿ.ಇ.ಓ, ತಾತ್ಕಾಲಿಕ ನೌಕರ ಕರಾಮುವಿ ಪ್ರಾದೇಶಿಕ ಕೇಂದ್ರ, ಬಾಗಲಕೋಟೆ ಇವರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಬಗ್ಗೆ.**

– * –

ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ವಿಶ್ವವಿದ್ಯಾನಿಲಯದ ಬಾಗಲಕೋಟೆ ಪ್ರಾದೇಶಿಕ ಕೇಂದ್ರದಲ್ಲಿ ಡಿ.ಇ.ಓ, ತಾತ್ಕಾಲಿಕ ನೌಕರರಾಗಿ ಶ್ರೀ. ರೂಪಾಸಿಂಗ್ ಚೌವ್ಹಾಣ್ ರವರು ಬಾಗಲಕೋಟೆ ಪ್ರಾದೇಶಿಕ ಕೇಂದ್ರದಲ್ಲೇ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನವನಗರ, ಬಾಗಲಕೋಟೆ ಇಲ್ಲಿ ಪದವಿ ಕೋರ್ಸುಗಳ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಅನುಮತಿಯನ್ನೇ ಪಡೆಯದೆ ಅಲ್ಲಿಗೆ ಏಕಾಏಕಿ ಒಳಗೆ ನುಗ್ಗಿ ಕರ್ತವ್ಯದಲ್ಲಿರುವ ಸಿಬ್ಬಂದಿಗೆ ಧಮಕಿ ಹಾಕಿ ಗಾಬರಿಗೊಳಿಸಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದ ಸಂಬಂಧ ಅವರ ಮೇಲೆ ಎಫ್.ಐ.ಆರ್ ದಾಖಲಿಸಿರುತ್ತಾರೆ. ಎಫ್.ಐ.ಆರ್ ದಾಖಲಿಸಿದ ನಂತರ ಅವರು ತಪ್ಪಿತಸ್ತನಾಗುವುದಿಲ್ಲ. ಇವರು ಆರೋಪಿ ಎಂದು ಗುರುತಿಸಿದ್ದರೇ ಮಾತ್ರ ಅವರನ್ನು ಕಚೇರಿಯಿಂದ ಹೊರಗಿಡಬಹುದು. ಆದರೇ ಅವರನ್ನು ತಪ್ಪಿತಸ್ಥನೆಂದು ಕಚೇರಿ ಆದೇಶ ಸಂಖ್ಯೆ:

Gnana prakash

ಕುಲಪತಿಗಳು

ಕುಲಸಚಿವರು

ಕರಾಮುವಿ/ಆವಿ/ಸಿಬ್ಬಂದಿ-1/1184/2026-27, ದಿನಾಂಕ: 31.07.2026 ರ ಪ್ರಕಾರ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಜಾರಿಗೆ ಬಂದಂತೆ ಬಿಡುಗಡೆಗೊಳಿಸಿ ಆದೇಶಿದೆ ಎಂದು ತಿಳಿಸಿರುತ್ತೀರಿ.

ಸದರಿ ನೌಕರರು ತಾತ್ಕಾಲಿಕ ನೌಕರರಾಗಿದ್ದು, ಈ ತಾತ್ಕಾಲಿಕ ನೌಕರರುಗಳಿಗೆ ಅನಾವಶ್ಯಕವಾಗಿ ಒಳನುಗ್ಗಿದಾಗ ಅವರಿಗೆ ಕಚೇರಿಯ ನಿಯಮಗಳೇನು ಎಂಬುದನ್ನು ತಿಳಿಸಬೇಕು. ಅವರುಗಳಿಗೆ ಕಚೇರಿ ನಿಯಮಗಳು ತಿಳಿಯದಿದ್ದಲ್ಲಿ ಆ ರೀತಿ ಆಗುವುದು ಸಹಜವಾಗಿರುತ್ತದೆ. ಅದನ್ನು ಹೊರತುಪಡಿಸಿ ಅವರ ಮೇಲೆ ಎಫ್.ಐ.ಆರ್ ದಾಖಲಿಸಿರುವುದು ಸಮಂಜಸವಲ್ಲ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರನು ಪಡೆಯುವ ಸಂಬಳಕ್ಕೆ ಬಾಗಲಕೋಟೆ ಪ್ರಾದೇಶಿಕ ಕೇಂದ್ರದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವುದರಿಂದ ಈ ನೌಕರರು ಬಡತನದಿಂದ ಇದ್ದು, ಇವರನ್ನು ಕರ್ತವ್ಯದಿಂದ ಹೊರ ಹಾಕಿರುವುದು ಸರಿ ಇಲ್ಲ. ಇದನ್ನೇ ನಂಬಿ ಜೀವನ ಮಾಡುತ್ತಿರುವವರಿಗೆ ಹೊರೆಯಾಗುತ್ತದೆಂದು ಡಾ. ಮಹೇಶ್ .ಎಸ್ ರವರು ಸಭೆಗೆ ತಿಳಿಸಿದರು.

ಇಂತಹ ನೌಕರರುಗಳ ಮೇಲೆ ಕರುಣೆ ತೋರಿಸಿ, ಈಗ ಹೊರಡಿಸಿರುವ ಬಿಡುಗಡೆಗೊಳಿಸಿ ಆದೇಶವನ್ನು ಹಿಂಪಡೆದು ಅವರಿಗೆ ಕಚೇರಿ ಕರ್ತವ್ಯದ ನಿಯಮಗಳನ್ನು ತಿಳಿಸಿ, ಮತ್ತೆ ಕರ್ತವ್ಯದ ಮೇಲೆ ವರದಿ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು ಸೂಕ್ತವೆಂದು ಎಲ್ಲಾ ಸದಸ್ಯರುಗಳು ಸಭೆಯಲ್ಲಿ ಸಹಮತ ವ್ಯಕ್ತಪಡಿಸಿದರು.

ಕುಲಪತಿಗಳು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

*****

**ತೀರ್ಮಾನ :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಸದರಿ ವಿಷಯದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.**

#####

7) **ವಿಷಯ:** **ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಪದೋನ್ನತಿಯನ್ನು ನೀಡುವ ಬಗ್ಗೆ.**

– * –

ಡಾ. ಮಹೇಶ್ .ಎಸ್ ರವರು ಮಾತನಾಡಿ ಕರಾಮುವಿಯಲ್ಲಿ 'ಡಿ' ಗ್ರೂಪ್ ನೌಕರರಿಂದ ದ್ವಿತೀಯ ದರ್ಜೆ ಗುಮಾಸ್ತ, ಪ್ರಥಮ ದರ್ಜೆ ಗುಮಾಸ್ತರಿಂದ ಸೀನಿಯರ್ ಅಸಿಸ್ಟೆಂಟ್, ಸೀನಿಯರ್ ಅಸಿಸ್ಟೆಂಟ್‌ನಿಂದ ಅಧೀಕ್ಷಕ, ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆಗೆ ಪರಿನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಪರಿನಿಯಮಗಳು ಇದುವರೆವಿಗೂ ಮಾನ್ಯ ಘನತೆವೆತ್ತ ಕಲಾಧಿಪತಿಗಳಿಂದ ಅಂಕಿತವಾಗಿರುವುದಿಲ್ಲ. ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ ಈಗಾಗಲೇ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಪದೋನ್ನತಿ ನೀಡಿರುವ ರೀತ್ಯಾ ದ್ವಿತೀಯ ದರ್ಜೆ ಸಹಾಯಕರಿಂದ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಪದೋನ್ನತಿಯನ್ನು ನೀಡಿರುವುದಿಲ್ಲ. ಇದಕ್ಕೆ ಕಾರಣವೇನು? ಎಂಬುದು ತಿಳಿದು ಬಂದಿರುವುದಿಲ್ಲ, ಕೆಲವರು ವಯೋಸಹಜ ನಿವೃತ್ತಿ ಹಂತದಲ್ಲಿದ್ದು, ಒಂದೇ ಹುದ್ದೆಯಲ್ಲಿ ಹಲವಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಂದು ತಿಳಿಸಿದರು.

Amana prahas

**ಕುಲಪತಿಗಳು** **ಕುಲಸಚಿವರು**

ಮುಂದುವರೆದು, ಈಗಾಗಲೇ ಹಿಂದಿನ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ಅದರಲ್ಲಿ ವಿಶ್ವವಿದ್ಯಾನಿಲಯದಿಂದ ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕೆ ಕಳುಹಿಸಲಾಗಿದ್ದು, ಸದರಿ ಪರಿನಿಯಮಗಳು ಮಾನ್ಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತವಾಗಿರುವುದಿಲ್ಲ. ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ ಈಗಾಗಲೇ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಹಲವಾರು ಪದನಾಮಗಳ ಒಟ್ಟು 82 ನೌಕರರುಗಳಿಗೆ ಸ್ವತಂತ್ರ ಪ್ರಭಾರದ ಅಡಿಯಲ್ಲಿ ನೀಡಿರುವ ಪದೋನ್ನತಿ ರೀತ್ಯಾ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಪದೋನ್ನತಿ ನೀಡಬೇಕೆಂದು ಸಭೆಗೆ ತಿಳಿಸಿದರು.

ವಿಶ್ವವಿದ್ಯಾನಿಲಯದ ಖಾಯಂ ನೌಕರರೆಲ್ಲರನ್ನು ಒಂದೇ ಸಮಾನವಾಗಿ ನೋಡಬೇಕು. ಕೆಲವು ಹುದ್ದೆಗಳಿಗೆ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಪರಿನಿಯಮಗಳು ಅನುಮೋದನೆ ಆಗದಿದ್ದರೂ ಪ್ರಥಮ ದರ್ಜೆ ಗುಮಾಸ್ತ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗಳವರೆಗೆ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಪದೋನ್ನತಿ ನೀಡಲಾಗಿದ್ದು, ಅದೇ ರೀತಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ ಸ್ವತಂತ್ರ ಪ್ರಭಾರದ ಅಡಿಯಲ್ಲಿ ಪದೋನ್ನತಿ ನೀಡಬೇಕೆಂದು ತಿಳಿಸಿದರು.

*****

**<u>ತೀರ್ಮಾನ</u> :** **ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

8) **<u>ವಿಷಯ:</u>** **ಗಣಕಯಂತ್ರ ವಿಜ್ಞಾನ ವಿಷಯವಾಗಿ ಯೋಜನಾ ವರದಿಗಳ (Project Report) ಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಪಡೆಯುವ ಬಗ್ಗೆ.**

– * –

ಡಾ. ಮಹೇಶ್ .ಎಸ್ ರವರು ಮಾತನಾಡಿ, ಗಣಕಯಂತ್ರ ವಿಜ್ಞಾನ ವಿಷಯದ ಆಧ್ಯಾಪಕರು ಈಗಾಗಲೇ ಅಮಾನತ್ತಿನಲ್ಲಿದ್ದು, ಸದರಿಯವರ ಬಗ್ಗೆ ವಿಚಾರಣೆಯು ನಡೆಯುತ್ತಿದ್ದು, ಆ ಅಧ್ಯಾಪಕರಿಗೆ ಸಂಬಂಧಪಟ್ಟ ಯೋಜನಾ ವರದಿಗಳ (Project Report) ಗಳನ್ನು ಅವರ ಅನುಪಸ್ಥಿತಿಯಲ್ಲಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಪಡೆದುಕೊಳ್ಳುವುದು ಸೂಕ್ತವಾಗಿರುತ್ತದೆ. ಏಕೆಂದರೆ ವಿದ್ಯಾರ್ಥಿಗಳು ಈ ವಿಷಯದ ಬಗ್ಗೆ ಅನಾವಶ್ಯಕವಾಗಿ ವಿಶ್ವವಿದ್ಯಾನಿಲಯಕ್ಕೆ ತಿರುಗುವುದು ಸಮಸ್ಯೆಯಾಗುತ್ತದೆ. ಇವುಗಳು ಆಗಬಾರದೆಂದು ಈಗಿನ ವಿಭಾಗದ ಮುಖ್ಯಸ್ಥರುಗಳೇ ಆ ವಿದ್ಯಾರ್ಥಿಗಳ ಯೋಜನಾ ವರದಿಗಳ (Project Report) ಗಳನ್ನು ಪಡೆಯುವುದು ಸೂಕ್ತವೆಂದು ತಿಳಿಸಿದರು.

*****

**<u>ತೀರ್ಮಾನ</u> :** **ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ತೊಂದರೆಗಳಾಗದ ರೀತಿಯಲ್ಲಿ ಆ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಅಧ್ಯಾಪಕರು ಅಮಾನತ್ತಿನಲ್ಲಿದ್ದರೆ, ಅಂತಹ ವಿದ್ಯಾರ್ಥಿಗಳ ಯೋಜನಾ ವರದಿಗಳ (Project Report) ಗಳನ್ನು ಸಂಬಂಧಪಟ್ಟ ಇಂದಿನ ವಿಭಾಗದ ಮುಖ್ಯಸ್ಥರುಗಳು ಪಡೆದು ಕಾರ್ಯನಿರ್ವಹಿಸುವುದು ಸೂಕ್ತವೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 186ನೇ ಸಾಮಾನ್ಯ ಸಭೆಗೆ ಮಾನ್ಯ ಸದಸ್ಯರುಗಳು ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ **ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರುಗಳಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.**

**ಕುಲಪತಿಗಳು** **ಕುಲಸಚಿವರು**